ಕಾನೂನುಬಾಹಿರ ಪ್ರಾಚ್ಯವಸ್ತು ಸಂಗ್ರಹಾಲಯದಿಂದ ಬರತಕ್ಕ ಹಣ ಸರ್ಕಾರಕ್ಕೆ ಬರಬೇಕು. ವೈಯಕ್ತಿಕವಾಗಿ ಆ ಹಣ ಶ್ರೀಕಂಠದತ್ತ ಒಡೆಯರ್‌ರವರಿಗೆ ಹೋಗಲಿಕ್ಕೆ ಸಾಧ್ಯವಿಲ್ಲ. ಆದುದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈಗ ಅಲ್ಲಿ ಏನು ವಸ್ತು ಸಂಗ್ರಹಾಲಯವನ್ನು ನಡೆಸುತ್ತಿದ್ದಾರೆ ಅದನ್ನು ನಿಲ್ಲಿಸಬೇಕು.

(ಗೊಂದಲ)

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ರಾಜವಂಶದ ಕಥೆ ಮುಗಿದಿರುವುದರಿಂದ, ಅವರು ವೈಯಕ್ತಿಕವಾಗಿ ಖಾಸಗೀ ಸಂಗ್ರಹಾಲಯವನ್ನು ಪ್ರಾರಂಭಿಸಲಿಕ್ಕೆ ಬರುವುದಿಲ್ಲ. ಅವೆಲ್ಲವೂ ಸರ್ಕಾರಕ್ಕೆ ಸೇರಿದಂಥಾದ್ದು. ಸರ್ಕಾರಕ್ಕೆ ಸೇರಬೇಕಾದಂಥಾದ್ದನ್ನು ಅವರು ಏನಾದರೂ ಪಡೆದುಕೊಂಡಿದ್ದರೆ, ಅದನ್ನು ತಡೆಗಟ್ಟಬೇಕು ಮತ್ತೆ ಈ ವಸ್ತು ಸಂಗ್ರಹಾಲಯದಲ್ಲಿ ವಸೂಲು ಆಗುವಂಥ ಸಾವಿರಾರು ರೂಪಾಯಿಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಇವೆಲ್ಲವೂ ಕೂಡ ಕಾನೂನು ವ್ಯಾಪ್ತಿಯಲ್ಲಿ ಬರುತ್ತವೆ. ಕಾನೂನು ವ್ಯಾಪ್ತಿಯಲ್ಲಿ ಬಂದರೆ ಏನು ಮಾಡಬೇಕು, ಬರದೇ ಇದ್ದರೆ ಏನು ಮಾಡಬೇಕು ಎಂದು ಸರ್ಕಾರದ ಪರಿಶೀಲನೆಯಲ್ಲಿದೆ ಮುಂದಿನ ಕ್ರಮದ ಬಗ್ಗೆ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.— ಇವತ್ತಿನ ಪಟ್ಟಿಯಲ್ಲಿದ್ದ ನಿಯಮ ೩೩೪ರ ಅಡಿಯಲ್ಲಿದ್ದ ಎಲ್ಲಾ ವಿಷಯಗಳನ್ನೂ ಮುಂದಕ್ಕೆ ಹಾಕಿದ್ದೇನೆ.

ಶ್ರೀ ಎಂ. ರಾಮಪ್ಪ.— ಸ್ವಾಮಿ, ತುಂಗಭದ್ರಾ ನೀರಿನ ಬಗ್ಗೆ ನಾನು ೩೩೪ರ ನಿಯಮದ ಪ್ರಕಾರ ನೋಟೀಸನ್ನು ತಮಗೆ ಕಳುಹಿಸಿಕೊಟ್ಟಿದ್ದೆ. ಅಲ್ಲಿ ರೈತರ ಬೆಳೆ ಒಣಗಿಹೋಗುತ್ತಿದೆ.

ಶ್ರೀ ಬಿ. ಲಕ್ಕಪ್ಪ.— ಸ್ವಾಮಿ, ಎಕ್ಸೈಸ್ ಮೇಲೆ ನಾನು ಪ್ರಶ್ನೆಯನ್ನು ಕೇಳಿದಾಗ ಅದನ್ನು ೨೯ನೇ ತಾರೀಖು ಹಾಕುತ್ತೇನೆಂದು ಹೇಳಿದ್ದಿರಿ. ಆದರೆ ಇವತ್ತೂ ಕೂಡ ಅದು ಬರಲಿಲ್ಲ...

ಅಧ್ಯಕ್ಷರು.— ನಾಳೆ ಹಾಕುತ್ತೇನೆ.

ಶ್ರೀ ಬಿ. ಲಕ್ಕಪ್ಪ.— ನಾಳೆ ಒಂದೇ ದಿವಸ ಅಧಿವೇಶನ ಇರುವುದು. ನಾಳೆ ಬರದಿದ್ದರೆ ಅಲ್ಲಿಗೆ ಮುಗಿದೇ ಹೋಯಿತು.

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ. ಈಗ ಮಾನ್ಯ ಬಸವಲಿಂಗಪ್ಪನವರು ಚರ್ಚೆಯನ್ನು ಪ್ರಾರಂಭ ಮಾಡಲಿ.

ವಿತ್ತೀಯ ಕಾರ್ಯ ಕಲಾಪಗಳು
೧೯೮೮–೮೯ರ ಆಯವ್ಯಯದ ಮೇಲಿನ ಚರ್ಚೆ

† ಶ್ರೀ ಬಸವಲಿಂಗಪ್ಪ (ಯಲಹಂಕ).— ಮಾನ್ಯ ಅಧ್ಯಕ್ಷರೆ, ಈ ಆಯವ್ಯಯ ಪಟ್ಟಿಯನ್ನು ಮಾನ್ಯ ಅರ್ಥಮಂತ್ರಿಗಳು ಈ ಸದನದ ಮುಂದಿಟ್ಟಿದ್ದಾರೆ. ಈ ಆಯವ್ಯಯ ಪಟ್ಟಿ ಏನಿದೆ ಇದನ್ನು ನಾನೂ ಮತ್ತು ನಮ್ಮ ಪಕ್ಷದವರೂ ವಿರೋಧ ಮಾಡುತ್ತೇವೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಅರ್ಥ ಮಂತ್ರಿಗಳಾಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಈಗ ಈ ಬಜೆಟ್‌ನ್ನು ಸದನದ ಮುಂದೆ ಏನು ಇಟ್ಟಿದ್ದಾರೆ ಇದು ಕಠಿನ ಬಜೆಟ್. ಈ ಕಠಿನ ಬಜೆಟನ್ನು ಈ ಸದನದ ಮುಂದಿಡಬೇಕಾದರೆ ಯಾವಾಗ ಇದನ್ನು ಇಡಬೇಕು, ಯಾವಾಗ ಇದನ್ನು ಇಡಬಾರದು ಎಂಬುದನ್ನು ಅವರು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಯೋಚನೆ ಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಈ ಬಜೆಟ್ ಈಗ ಇಡತಕ್ಕ ಬಜೆಟ್ ಅಲ್ಲ. ಇಂಥ ಒಂದು ಕಂತಿನ ಬಜೆಟನ್ನು ಇಡುವ ಸಂದರ್ಭ ಎಂದರೆ ಹೊಸದಾಗಿ ರಾಜ್ಯದಲ್ಲಿ ಚುನಾವಣೆ ಆಗಿ ಸರ್ಕಾರವನ್ನು ರಚನೆ ಮಾಡಿದಾಗ, ಅಥವಾ ಬಜೆಟ್ ತಯಾರಿಸಲು ಪುರುಸೊತ್ತು ಯಾವಾಗ ಇರುವು ದಿಲ್ಲ ಅಂಥ ಸಂದರ್ಭದಲ್ಲಿ ಇಡತಕ್ಕದ್ದು. ಆಗ ನಾವು ಅದಕ್ಕೆ ಮನ್ನಣೆಯನ್ನು ಕೊಡುತ್ತೇವೆ. ಆದರೆ ಇವರು ೫ ವರ್ಷ ಆಡಳಿತ ನಡೆಸಿದ ಮೇಲೂ ಇಂಥ ಒಂದು ಕಂತಿನ ಆಯವ್ಯಯವನ್ನು ಇಟ್ಟಿರತಕ್ಕದ್ದು ಸರ್ವಸಮ್ಮತವಲ್ಲ. ಇದು ಅವರ ಮುತ್ಸದ್ದಿತನಕ್ಕೆ ವಿರೋಧವಾದುದೆಂದು ನಾನು ಹೇಳ ಬಯಸು ತ್ತೇನೆ. ೮೭-೮೮ರಲ್ಲಿ ಸಂಪೂರ್ಣ ಪ್ರಮಾಣದ ಬಜೆಟನ್ನು ಇಟ್ಟರು. ಅದರ ಹಿಂದಿನ ವರ್ಷ ಅಂದರೆ ೮೬-೮೭ರಲ್ಲಿ ಮತ್ತೆ ಕಂತಿನ ಬಜೆಟನ್ನು ಮಾಡಿದರು. ಇದನ್ನು ನಾವು ಹೀಗೆಯೇ ಮಾಡುತ್ತೇವೆಂದು ಹಠ ಹಿಡಿದು ಮಾಡಿದರು. ಆದ್ದರಿಂದ ನಾವೂ ಸುಮ್ಮನಾದೆವು. ಈಗ ೮೮-೮೯ನೇ ಸಾಲಿನ ಆಯವ್ಯಯ ಪಟ್ಟಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಈರೀತಿ ಇಡುವುದಕ್ಕೆ ಇವರಿಗೆ ಹಕ್ಕು ಇದೆಯೆ ? ಎಂದು ನಾನು ಮೊದಲಿಗೆ ಅವರನ್ನು ಪ್ರಶ್ನೆ ಮಾಡುತ್ತೇನೆ. ಒಂದುವೇಳೆ ಹಕ್ಕು ಇದ್ದರೂ ಕೂಡ ರಾಜ್ಯಾಂಗದ ೨೧೨ನೇ ಕಲಂನ ಪ್ರಕಾರ ಇದು ಅವರ ಮುತ್ಸದ್ದಿತನಕ್ಕೆ ವಿರುದ್ಧವಾದುದು, ಅಥವಾ ಇವರು ತಮಗೆ ಬೇಕಾದ ರೀತಿಯಲ್ಲಿ ಮಾಡುತ್ತಿದ್ದಾರೆ ಅಥವಾ ಈ ಕರ್ನಾಟಕ ರಾಜ್ಯದ ಹಣಕಾಸಿನ ವ್ಯವಸ್ಥೆ ಏನಿದೆ ಅದನ್ನು ಸರಿಯಾಗಿ ಸರಿದೂಗಿಸಿಕೊಂಡು ಹೋಗುತ್ತಿಲ್ಲವೆಂದು ನಾನು ಇವರಮೇಲೆ ಆಪಾದನೆ ಮಾಡ ಬೇಕಾಗುತ್ತದೆ.

ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಪಿಕ್ಚರ್ ಆಫ್ ಕರ್ನಾಟಕ ಬಜೆಟ್ ಎಂದು ಏನಿದೆ ಇದರ ಬಗ್ಗೆ ನಾನು ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಇವರು ಬಹಳ ಕಷ್ಟಪಟ್ಟು ಡಿಸೆಂಬರ್ ತಿಂಗಳವರೆಗೆ ಖರ್ಚು ಮಾಡಿರತಕ್ಕ ಹಣದ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಇದರ ಜೊತೆಗೆ ಕಳೆದಸಾರಿ ಏನಾಯಿತು ಎಂಬುದನ್ನೂ ನಾನು ಹೇಳು ತ್ತೇನೆ.

The total debt position of the State comes to Rs. 1145·37 Crores, See page 2 of this book " picture of Karnataka Bubget" For Interests and Disbursements, ಇದರ ಬಗ್ಗೆ ೮೩೭.೩೧ ಕೋಟಿಯನ್ನು ನೀವು ಕೊಡಲೇ ಬೇಕಾಗುತ್ತದೆ.

ಆಮೇಲೆ ಈಗ ಸ್ಟೇಟ್ ಆದಾಯ ಒಟ್ಟು ೨೬೫.೫೯ ಕೋಟಿ ರೂಪಾಯಿಗಳೆಂದು ತಮ್ಮ ಬಜೆಟ್ ನಲ್ಲಿ ವಿವರಿಸಿದ್ದೀರಿ. ಡೆಟ್ ನೀವು ಕೊಡಬೇಕಾದ್ದು ಈ ವರ್ಷ ತಮ್ಮ ಪ್ರಕಾರ ೮೩೭ ಕೋಟಿ ರೂಪಾಯಿಗಳನ್ನು ಇಂಟರೆಸ್ಟ್ ರೂಪದಲ್ಲಿ ಕೊಡಬೇಕಾಗುತ್ತದೆ. ಅದರ ಜೊತೆಗೆ ನೀವು ಸರ್ಕಾರಿ ನೌಕರರಿಗೆ, ಸರ್ಕಾರಿ ನೌಕರರ ವರ್ಗ ಏನು ಇದೆ ಅದಕ್ಕೆ ಒಂದುನೂರು ಕೋಟಿ ರೂಪಾಯಿಗಳನ್ನು ಹೆಚ್ಚು ಕೊಡಬೇಕು. ೧೨ ತಿಂಗಳಿಗೆ ೧೨ ನೂರು ಕೋಟಿ ರೂಪಾಯಿಗಳು ಅದಕ್ಕೇ ಹೋಯಿತು. ಅಂದರೆ ೧೨ ಕೋಟಿ ರೂಪಾಯಿಗಳು ಮತ್ತು ಡೆಟ್ ಸರ್ವೀಸ್ ಚಾರ್ಜಸ್ ೮೩೭.೩೧ ಕೋಟಿ ರೂಪಾಯಿಗಳು ಎರಡೂ ಸೇರಿ ನಿಮಗೆ ೨೦೩೭ ಕೋಟಿ ರೂಪಾಯಿಗಳು ಬೇಕಾಗುತ್ತವೆ. ನಿಮಗೆ ಉಳಿಯುತಕ್ಕಂಥದ್ದು ಡೆವಲಪ್‌ಮೆಂಟ್ ಚಾರ್ಜಸ ಎಲ್ಲಾ ಭಾಗದಲ್ಲಿ ಖರ್ಚು ಮಾಡಲಿಕ್ಕೆ ಕೇವಲ ೬೦೮ ಕೋಟಿ ರೂಪಾಯಿಗಳು ಮಾತ್ರ. ಅಂದರೆ ೬೦೮ ಕೋಟಿ ರೂಪಾಯಿಗಳ ಉಳಿತಾಯದಲ್ಲಿ ನೀವು ಯಾವ ಯಾವ ಕಾರ್ಯಗಳನ್ನು ಈ ಒಂದು ರಾಜ್ಯದಲ್ಲಿ ಮಾಡಬೇಕೆಂದು ಯೋಚನೆ ಮಾಡಿ ದ್ದೀರೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ಹೋದ ಸಾರಿ ಏನು ಒಂದು ವಾರ್ಷಿಕ ವೆಚ್ಚ ಇತ್ತು ಪ್ಲಾನ್ ಎಸ್ಟಿಮೇಟ್ ೯೧೭ ಕೋಟಿ ರೂಪಾಯಿಗಳು ಪ್ಲಾನ್ ಅದರಲ್ಲಿ ೯೧೭ ಕೋಟಿ ರೂಪಾಯಿಗಳಲ್ಲಿ ತಾವು ಎಷ್ಟು ಖರ್ಚು ಮಾಡಿದ್ದೀರಿ ಎನ್ನುವುದು ಒಂದು ವಿಚಾರ. ಈ ಸಾರಿ ಜಾಸ್ತಿ ಅದನ್ನು ಮಾಡಿ ದ್ದೇವೆಂದು ಪ್ಲಾನಿಂಗ್ ಕಮೀಷನ್‌ನ ಎದುರಿನಲ್ಲಿ ಹೇಳಿದ್ದೀರಿ. ಹೋದ ಸಾರಿ ೯೧೭ ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ವೆಚ್ಚ ಮಾಡುತ್ತೇವೆಂದು ಇಟ್ಟಿದ್ದೀರಿ, ಇದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವುದನ್ನು ತಾವು ನೇರವಾಗಿ ಹೇಳಬೇಕು. ಜಾಸ್ತಿ ಮಾಡುವುದಕ್ಕೆ ಹೆಚ್ಚುವರಿ ಬೇಡಿಕೆ ಹೇಗೆ ಬರುತ್ತದೆ ಹೇಳಿ ಎಂದರೆ ಏನೋ ಒಂದು ಹಿಂದಿನ ವರ್ಷ ಜಾಸ್ತಿ ಇಟ್ಟಿದ್ದರೆ, ಈ ವರ್ಷ ಇನ್ನೂ ಜಾಸ್ತಿ ಇಟ್ಟಿದ್ದೇವೆ, ಪ್ಲಾನ್ ಯೋಜನಾ ವೆಚ್ಚವನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿಬಿಟ್ಟರೆ

ನಾವು ತಮಗೆ ಶಹಬಾಸ್‌ಗಿರಿಯನ್ನು ಕೊಡುತ್ತೇವೆಂದು ತಿಳಿದುಕೊಂಡಿದ್ದರೆ ಅದು ತಪ್ಪು, ಯಾರೂ ಕೊಡುವುದಿಲ್ಲ. ಈಗ ಖರ್ಚು ಮಾಡುತ್ತೇವೆಂದು ಏನು ಹೇಳುತ್ತೀರಿ ಅದನ್ನು ತಮಗೆ ಖರ್ಚು ಮಾಡಲಿಕ್ಕೆ ಸರಿಯಾದ ಆದಾಯ ತಮ್ಮಲ್ಲಿ ಇಲ್ಲ. ಸರ್ಕಾರದಲ್ಲಿ ವೆಚ್ಚ ಮಾಡಲಿಕ್ಕೆ ಹಣ ಇಲ್ಲವೆಂದು ತಮ್ಮ ಲೆಕ್ಕದ ಪ್ರಕಾರ ಆದಾಯ ವೆಚ್ಚ ಏನು ಕಳುಹಿಸಿದ್ದೀರಿ ೨೧-೩-೮೩ಕ್ಕೆ ಆ ಪ್ರಕಾರ ಆದಾಯ ತೆರಿಗೆಯನ್ನು ವಸೂಲು ಮಾಡಬೇಕಾಗಿತ್ತು. ೧೫೮೫ ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾಗಿತ್ತು ಡಿಸೆಂಬರ್ ತಿಂಗಳಲ್ಲಿ. ಈಗ ಎಷ್ಟು ವಸೂಲು ಮಾಡಿದ್ದೇವೆಂದರೆ ೧೦೫೪ ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದೀರಿ. ತಮ್ಮ ಬಜೆಟ್‌ನಲ್ಲಿಯೇ ಕೊಟ್ಟಿದ್ದೀರಿ. ಅಂದರೆ ಸುಮಾರು ೫೦೦ ಕೋಟಿ ರೂಪಾಯಿಗಳನ್ನು ಇದುವರೆಗೂ ವಸೂಲು ಮಾಡಲಿಲ್ಲ. ಮತ್ತೆ ಖರ್ಚು ಎಷ್ಟು ಮಾಡಿದ್ದೀರಿ ಎನ್ನುವುದನ್ನು ಪರಿಶೀಲನೆ ಮಾಡುವುದಾದರೆ ಈಗ ೧,೧೪೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆಂದು ನಿಮ್ಮ ಪಿಕ್ಚರ್ ಆಫ್ ಕರ್ನಾಟಕ ಪುಸ್ತಕದ ಮೂರನೇ ಪೇಜ್‌ನಲ್ಲಿ ಹೇಳಿದ್ದೀರಿ. ಖರ್ಚು ಮಾಡುವುದು ಡಿಸೆಂಬರ್ ತಿಂಗಳ ಒಳಗೆ ೬೯೦ ಕೋಟಿ ರೂಪಾಯಿಗಳನ್ನು ಮಾತ್ರ ಅಂದರೆ ೧೧೪೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಆದರೆ ಎಷ್ಟು ಖರ್ಚು ಮಾಡಿದ್ದಾರೆ ಅಂದರೆ ೪೫೯ ಕೋಟಿ ರೂಪಾಯಿಗಳು ಮಾತ್ರ. ಡಿಸೆಂಬರ್ ಅಂತ್ಯದೊಳಗೆ ೧೧೪೫ ಕೋಟಿ ರೂಪಾಯಿಯಲ್ಲಿ ಇವರು ೭೦೦೦ ಮಾತ್ರ ಖರ್ಚು ಮಾಡಿದ್ದಾರೆ. ಅಂದರೆ ಆಯವ್ಯಯ ಪಟ್ಟಿಯಲ್ಲಿ ಏನು ಖರ್ಚು ಮಾಡಬೇಕಾಗಿತ್ತು ಅದರ ಪ್ರಕಾರ ಖರ್ಚು ಮಾಡಲು ಪ್ರಯತ್ನ ಮಾಡಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏನು ಖರ್ಚಿನ ಬಾಬ್ತು ಇದೆ, ಆದಾಯ ಇದೆ ಅದರ ಬಗ್ಗೆ ಸರಿಯಾದ ಗೌರವವನ್ನು ಕೊಟ್ಟಿಲ್ಲ. ಮನ್ನಣೆ ಕೊಟ್ಟಿಲ್ಲ. ಎಂಬುದು ನಮಗೆ ಮನವರಿಕೆಯಾಗುತ್ತದೆ ಆಯವ್ಯಯ ಪಟ್ಟಿಯಲ್ಲಿ ನಾವು ಏನು ಮಂಜೂರು ಮಾಡಿದ್ದೇವೆ, ಅದರ ಪ್ರಕಾರ ನೀವು ಆದಾಯವನ್ನು ವಸೂಲಿ ಮಾಡಬೇಕಾಗುತ್ತದೆ. ಮತ್ತು ಖರ್ಚಿನ ಬಗ್ಗೆ ಖರ್ಚನ್ನು ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ಆಯವ್ಯಯ ಪಟ್ಟಿಯಲ್ಲಿ ಏನು ನಿರೂಪಣೆ ಇದೆ, ಏನು ಅಂಕೆ ಸಂಖ್ಯೆಗಳಿಗೆ ಖರ್ಚಿನ ಬಾಬ್ತು ಇದೆ ಇದರ ಬಗ್ಗೆ ನೀವು ಏನೂ ಗಮನಹರಿಸಿಲ್ಲವೆಂದು ಸ್ಪಷ್ಟವಾಗಿ ಹೇಳಲೇ ಬೇಕಾಗುತ್ತದೆ. ಯಾವ ಬಾಬಿಗೂ ಈ ವರ್ಷ ಹಣವನ್ನು ಕೊಟ್ಟಿಲ್ಲ, ನಮ್ಮ ತಾಲ್ಲೂಕಿನಲ್ಲಿ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಈ ವರ್ಷ ಪಿ.ಡಬ್ಲ್ಯು.ಡಿ.ಯಲ್ಲಿ ಹಣ ಮಂಜೂರು ಮಾಡಿಲ್ಲ. ಬರೀ ಸಂಬಳಕ್ಕೆ ಒಂದು ವೇಳೆ ಹಣವನ್ನು ಮಂಜೂರು ಮಾಡಿದ್ದರೆ ಬರೀ ಸಂಬಳಕ್ಕೋಸ್ಕರ ಕೊಟ್ಟಿದ್ದಾರೆ. ಉಳಿದ ಯಾವುದಕ್ಕೂ ಹಣವನ್ನು ಕೊಟ್ಟಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡುವುದಕ್ಕೆ ನಿಮಗೆ ಸಾಕಷ್ಟು ಹಣವಿಲ್ಲವೆಂಬುದು ಜನಜನಿತವಾದ ವದಂತಿ. ನಿಮಗೆ ಕೊಡಲಿಕ್ಕೆ ಸಂಪತ್ತು ಇಲ್ಲವೆಂದು ನಾನು ಹೇಳಲೇಬೇಕಾಗುತ್ತದೆ, ಅದರಿಂದ ಆಯವ್ಯಯ ಪಟ್ಟಿಯಲ್ಲಿ ನಾವು ಏನು ಮಂಜೂರು ಮಾಡಿಕೊಟ್ಟಿದ್ದೇವೆ ಅದರ ಪ್ರಕಾರ ಸರ್ಕಾರದವರು ಖರ್ಚು ಮಾಡಬೇಕು ಹಾಗೂ ಆದಾಯ ವಸೂಲು ಮಾಡಲು ನಿಮಗೆ ಶಕ್ತಿ ಇಲ್ಲವೆಂದು ಹೇಳಬೇಕಾಗುತ್ತದೆ. ಇವತ್ತು ಎಲ್ಲಿಗೆ ಹೋದರೂ ಯಾವ ಡಿಪಾರ್ಟ್‌ಮೆಂಟಿಗೆ ಹೋದರೂ ಖರ್ಚು ಮಾಡುವುದಕ್ಕೂ ಸಹ ಹಣವಿಲ್ಲ. ಸರ್ಕಾರಿ ನೌಕರರಿಗೆ ಸಂಬಳವನ್ನು ಕೊಡುವುದಕ್ಕೂ ಸಹ ಹಣವಿಲ್ಲ. ನೌಕರರಿಗೆ ಕಡಿಮೆ ಸಂಬಳವನ್ನು ತೆಗೆದುಕೊಳ್ಳುವಂತೆ ಹೇಳುತ್ತೀರೋ ಗೊತ್ತಿಲ್ಲ. ಇನ್ನು ಯಾವ ಬಾಬಿಗೆ ಕೈಯನ್ನು ಹಾಕುತ್ತಾರೋ ನನಗೆ ಗೊತ್ತಿಲ್ಲ. ನೌಕರರಿಗೆ ೩ ತಿಂಗಳ ಸಂಬಳವನ್ನು ತೆಗೆದುಕೊಳ್ಳಬೇಡಿ ಎಂದು ಹೇಳುತ್ತಾರೋ ಏನೋ ಗೊತ್ತಿಲ್ಲ ಅಥವಾ ಸಂಬಳದಲ್ಲಿ ಇಂತಿಷ್ಟು ಪರ್ಸೆಂಟ್ ಬಿಟ್ಟುಕೊಡಿ ಆಮೇಲೆ ನೋಡೋಣವೆಂದು ಹೇಳತಕ್ಕ ಪರಿಸ್ಥಿತಿ ಬರುತ್ತದೆಯೋ ಏನೋ ಆದರೆ ಅದನ್ನು ಈಗ ನಾನು ಏನೂ ಹೇಳಲು ತಯಾರಿಲ್ಲ. ನೀರಾವರಿ ಯೋಜನೆಯಲ್ಲಿ ಅವರು ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಖರ್ಚು ಮಾಡುವುದಕ್ಕೆ ಸರಿಯಾದ ಹಣವಿಲ್ಲ. ಖರ್ಚು ಮಾಡುವುದಕ್ಕೆ ಮನಸ್ಸು ಇದ್ದರೂ ಕೂಡ ಅದಕ್ಕೆ ಹಣ ಒದಗಿಸತಕ್ಕ ಒಂದು ರೀತಿ ನೀತಿಗಳು ನಿಮ್ಮಲ್ಲಿ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದುದರಿಂದ ನಿಮ್ಮ ಕೈಯಲ್ಲಿ ಒಂದು ಸರಿಯಾದ ವ್ಯವಸ್ಥೆ ಮಾಡಲು ಆಗದೇ ಹೋದರೆ ಆಗುವುದಿಲ್ಲವೆಂದು ಹೇಳಲೇಬೇಕು. ನೀವು ಈ ಪರಿಸ್ಥಿತಿಯಲ್ಲಿ ಸುಗಮವಾಗಿ ವ್ಯವಹಾರ ಮಾಡಿಕೊಳ್ಳಲು ನಿಮ್ಮ ಕೈಯಲ್ಲಿ ಆಗದಿದ್ದರೆ ಸ್ಪಷ್ಟವಾಗಿ ಹೇಳಲೇಬೇಕು. ಸಂವಿಧಾನದಲ್ಲಿ ಕಲಂ ೩೬೦ರಲ್ಲಿ ಫೈನಾನ್ಸಿಯಲ್ ಎಮರ್ಜೆನ್ಸಿ ಬಗ್ಗೆ ಹೇಳಿದೆ. ಅದರ ಪ್ರಕಾರ ಕೇಂದ್ರ ಸರ್ಕಾರಕ್ಕೆ ವಹಿಸತಕ್ಕದ್ದು ಬಹಳ ಸೂಕ್ತವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ೩೬೦ ಕಲಂ ಏನು ಹೇಳುತ್ತದೆ ಎಂಬುದನ್ನು ಓದುತ್ತೇನೆ.

4-30 P. M.

"Article 360 : Provisions as to financil emergency :

(1) If the President is satisfied that a situation has arisen where by the financial stability or credit of India or of any part of the territory there of is threatened, he may by a preclamation make a declaration to that effect.

(2) A proclamation issued under clause (1)-

(a) may be revcked or vnried by a subsequent Proclamation..."

ಮಾನ್ಯ ಮುಖ್ಯ ಮಂತ್ರಿಗಳಿಗೆ ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಈ ಒಂದು ಆರ್ಥಿಕ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಣೆ ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲದೇ ಹೋದರೆ ಹಂಗಾಮಿಯಾಗಿ ಎರಡು ತಿಂಗಳಿಗೋಸ್ಕರ ಕೇಂದ್ರ ಸರ್ಕಾರಕ್ಕೆ ವಹಿಸುವುದು ಬಹಳ ಉಚಿತ ಎಂದು ನನ್ನ ಭಾವನೆ. ಅಂಥ ಒಂದು ಪರಿಸ್ಥಿತಿ ಈ ರಾಜ್ಯದಲ್ಲಿ ಬಂದಿದೆ. ತೆರಿಗೆಗಳನ್ನು ಎಕ್ಸೈಜ್ ಡಿಪಾರ್ಟ್‌ನಿಂದ ವಸೂಲು ಮಾಡಬೇಕು, ಕಮರ್ಷಿಯಲ್ ಟ್ಯಾಕ್ಸ್‌ನಿಂದ ವಸೂಲು ಮಾಡಬೇಕು, ಯಾವ ಯಾವ ಬಾಬಿನಿಂದ ನೀವು ವಸೂಲು ಮಾಡುತ್ತಿದ್ದೀರಿ ಆ ಬಾಬುಗಳಿಂದ ವಸೂಲು ಮಾಡುವುದಕ್ಕೆ ನಿಮಗೆ ಮನಸ್ಸಿಲ್ಲ, ಮನಸ್ಸಿದ್ದರೂ ಕೂಡ ಮಾಡುತ್ತಿಲ್ಲ. ಕಾರಣ ಏನೆಂದರೆ ಯಾರು ಯಾರು ಸರ್ಕಾರಕ್ಕೆ ಬಾಕಿ ಕೊಡಬೇಕಾಗಿದೆ ಅವರೆಲ್ಲರೂ ಸ್ಥಿತಿವಂತರಿದ್ದಾರೆ, ಎಕ್ಸೈಜ್ ಕಂಟ್ರಾಕ್ಟರ್ ಸ್ಥಿತಿವಂತರು. ಅವರ ಒಂದು ಅಬ್ಲಿಗೆಷನ್ ತಮ್ಮ ಮುಂದೆ ಇರಲೇಬೇಕು. ಇಲ್ಲದೇ ಹೋದರೆ ಬಾಕಿ ವಸೂಲಿ ಮಾಡುತ್ತಿದ್ದೀರಿ. ಇದರ ಬಗ್ಗೆ ನಾನು ಅಂಕಿ ಸಂಖ್ಯೆಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದನ್ನು ಮಾನ್ಯ ವೀರಪ್ಪ ಮೊಯಿಲಿಯವರ ಹೇಳಿದ್ದಾರೆ. ಮತ್ತೆ ಈ ಸದನದಲ್ಲಿ ಅಂಕಿ ಅಂಶ ಕೊಟ್ಟು ಸುಸ್ತು ಮಾಡುವುದಕ್ಕೆ ಹೋಗುವುದಿಲ್ಲ. ಒಂದು ವಿಚಾರ ಹೇಳುತ್ತಿದ್ದೇನೆ, ಯಾರು ಈ ರಾಜ್ಯದಲ್ಲಿ ತಮಗೆ ಹಣದ ರೂಪದಲ್ಲಿ ಸಹಾಯಕರಾಗಿದ್ದಾರೆ, ಭೂ ಮಾಲೀಕರಿದ್ದಾರೆ ಆಸ್ತಿಪಾಸ್ತಿಗಳನ್ನಿಟ್ಟುಕೊಂಡಿದ್ದಾರೆ ಅಂಥ ವೆಸ್ಟೆಡ್ ಇಂಟರೆಸ್ಟ್ ಬೆಂಬಲ ತಮಗೆ ಬೇಕು ಎಂದು ಅವರಿಗೆ ದಾಕ್ಷಿಣ್ಯ ತೋರಿಸುತ್ತಿದ್ದೀರೇ ವಿನಹ ನಿರ್ದಾಕ್ಷಿಣ್ಯವಾಗಿ ಅದರ ಬಾಕಿ ವಸೂಲು ಮಾಡಿದರೆ ಇಲ್ಲಿರತಕ್ಕ ಪರಿಸ್ಥಿತಿಯಲ್ಲಿ ನೇರವಾಗಿ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸಿಕೊಂಡು ಹೋಗಬಹುದು. ಕೋರ್ಟಿನಲ್ಲಿ ಕೇಸ್ ಇದೆ ಎಂದು ಇಟ್ಟುಕೊಳ್ಳೋಣ. ಹೈಕೋರ್ಟಿನಲ್ಲಿ ಇಂಥ ಒಂದು ಕ್ರಮಗಳಿಗೆ ತಡೆಯಾಜ್ಞೆ ಕೊಡುತ್ತಾರೆ. ತಡೆಯಾಜ್ಞೆ ಕೊಟ್ಟರೆ ಅದನ್ನು ಜಾಗ್ರತೆಯಾಗಿ ವಜಾ ಮಾಡಿಸಿ ನೇರವಾಗಿ ವಸೂಲು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಿಲ್ಲ. ಅದಕ್ಕೆ ಮನಸ್ಸು ಮಾಡುತ್ತಿಲ್ಲ. ಮನಸ್ಸು ಏತಕ್ಕೆ ಮಾಡುತ್ತಿಲ್ಲ ಎಂದು ಪ್ರಶ್ನೆ ಕೇಳುತ್ತಿದ್ದೇನೆ. ಇದರ ಬಗ್ಗೆ ಒಂದು ಕಾನೂನು ತರಬಹುದು ಸರ್ಕಾರದ ಇಂಥ ಕ್ರಮಗಳಿಗೆ ಹೈಕೋರ್ಟೇ ಆಗಲೀ ಯಾವುದೇ ಕೋರ್ಟ್ ಆಗಲೀ ತಡೆಯಾಜ್ಞೆ ಕೊಡತಕ್ಕದ್ದನ್ನು ನಿರ್ಬಂಧ ಮಾಡಬೇಕು. ಹೈಕೋರ್ಟಿಗೆ ಇಂಥ ಅವಕಾಶ ಕೊಡಬಾರದು. ಆ ಹಕ್ಕುಗಳನ್ನು ಕಿತ್ತುಹಾಕಲೇಬೇಕು. ಇಲ್ಲದೇ ಹೋದರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಕೋರ್ಟಿನ ತೀರ್ಮಾನದ ಹಿನ್ನೆಲೆಯಲ್ಲಿ ಬಾಕಿ ವಸೂಲಿಗೆ ವರ್ಷಗಟ್ಟಲೆ ಸಮಯ ಕೊಡುವಂಥ ಸಂದರ್ಭ ಬರುತ್ತಿದೆ. ಹಲವಾರು ಕಾರಣಗಳಿಂದ ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ೧೯೮೩ ನೇ ಇಸವಿಗಿಂತ ಹಿಂದೆ ಏನಿತ್ತು ಆ ರೀತಿ ಸುವ್ಯವಸ್ಥಿತವಾಗಿಲ್ಲ. ಅವತ್ತು ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು ? ಆರ್ಥಿಕ ಅವ್ಯವಸ್ಥೆ ಇತ್ತು ಎಂದು ಹೇಳಿದ್ದರು. "ಹಣಕಾಸಿನ ವ್ಯವಸ್ಥೆಯನ್ನು ಸರಿಯಾಗಿ ಮಾಡಿಲ್ಲ. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ಗೆ ಹಣ ದುರುಪಯೋಗ ಮಾಡಿದ್ದೀರಿ. ಆದ್ದರಿಂದ ಜನರು ಬೇಸತ್ತು ಆ ಸರ್ಕಾರ ಕಿತ್ತು ನಮಗೆ ಸರ್ಕಾರ ರಚಿಸಲು ಅವಕಾಶ ಕೊಟ್ಟಿದ್ದಾರೆ" ಎಂದು ತಾವು ಹೇಳಿದ್ದೀರಿ. ಅದಕ್ಕೆ ತಮಗೆ ಹೇಳುತ್ತಿದ್ದೇನೆ, ತಾವು ಬೇರೆಯವರಿಗೆ ಬುದ್ಧಿವಾದ ಹೇಳಿ ಬೇರೆಯವರು ಸರಿಯಿಲ್ಲ ಎಂದು ಹೇಳಿಕೆ ಕೊಟ್ಟು ಏನು ನಿಲುವು ತೆಗೆದುಕೊಂಡಿರಿ, ಈಗ ತಾವು ಏನು ಮಾಡಿದಿರಿ ಎಂಬ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಆದಕ್ಕಿಂತ ವಿಪರೀತವಾಗಿ ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದನ್ನು ಸರಿದೂಗಿಸುವುದಕೆ ನಿಮ್ಮ ಕೈಯಲ್ಲಾಗುವುದಿಲ್ಲ ಎಂದು ನಮಗೆ ಸ್ಪಷ್ಟವಾಗಿ ಮನವರಿಕೆಯಾಗತಕ್ಕ ಪರಿಸ್ಥಿತಿ

ಬಂದಿದೆ. ಅಕಸ್ಮಾತ್ ಈ ಸರ್ಕಾರ ಹೋಗಿ ಬೇರೆ ಸರ್ಕಾರ ಬಂದರೆ ಫೈನಾನ್ಷಿಯಲ್ ಕ್ರೈಸಿಸ್ ನೀವು ಏನು ಮಾಡಿದ್ದೀರಿ ಇದನ್ನು ಸರಿದೂಗಿಸುವುದಕ್ಕೆ ನಾಲ್ಕೈದು ವರ್ಷಗಳು ಅದಕ್ಕೆ ಬೇಕಾಗುತ್ತದೆಂದು ಇವತ್ತಿನ ದಿವಸ ಸ್ಪಷ್ಟವಾಗಿ ಹೇಳುತ್ತಿದ್ದೇನೆ ಈ ವರ್ಷವೂ ಪುನಃ ಕೊರತೆ ಬಜೆಟ್ ಮಾಡಿದ್ದೀರಿ. ತಾವು ಅಧಿಕಾರಕ್ಕೆ ಬಂದಾಗಿನಿಂದ ಇದೇ ರೀತಿ ಕೊರತೆ ಬಜೆಟ್ ಬರುತ್ತಿದೆ. ೧೯೮೩ನೇ ಇಸವಿಗಿಂತ ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರ ಸರಿಯಾಗಿ ಆರ್ಥಿಕ ವ್ಯವಸ್ಥೆಯನ್ನು ಸರಿದೂಗಿಸಲಿಲ್ಲ ಎಂದು ತಾವು ಹೇಳಿಕೆ ಕೊಟ್ಟಿದ್ದೀರಿ. ಆಗ ಎಷ್ಟು ಕೊರತೆ ಇತ್ತು ? ನಿಮ್ಮದು ಎಷ್ಟು ಕೊರತೆಯಾಗಿದೆ ಎನ್ನತಕ್ಕದ್ದನ್ನು ಪಿಚ್ಚರ್ ಆಫ್ ಕರ್ನಾಟಕ ಬಜೆಟ್ ಎಂಬುದಾಗಿ ನಮಗೆ ಏನು ಕೊಟ್ಟಿದ್ದೀರಿ, ಅದರ ಪುಟ ೪೮ ರಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ೧೯೮೩-೮೪ ನೇ ಇಸವಿಯ ಹಿಂದೆ ಎಷ್ಟು ಕೊರತೆ ಇತ್ತು ? ಓಪನಿಂಗ್ ಬ್ಯಾಲೆನ್ ಹಾಗೂ ಕ್ಲೋಸಿಂಗ್ ಬ್ಯಾಲೆನ್ಸ್ ಎಷ್ಟು ಇತ್ತು ? ಈಗ ಎಷ್ಟು ಇದೆ ಎಂಬ ಪ್ರಶ್ನೆ ಬರುತ್ತದೆ, ಆ ಪುಸ್ತಕವನ್ನು ತಾವೂ ಓದಿದ್ದೀರಿ ಅದರ ಪ್ರಕಾರವೇ ನಾನು ಹೇಳುತ್ತಿದ್ದೇನೆ. ನಿಮ್ಮ ಹಣ ಕಾಸಿನ ಪರಿಸ್ಥಿತಿ ಏನು ಇದೆ. ಆ ಒಂದು ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ನಿಮ್ಮ ಕೈಯಲ್ಲಿ ಇವತ್ತಿನವರೆಗೂ ಆಗಿಲ್ಲ. ಅದನ್ನು ಸುಧಾರಣೆ ಮಾಡುವುದಕ್ಕೆ ನಿಮ್ಮ ಪ್ರಯತ್ನವನ್ನೇ ಮಾಡಿಲ್ಲವೆಂದು ತಮ್ಮ ಮುಂದೆ ಸ್ಪಷ್ಟವಾಗಿ ಹೇಳಬಲೇ, ಬೇಕಾಗುತ್ತದೆ. ಕೊರತೆ ಬಡ್ಜೆಟ್ ಮಾಡುವುದು ಒಳ್ಳೆಯದು. ಮಾಡಿ ಯಾರು ಬೇಡ ಎಂದು ಹೇಳುವುದಿಲ್ಲ. ಎಲ್ಲರೂ ಮಾಡುತ್ತಾರೆ. ನಾನು ಮಾಡುತ್ತೇನೆ ಎಂದು ಮಾಡಿದಿರಿ. ಕೇಂದ್ರದವರು ಕೊರತೆ ಬಡ್ಜೆಟ್ ಮಾಡಿದ್ದಾರೆ, ಎಲ್ಲರೂ ಅದೇ ರೀತಿ ಮಾಡಿದರೆ. ನಾನೂ ಮಾಡುತ್ತೇನೆಂಬ ಮನಸ್ಸು ತಮಗೂ ಇರಬಹುದು. ಆದರೆ ಆ ರೀತಿಯ ಕೊರತೆಯ ಬಗ್ಗೆ ನೀವು ಏನೇನು ಹೇಳಿದ್ದೀರಿ ಎಂದರೆ ಸೆಂಟರ್‌ದ್ದು ಬಂಗ್ಲಿಂಗ್ ಆಫ್ ಫೈನಾನ್ಸ್ ಎಂಬುದಾಗಿ ತಾವು ಹೇಳಿದ್ದೀರಿ. ಬೇರೆಯವರು ತಪ್ಪು ಮಾಡುತ್ತಿದ್ದಾರೆಂದು ತಾವು ಹೇಳಿದ್ದೀರಿ ಆ ರೀತಿ ಹೇಳಿದ ಮೇಲೆ ತಾವಾದರೂ ಅದನ್ನು ಸರಿಮಾಡಬೇಕಲ್ಲ. ಬೇರೆಯವರಿಗೆ ಮಾದರಿ ರೂಪದಲ್ಲಿ ನಡೆದುಕೊಳ್ಳಬೇಕಲ್ಲ. ಆ ಬಗ್ಗೆ ಏನು ಪ್ರಯತ್ನ ಮಾಡಿದ್ದೀರಿ ಎಂದು ನಾನು ತಮಗೆ ಪ್ರಶ್ನೆಯನ್ನು ಹಾಕುತ್ತಿದ್ದೇನೆ, ಅದರ ಬಗ್ಗೆ ಇವರು ಹೇಳತಕ್ಕ ಹೇಳಿಕೆ ಡೆಕ್ಕನ್ ಹೆರಾಲ್ಡ್ ೨೦-೩-೧೯೮೮ ರಂದು ಬಂದಿದೆ. ಅದನ್ನು ಓದುತ್ತೇನೆ :

> "Mr. Hedge began his speech by pointing out that the country was facing the resource gap of Rs. 40 thousand crores in the Seventh Plan with a debt service alone, claiming Rs. 14,100 crores a year. The danger in continued borrowing for meeting investments without commensurate returns these two what is popularly called a debt trap, we are in that condition now Mr, Hedge stated.

ಆ ರೀತಿ ತಾವು ಹೇಳಿದ್ದೀರಿ. ಟೀಕೆ ಮಾಡುವುದನ್ನು ನಾನು ಸ್ವಾಗತ ಮಾಡುತ್ತೇನೆ ಬೇರೆಯವರು ಬಂಡಲ್ ಮಾಡುತ್ತಾರೆಂದು ಹೇಳಿದ ಮೇಲೆ ನೀವು ಏನೇನು ಮಾಡಿದ್ದೀರಿ ಎಂಬ ಪ್ರಶ್ನೆ ಬರುತ್ತದೆ. ಡೆಟ್ ಸರ್ವೀಸ್ ಚಾರ್ಜಸ್, ರಿಕವರಿ ಎಷ್ಟು ಎಷ್ಟು ಸಾಲ ಕೊಟ್ಟಿದ್ದೀರಿ ? ಅದರಲ್ಲಿ ಎಷ್ಟನ್ನು ವಸೂಲಿ ಮಾಡಿದ್ದೀರಿ ? ಸಾಲವನ್ನು ತೆಗೆದುಕೊಂಡವರು ಕೊಡಬೇಕಾದ ಬಡಿ ಎಷ್ಟು ? ಅದರಲ್ಲಿ ಎಷ್ಟನ್ನು ವಸೂಲಿ ಮಾಡಿದ್ದೀರಿ ? ಯಾರಿಗೆ ಬಿಟ್ಟಿದ್ದೀರಿ ? ಏಕೆ ಬಿಟ್ಟಿದ್ದೀರಿ ? ಅಂತಹವರಿಂದ ವಸೂಲಿ ಮಾಡದೆ ಏಕೆ ಬಿಟ್ಟಿದ್ದೀರಿ ? ಅಕೌಂಟ್ ಜನರಲ್‌ರವರ ಆಡಿಟ್ ರಿಪೋರ್ಟ್ ಒಂದು ಇದೆ. ಕಂಟ್ರೋಲರ್ ಆಫ್ ಆಡಿಟರ್ ಜನರಲ್ ಆಫ್ ಇಂಡಿಯಾ ಅವರ ಆಡಿಟ್ ರಿಪೋರ್ಟ್ ನನ್ನಲ್ಲಿದೆ. ಅದರಲ್ಲಿ ರೆವಿನ್ಯೂ ಆಡಿಟ್‌ಗೆ ನಾನು ಹೋಗುತ್ತಿಲ್ಲ. ಆದರೆ ಕಮರ್ಷಿಯಲ್ ಆಡಿಟ್ ಏನು ಇದೆ, ಅದರ ಬಗ್ಗೆ ಇರತಕ್ಕ ಟೀಕೆಗಳನ್ನು ನೋಡಿದರೆ ನ್ಯಾಯವಾಗಿ ಆ ಒಂದು ವ್ಯವಹಾರ ನಡೆಸುವುದು ನಿಮಗೆ "ಯೋಗ್ಯ ಅಂತ ಹೇಳುವುದಿಲ್ಲ' ಆದರೆ ಹಕ್ಕು ಇದೆಯೋ ಎಂದು ಕೇಳುತ್ತಿದ್ದೇನೆ ಇದು ೧೯೮೫-೮೬ ನೇ ಸಾಲಿನ ಆಡಿಟ್ ರಿಪೋರ್ಟ್. ಅದರ ನಂತರ ಯಾವುದೂ ಬಂದಿಲ್ಲ. I will read from that. "C"

"The State Government had guaranteed the repayment of loans on payment of interest thereon raised by 17 companies including one subsidiery. The total amount of loans guaranteed and out standing including interest as on 31 st March, 86 was Rs. 180.59 crores and Rs. 93.82 crores respectively. The Comapnies have to pay guarantee commission in consideration of the guarantee loan by the State Government. As on 31st March, 86 the payment of guarantee commissien was in arrears to the extent of Rs. 1.74 crores in respect of eight companies as shown in the Annexure-V. The amount of long term loon out standing as on 31 st March, 86 in respect of 38 companies was Rs. 1428.01. crores as aganist Rs. 1302.88 crores. State Government. Rs. 796.3 crores and others Rs. 506.85 crores as on 31 st March 85 in respect of 23 companies.

ಸರ್ಕಾರ ನಡೆಸುತ್ತಿರತಕ್ಕಂತಹ ಕಾರ್ಖಾನೆಗಳಾಗಲಿ, ಕಂಪನಿಗಳಾಗಲಿ, ಈ ರೀತಿ ನಡೆಯುತ್ತಿವೆ.

ಆ ಕಂಪೆನಿಗಳನ್ನು ಏನು ನಡೆಸುತ್ತಿದ್ದೀರಿ ಅವುಗಳಲ್ಲಿ ಈ ರೀತಿಯಾದ ವ್ಯವಹಾರವನ್ನು ನಡೆಸತಕ್ಕದ್ದು ಯಾವುದನ್ನು ಸರಿಯಾಗಿ ನಡೆಸಬೇಕು, ಬಿಡಬೇಕು ಆ ಕಡೆ ಗಮನ ಇಲ್ಲ. ಆದರೆ ಇದರಲ್ಲಿ ಲಾಸ್ಸಿನಲ್ಲೇ ನಡೆಸತಕ್ಕ ಕಂಪೆನಿಗಳು ಇವೆ. ಅಕೌಂಟೆಂಟ್ ಜನರಲ್ ಅವರು ಏನು ಹೇಳಿದ್ದಾರೆ ಅದನ್ನು ಸರಿ ಮಾಡುವುದಕ್ಕೆ ಕೈಗಾರಿಕಾ ಇಲಾಖೆಯು ಮೇಲೆ ತಾವು ಏನು ಕ್ರಮವನ್ನು ತೆಗೆದು ಕೊಂಡಿದ್ದೀರಿ ? ಯಾವ ರೀತಿಯ ಕಂಟ್ರೋಲ್ ಇಟ್ಟು ಕೊಂಡಿದ್ದೀರಿ ? ಈ ಬಾಬತ್ತಿನಲ್ಲಿ ಲಾಸ್ಸನ್ನು ಸರಿದೂಗಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ? ಇಲ್ಲಿ ನಾನು ಎರಡು ಮೂರು ಕಂಪೆನಿಗಳ ಹೆಸರನ್ನು ಹೇಳುತ್ತೇನೆ. ಈ ಕಂಪೆನಿಗಳು ಬರೀಲಾಸ್ಸಿನಲ್ಲೇ ಇವೆ. ಸರ್ಕಾರ ಗ್ಯಾರಂಟಿ ಕೊಡುತ್ತಲೇ ಇದೆ. ಕಮಿಷನ್ ಗ್ಯಾರಂಟಿಯನ್ನೂ ಇವರೇ ಕೊಡುತ್ತಿದ್ದಾರೆ. ಆಡಿಟ್‌ನ್ನೂ ಕೂಡಾ ಅವರು ಮಾಡಿಸುತ್ತಾ ಇಲ್ಲ. "The accumulated losses in respect of the following 13 companies as reflected in the Accounts received upto the period noted against each, have exceeded their paid-up capital. ಬಂಡವಾಳ ಮುಗಿಸಿ, ಎಲ್ಲಾ ಮುಗಿದು ಹೋಗಿದೆ. The following are the companies. 1) Chamundi Machine Tools Ltd., 1.1 Crores loss 2) Karnataka Agro Industries Corporation-12.32 crores loss 3) Karnataka Compost Development Corporation Ltd., 0.63 crores, Karnataka Implements and Machineries Company Ltd., 8.73 crores loss, Karnataka Land Army Corporation Ltd., 0.43 crores loss, Karnataka State Construction Corporation Ltd, 2.79 crores loss, Karnataka Vidyuth Karkane Ltd., 3.41 crores loss, Mysore Chrome Tanning Company Ltd., 1.52 crores loss, Mysore Electrical Industries Ltd., 5.77 crores loss, Mysore Lac and Paints Works Ltd, 0.24 lakhs loss, Mysore Tobacco Co., Ltd., 3.89 crores loss. Karnataka State Forest Industries Corporation Ltd,, 1.72 crores loss Vishweswaraiah Iron and Steel Company 117.76 crores, Total loss,156.22 crores ಈಗ ಅಲ್ಲಿ ಲಾಸ್ ಆಗಿದೆ ನಾವು ಏನು ಮಾಡುವುದು ಎನ್ನತಕ್ಕದ್ದು ಒಂದು ವಾದ. ಕೈಗಾರಿಕಾ ಮಂತ್ರಿಗಳಾಗಿ ಪಟೇಲ್‌ರವರು ಇದ್ದಾರೆ. ಅವರು ನಮ್ಮ ಸ್ನೇಹಿತರು. ನಾವು ಏನು ಕೇಳಿದರೂ ಲಾಸ್ ಆಗಬಾರದೇ ಹಾಗೇ ಹೀಗೆ ಎನ್ನುತ್ತಾರೆ. ಇಲ್ಲಿ ೧೫೬.೨೨ ಕೋಟಿ ರೂಪಾಯಿ

ಲುಕ್ಸಾನು ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀನಲ್ಲಿ ಆಗಿರುವುದಕ್ಕೆ ನಾವು ಕೇಳಿದರೆ ಅವರು ''ಆಗಬಾರದೇನು'' ಎಂದರೆ, ಇದಕ್ಕೆ ಉತ್ತರ ಏನೆಂದರೆ, ತಾವು ವ್ಯವಹಾರ ಮಾಡುವುದಕ್ಕೆ ನಾಲಾಯಕ್ಕು ಆಗಿದ್ದೀರಿ ಎಂದು ಹೇಳಬೇಕು. ಸರ್ಕಾರ ಏನು ಈ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಗಳನ್ನು socialist pattern of societyಯಲ್ಲಿ ಏನು ಸ್ಥಾಪನೆ ಮಾಡಿದ್ದೀರಿ ಅಂತಹ ಸಂದರ್ಭದ ಹಿನ್ನೆಲೆಯಲ್ಲಿ ಅವನ್ನು ಸರಿಯಾಗಿ ಸರಿದೂಗಿಸುವ ಕೆಲಸ ಮಾಡಬೇಕು. ಅವರನ್ನು ಸರಿಯಾಗಿ ನಡೆಸಿಕೊಂಡು ಬರಬೇಕು, ಅವನ್ನು ಸರಿಯಾಗಿ ನಡೆಸಿಕೊಂಡು ಬರದೇ ಹೋದರೆ ನಿಮಗೆ ತಾಕತ್ತು ಇಲ್ಲ ಎಂದು ನಮಗನ್ನಿಸುತ್ತದೆ. ಎಂದರೆ, ಇವರು ಆಸಕ್ತಿ ವಹಿಸಿಲ್ಲ, ಶಕ್ತಿ ಇಲ್ಲ ಎಂದೂ ನಮಗನ್ನಿಸುತ್ತದೆ. ಸರ್ಕಾರ ಇವನ್ನು ನಡೆಸುವುದಕ್ಕೆ ಶಕ್ತಿಯನ್ನು ಪಡೆದಿದೆಯೇ ? ಈ ಒಂದು ವ್ಯವಸ್ಥೆ ಏನಿದೆ, ಈ ಕರ್ನಾಟಕ ರಾಜ್ಯದಲ್ಲಿ ಈ ಒಂದು ಫೈನಾನ್ಸಿಯಲ್ ಕ್ರೈಸಿಸ್‌ಗೆ ಇದು ಬಹಳ ಅನಿವಾರ್ಯವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತೆ ಈ ಒಂದು ಬಜೆಟ್ ಏನಿದೆ, ಏನು ಪ್ರೆಸೆಂಟ್ ಮಾಡಿದ್ದೀರಿ, ಇದನ್ನು ನೀವು ಒಳ್ಳೆಯ ಸಮಯದಲ್ಲೇ ಮಾಡಿದ್ದೀರೆಂದೆನಿಸುತ್ತದೆ. ಕಾರಣ ಏನೆಂದರೆ, ಕೇರಳದಲ್ಲಿ ಲೋಕಲ್ ಬಾಡೀಸ್ ಎಲೆಕ್ಷನ್ ಆಯಿತು. ಆಗ ಮಾಡಿದ್ದೀರಿ. ಮದ್ರಾಸ್‌ನಲ್ಲಿ.........ಏಕೆ ಹೇಳಿದೆ ಎಂದರೆ. ನಿಮ್ಮ ಸರ್ಕಾರ ಏನಿದೆ.........ಸರ್ಕಾರ ನಡೆಸುವುದಕ್ಕೆ ನಿಮಗೆ ಹಕ್ಕು ಇಲ್ಲ ಎಂದು ನಾನು ಹೇಳಿದ್ದೇನೆ. ಹಕ್ಕು ಉಂಟು, ಎಲ್ಲಿಯವರೆಗೆ ? ಪ್ರಜಾಪ್ರಭುತ್ವದ ಪ್ರಕಾರ ಎಲ್ಲಿಯವರೆಗೆ ಬಹುಸಂಖ್ಯೆಯಲ್ಲಿ ಇರುತ್ತೀರೋ, ಎಲ್ಲಿಯವರೆಗೆ ಜನ ತಮ್ಮನ್ನು ಬೆಂಬಲಿಸುತ್ತಾರೋ ಅಲ್ಲಿಯವರೆಗೆ ತಾವು ಅಧಿಕಾರದಲ್ಲಿರುತ್ತೀರಿ. ಅದಕ್ಕೆ ನಾವು ಏನು ಮಾಡುವುದಕ್ಕಾಗುತ್ತದೆ ? ಜನ ಒಪ್ಪಿದರೆ ಇರಿ, ನಾವು ಬೇಡ ಅನ್ನುವುದಿಲ್ಲ. ಆದರೆ ಜನರು ಏನು ತಮ್ಮಿಂದ ನಿರೀಕ್ಷೆ ಮಾಡಿದ್ದರೋ ಅದರ ರೀತಿ ನಡೆದುಕೊಳ್ಳದಿದ್ದರೆ ಇರಬೇಕೇ ಬೇಡವೇ ಎನ್ನುವುದನ್ನು ತಾವೇ ನಿರ್ಧಾರ ಮಾಡಬೇಕು. ಅದನ್ನು ನಾನು ಹೇಳುತ್ತಿಲ್ಲ. ನೀತಿನಿಯಮಗಳ ಪ್ರಕಾರ ನಡೆದುಕೊಂಡು ಹೋಗುತ್ತಿದ್ದೇವೆಂದು ಹೇಳುತ್ತೀರಿ. ಜುಡಿಷಿಯರಿ ಸರಿಯಿದೆಯೆಂದು ಹೇಳುತ್ತೀರಿ ಒಂದು ಸಾರಿ ಸರಿಯಿಲ್ಲವೆಂದು ಹೇಳುತ್ತೀರಿ. ಒಂದು ಸಾರಿ ಸರಿಯಿದೆಯೆಂದು ವಾದ ಮಾಡುತ್ತೀರಿ, ಆ ರೀತಿ ವಾದ ಮಾಡಿದರೆ ಅದರಂತೆ ನಡೆದುಕೊಳ್ಳುವುದಿಲ್ಲ. ಠಕ್ಕರ್ ಮತ್ತು ನಟರಾಜ್ ಆಯೋಗಗಳ ಬಗ್ಗೆ ವಿ.ಪಿ. ಸಿಂಗ್‌ರವರು ವಿರೋಧವಿದ್ದಾರೆ. ಈ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು ? ಆಂಧ್ರಪ್ರದೇಶದಲ್ಲಿ ಎನ್.ಟಿ.ಆರ್. ಜುಡಿಷಿಯರಿ ಮಾಡಿದರು ಅದು ಸರಿಯಿಲ್ಲವೆಂದು ಹೇಳಿದರು. ನಮ್ಮಲ್ಲಿಯೂ ನೂರಾರು ಜುಡಿಷಿಯರಿಗಳನ್ನು ಆಯೋಗಗಳು ಕೊಟ್ಟಂತಹ ವರದಿಗಳನ್ನು ಕಾರ್ಯಗತ ಮಾಡಲಿಕ್ಕೆ ತಾವು ಹೋಗಿಯೇ ಇಲ್ಲ. ಆದರಿಂದ ಏನಾದರೂ ಆದೀತು ಎಂಬ ಭಯವಿರಬೇಕು ಅವುಗಳನ್ನು ತಾವು ಕಾರ್ಯಗತ ಮಾಡಲಿಕ್ಕೆ ಹೋಗಿಯೇ ಇಲ್ಲ. ನಾನು ಒಂದು ವಿಷಯವನ್ನು ತಮಗೆ ಹೇಳಲೇಬೇಕು.

ಮಹಾಭಾರತದಲ್ಲಿನ ಒಂದು ಪ್ರಸಂಗವನ್ನು ಹೇಳುತ್ತೇನೆ. ನಾನು ಮಹಾಭಾರತ ರಾಮಾಯಣ ಇವುಗಳನ್ನು ನಂಬುವುದಿಲ್ಲ. ಅವುಗಳೆಲ್ಲ ಕಟ್ಟುಕತೆಗಳೆಂದು ನನ್ನ ಭಾವನೆ. ಯಾರೋ ಒಬ್ಬ ನಾನ್ ಬ್ರಾಮಿನ್ ಬರೆದಂತಹ ಕೃತಿಗಳು ನಿಜ. ಅದರ ಹಿಂದೆ ಹೋಗುತ್ತಿದ್ದಾರೆ. ನನ್ನ ಭಾವನೆಯಲ್ಲಿ ಅವುಗಳೆಲ್ಲ ಪೊಲಿಟಿಕಲ್ ಸೈನ್ಸ್ ಎಂದು ತಿಳಿದುಕೊಂಡಿದ್ದೇನೆ. ಮಹಾಭಾರತದಲ್ಲಿ ಭೀಷ್ಮನ ಬಾಯಿಯಲ್ಲಿ ಒಂದು ಮಾತು ಹೇಳಿಸಲಾಗಿದೆ.

' ಎಂದು ಒಂದು ರಾಜ್ಯದಲ್ಲಾಗಲೀ ಅಥವಾ ದೇಶದಲ್ಲಾಗಲೀ ಬ್ರಾಹ್ಮಣರು ರಾಜ್ಯಭಾರ ಮಾಡಲಿಕ್ಕೆ ಬರುತ್ತಾರೋ ಅಲ್ಲಿ ಸರಿಯಿರುವುದಿಲ್ಲವೆಂದು ಆಗ ಅವರು ಹೇಳಿದ್ದಾರೆ '

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಬ್ರಾಹ್ಮಣರು? ಸರ್ಕಾರಿ ಬ್ರಾಹ್ಮಣರೋ ಸಾಂಪ್ರದಾಯಿಕ ಬ್ರಾಹ್ಮಣರೋ ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಹುಟ್ಟಿನ ಬ್ರಾಹ್ಮಣರು ಕೆಲವರು ಇದ್ದಾರೆ. ಆಮೇಲೆ ಸಾಂಪ್ರದಾಯಿಕ ಬ್ರಾಹ್ಮಣರು ಇದ್ದಾರೆ. ಕೆಲವರು ಹುಟ್ಟಿನಿಂದ ಬ್ರಾಹ್ಮಣರು ಇದ್ದಾರೆ ಸರ್ಕಾರೀ ಬ್ರಾಹ್ಮಣರು ಯಾರಿದ್ದಾರೆ ? ಸರ್ಕಾರಿ ಬ್ರಾಹ್ಮಣರು ಎಂದು ಯಾರೂ ಇಲ್ಲ. ಅವರಿಗೆ ಆ ಹೆಸರು ಇಲ್ಲ. ನಾನು ಬ್ರಾಹ್ಮಣಯೆಂದು ಕರೆದುಕೊಳ್ಳುವುದಕ್ಕೆ ಸಾಧ್ಯವೆ ? ಮಾನ್ಯ ರಾಚಯ್ಯನವರು ಕರ್ರಗೆ ಇದ್ದಾರೆ ಅವರು ಬ್ರಾಹ್ಮಣರೆಂದು ಕರೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಶ್ಲೋಕಗಳನ್ನು ಓದುವುದಕ್ಕೆ ಹೋಗುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಇದ್ದಾರೆ ಅವರು ಓದಿಕೊಳ್ಳಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಸವಲಿಂಗಪ್ಪನವರು ಆ ಶ್ಲೋಕಗಳು ಎಲ್ಲಿ ಸಿಗುತ್ತವೆಂದು ಹೇಳಿದರೆ ಸಾಕು. ಅದನ್ನು ನಾನು ನೋಡಲಿಕ್ಕೆ ಸುಲಭವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಅದರಲ್ಲಿ ನಂಬಿಕೆಯಿಲ್ಲ. ಅದು ರಾಜಕೀಯ ಪುಸ್ತಕವೆಂದು ನಾನು ಹೇಳುತ್ತಿದ್ದೇನೆ. ಆ ಪುಸ್ತಕದಲ್ಲಿ ಹೇಳಿರುವುದನ್ನು ನಾನು ಹೇಳುತ್ತಿದ್ದೇನೆ. ಯಾವ ಶ್ಲೋಕ ಎಲ್ಲಿ ಸಿಗುತ್ತದೆ ಎಂಬುದನ್ನು ಪಂಡಿತರನ್ನು ಕೇಳಿದರೆ ಹೇಳುತ್ತಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ೫ ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಬರ ಬರಬೇಕಾಗಿತ್ತೆ, ಬರ ಏತಕ್ಕೆ ಬರಬೇಕು ? ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಪ್ರಧಾನ ಮಂತ್ರಿಗಳು ಬ್ರಾಹ್ಮಣರೇ ಆಗಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಬ್ರಾಹ್ಮಣರು ಪ್ರಧಾನ ಮಂತ್ರಿಗಳಾಗಿದ್ದಾರೆನ್ನುವ ಬಹಳ ಸ್ವಾರಸ್ಯವಾದ ಮಾತು ಹೇಳಿದ್ದಾರೆ.

ಬ್ರಿಟಿಷರು ಏನಿದ್ದರೂ ಅವರ ಕೈಗೆ ಅಧಿಕಾರಿಗಳನ್ನು ಕೊಟ್ಟುಹೋದರು. ಆದರೆ ೮೫ ಪರ್ಸೆಂಟ್ ಹಿಂದುಳಿದವರು ಏನಿದ್ದಾರೆ ಅವರ ಕೈಯಿಂದ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಇವರಿಗೆ ಇದುವರೆಗೂ ಆಗಿಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ....

ಶ್ರೀ ರಾಮಕೃಷ್ಣ ಹೆಗಡೆ.—ಈಗ ಆ ಬ್ರಾಹ್ಮಣರಿಂದ ಅಧಿಕಾರ ಕಿತ್ತುಕೊಳ್ಳಬೇಕೆಂದರೆ ನಿಮಗೆ ಸಹಾಯ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಅದು ಇಲ್ಲಿಂದಲೇ ಪ್ರಾರಂಭವಾಗಲಿ ಎಂದು ಶ್ರೀ ಬಸವಲಿಂಗಪ್ಪನವರು ಹೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಸಹೃದತೆಯಿಂದ ಉತ್ತರ ಕೊಟ್ಟಿದ್ದಾರೆ ಅದಕ್ಕಾಗಿ ಅವರಿಗೆ ನನ್ನ ವಂದನೆಗಳು. ಸಮಾಜವನ್ನು ಬದಲಾವಣೆ ಮಾಡಬೇಕಲ್ಲ? ಅದನ್ನು ಮಾಡಬೇಕೆಂದು ನಾನು ಹೇಳುತ್ತಲೇ ಬಂದಿದ್ದೇವೆ. ಆದರೆ ಈ ದೇಶಕ್ಕೆ, ಅವರು ಹೇಳಿದ ಹಾಗೆ, ಸ್ವಾತಂತ್ರ್ಯ ಬಂದಾಗಿನಿಂದ ಅಧಿಕಾರ ಅವರ ಕೈಯಲ್ಲಿ ಇದೆ. ಅಲ್ಲಿಂದ ಇಲ್ಲಿಯವರೆಗೆ. ಇಲ್ಲಿ ಐದು ವರ್ಷಗಳಿಂದ ಇವರ ಕೈಯಲ್ಲಿ ಅಧಿಕಾರ ಇದೆ. ಬರ ಬಂತು, ಅದು ಹೋಗುವುದೇ ಇಲ್ಲ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುತ್ತಿದ್ದೇನೆ, ತಾವು ತಮ್ಮ ಎಲಿವೇಶನ್ ಅನ್ನು ಸ್ವಲ್ಪ ದಿವಸ ಬಿಟ್ಟರೆ, ಬದಲಾವಣೆಯಾದರೆ, ಒಳ್ಳೆಯದಾಗುತ್ತದೆಯೋ ಏನೋ ನೋಡೋಣ ಮಳೆ ಬರುತ್ತದೆಯೋ, ಬರ ಹೋಗುತ್ತದೆಯೋ ನೋಡೋಣ. ಅದಕ್ಕೆ ನಾನು ಪ್ರಾಸಂಗಿಕವಾಗಿ ಹೇಳಿದ್ದೇನೆ. ಇದು ಅವರಿಗೆ ಬಿಟ್ಟಿದ್ದು.

ಅಧ್ಯಕ್ಷರು.—ಶ್ರೀ ಬಸವಲಿಂಗಪ್ಪನವರೇ, ಮೊನ್ನೆ ದಿವಸ ನೀವು ೩೨ ನಿಮಿಷ ಮಾತನಾಡಿದ್ದೀರಿ ಇವತ್ತು ೫೫ ನಿಮಿಷ ಒಟ್ಟು ೮೭ ನಿಮಿಷ ಆಯಿತು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಸಮಸ್ಯೆ ಕರ್ನಾಟಕ ರಾಜ್ಯದಲ್ಲಿ ಬಂದರೂ ಕೂಡ ಕೇಂದ್ರದ ಕಡೆಗೆ ಕೈತೋರಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟು ದೀರ್ಘವಾಗಿ ಭಾಷಣ ಮಾಡುವಂಥ ಶೈಲಿ ನೋಡಿದರೆ ನೀವು ಮಹಾಬ್ರಾಹ್ಮಣರಾಗಿ ಕಾಣುತ್ತಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ತಮಗೆ ಗೊತ್ತಿರಬಹುದು, ಹಿಂದೆ ಶ್ರೀಮಾನ್ ಕೆ. ಟಿ. ಭಾಷ್ಯಂ ಇದ್ದರು. ಅವರೂ ಈ ಮಾತನ್ನು ಹೇಳಿದ್ದರು. ನೀವು ಈಗ ಹೇಳಿದ್ದೀರಿ ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಯಾವ ಕಂಡೀಶನ್ ಮೇಲೆ? ಈ ಮಠಗಳು ಇವೆಯಲ್ಲ, ನನ್ನನ್ನು ಒಬ್ಬ ಮಠಾಧಿಪತಿಯನ್ನಾಗಿ ಮಾಡಬೇಕು. ನಾನು ಅದಕ್ಕೆ ತಯಾರಿದ್ದೇನೆ ಮಾಡುತ್ತೀರಾ? ಬ್ರಾಹ್ಮಣರ ಮಠಕ್ಕೆ ? ಶಂಕರಾಚಾರ್ಯರ ಮಠಕ್ಕೆ ? ಎಲ್ಲಿ ಸ್ವಾಮಿ ಮಾಡುತ್ತೀರಿ ? ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಯಾವ ವಿಚಾರದಲ್ಲೇ ಮಾತನಾಡಿದರೂ ಕೇಂದ್ರದ ಕಡೆಗೆ ಕೈತೋರಿಸುವ ಚಟವನ್ನು ಇಟ್ಟುಕೊಂಡುಬಂದಿದ್ದಾರೆ. ಈ ರಾಜ್ಯವನ್ನು ನಿಮ್ಮ ಕೈಗೆ ಕೊಟ್ಟಿದ್ದಾರಲ್ಲ. ನೀವೇ

ಮಾಡಿ, ಏಕೆ ಆಗುವುದಿಲ್ಲ? ಆದರೆ ಕೇಂದ್ರದವರು ಸರಿಯಾಗಿ ಮಾಡಲಿಲ್ಲ ಎಂದು ಹೇಳಿದರೆ ಅದು ಹೇಗೆ ಸಮಂಜಸ ಆಗುತ್ತದೆ? ೩೦–೧೨–೮೭ನೇ ದಿವಸ ನೀವು ಕೇಂದ್ರದಲ್ಲಿ ಸಮಿಶ್ರ ಸರ್ಕಾರ ಮಾಡುತ್ತೇವೆ ಎಂದು ಹೊರಟಿದ್ದೀರಿ. ಏನು ಬೇಕಾದರೂ ಮಾಡಿ. ಆದರೆ ಈ ನಿಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಆಸಕ್ತಿವಹಿಸಿ ಇಲ್ಲಿ ಒಂದು ಮಾದರಿ ಸರ್ಕಾರವನ್ನು ಮಾಡಿ ಬೇರೆಯವರಿಗೆ ಬುದ್ಧಿ ಹೇಳುವುದಕ್ಕೆ ಹೋಗಿ, ಸಮ್ಮಿಶ್ರ ಸರ್ಕಾರ ಕೇಂದ್ರದಲ್ಲಿ ಆಗುತ್ತದೆಯೋ? ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ಏನು ಕನಸು ಕಂಡಿದ್ದೀರೋ ಅದು ನನಸಾಗುವುದಿಲ್ಲ. ಏಕೆ ಬೇಕು ಸಮ್ಮಿಶ್ರ ಸರ್ಕಾರ? ಕಾಂಗ್ರೆಸ್ ಜೊತೆಗೆ ಸಮ್ಮಿಶ್ರ ಸರ್ಕಾರ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮನ್ನು ನಾವು ಸೇರಿಸುವುದಿಲ್ಲ ಕಾರಣ ಏನು ಎಂದರೆ ನಿಮ್ಮ ಜನತಾ ಪಾರ್ಟಿ ಪಾರ್ಟಿಯೇ ಅಲ್ಲ...

ಶ್ರೀ ಎಂ. ವೀರಪ್ಪ ಮೊಯಿಲಿ.—ಅದಕ್ಕೇ ಬೇರೆ ಪಾರ್ಟಿ ಮಾಡುವುದಕ್ಕೆ ಹೊರಟಿದ್ದಾರೆ,

ಶ್ರೀ ಬಿ. ಬಸವಲಿಂಗಪ್ಪ.—ಕಾರಣ ಏನೆಂದು ನಾನು ಹೇಳುತ್ತೇನೆ, ಇಲ್ಲಿರ ತಕ್ಕಂಥವರೆಲ್ಲಾ ಕಾಂಗ್ರೆಸ್ಸಿನವರು. ನೀವು ಹಳೆಯ ಕಾಂಗ್ರೆಸ್‌ನಲ್ಲಿರಲಿಲ್ಲವೆ? ೧೯೬೯ನೇ ಇಸವಿ ಆದಮೇಲೆ ಬಂದಿರತಕ್ಕಂಥವರು. ಇವತ್ತು ಜನತಾ ಪಾರ್ಟಿ ಎಂದು ಮಾಡಿಕೊಂಡಿದ್ದಾರೆ. ಜನತಾ ಪಾರ್ಟಿ ಸರ್ಕಾರ ಇಡೀ ಇಂಡಿಯಾದೇಶದಲ್ಲಿ ಯಾವ ರಾಜ್ಯದಲ್ಲೂ ಇಲ್ಲ ಆದ್ದರಿಂದ ನೀವು ಏನು ಮಾಡುತ್ತಿದ್ದೀರಿ, ಬೇರೆಯವರ ಜೊತೆ ಸೇರಿಕೊಂಡು ಹೊಸ ಪಾರ್ಟಿ ಮಾಡಬೇಕೆಂದು ಪ್ಲಾನ್ ಮಾಡುತ್ತಿದ್ದೀರಿ ಇದಕ್ಕೆ ನನ್ನ ಶುಭಾಶಯಗಳು, ನೀವು ಹೊಸ ಪಾರ್ಟಿ ಮಾಡಿಕೊಳ್ಳಿ ಆದರೆ ನಮ್ಮ ಜೊತೆ ಮಾತ್ರ ಬರಬೇಡಿ. ನಾವು ನಿಮ್ಮನ್ನು ಸೇರಿಸುವ ಪ್ರಶ್ನೆಯೇ ಬರುವುದಿಲ್ಲ. ನಾವು ಬೇರೆಯಾರನ್ನೂ ಸೇರಿಸಿಕೊಂಡು, ಸಮ್ಮಿಶ್ರ ಸರ್ಕಾರವನ್ನು ಮಾಡಿಕೊಳ್ಳುವುದಕ್ಕೆ ಎಂದೂ ನಿರ್ಧಾರ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ತಾವು ಬಂದಮೇಲೆ ಎಲ್ಲಾ ಬಡವರ್ಗದವರಿಗೂ ಸಹಾಯ ಮಾಡುತ್ತೇವೆಂದು ಹೇಳಿದಿರಿ. ಯಾರ್ಯಾರಿಗೆ ಮಾಡಿದ್ದೀರೆಂದು ಪಟ್ಟಿಮಾಡಿ. ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳಿದಿರಿ. ಆದರೆ ಇದೇ ಹಿನ್ನೆಲೆಯಲ್ಲಿ ಅವರಿಂದ ಚಳುವಳಿ ಆಯಿತು ರೈತರು ನಿಮ್ಮಬಗ್ಗೆ ತೃಪ್ತಿಪಟ್ಟಿದ್ದಾರೆ ಎಂಬುದನ್ನು ತಾವು ಸ್ಪಷ್ಟವಾಗಿ ವಿಚಾರ ಮಾಡಬೇಕು. ಇವತ್ತು ರೈತರು ರಾಜಕೀಯ ಪಕ್ಷವನ್ನು ಮಾಡಿಕೊಂಡಿದ್ದಾರೆ. ಕಾರಣ ರೈತರ ಬಗ್ಗೆ ತಾವು ಏನು ಭರವಸೆ ಕೊಟ್ಟಿರಿ, ಏನೇನು ಮಾಡುತ್ತೇವೆಂದು ಹೇಳಿದಿರಿ ಅವೆಲ್ಲವೂ ಅವರಿಗೆ ನಿರಾಸೆಯಾಗಿದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಂದ ನಾವು ಉದ್ಧಾರವಾಗುವುದಿಲ್ಲವೆಂದು ಹೇಳಿ, ಬೇರೆ ರಾಜಕೀಯ ಪಕ್ಷವನ್ನೇ ಮಾಡಿಕೊಂಡಿದ್ದಾರೆ. ಇದು ಒಂದು ಆಯಿತು, ಎರಡನೇ ಪ್ರಶ್ನೆ ಎಲ್ಲರಿಗೂ ಉದ್ಯೋಗ ಮಾಡಿಕೊಡುತ್ತೇವೆಂದು ಹೇಳಿದಿರಿ. ಪ್ರತಿಯೊಂದು ಮನೆಗೂ ಒಬ್ಬರಿಗೆ ಉದ್ಯೋಗ ಕೊಡುತ್ತೇವೆಂದು ಹೇಳಿದಿರಿ ಇವತ್ತು ಉದ್ಯೋಗ ಕೊಟ್ಟಿದ್ದೀರಾ, ಈ ಬಗ್ಗೆ ನಿಯಮಗಳನ್ನು ಮಾಡಿದ್ದೀರಾ? ಇಲ್ಲಿ ಎಷ್ಟು ಉದ್ಯೋಗ ಇಲ್ಲದಿರುವವರು ಇದ್ದಾರೆ ಇರತಕ್ಕ ಜಾಗಗಳು ೪೪ ಸಾವಿರದ ೩೪೯ ಇವೆ. ಇವುಗಳನ್ನು ತುಂಬುವುದಕ್ಕೆ ಏನಾದರೂ ತಾವು ಪ್ರಯತ್ನವನ್ನು ಮಾಡಿದ್ದೀರಾ? ಯಾವುದೇ ಪ್ರಯತ್ನ ಇಲ್ಲ. ಇದಕ್ಕೆ ತದ್ವಿರುದ್ಧವಾಗಿ ತಾವು ಏನು ಮಾಡಿದ್ದೀರಿ ಎಂದರೆ ನೌಕರರ ನಿವೃತ್ತಿ ವಯಸ್ಸನ್ನು ೫೫ರಿಂದ ೫೮ರವರೆಗೆ ಜಾಸ್ತಿ ಮಾಡಿ. ಸುಮಾರು ೩–೪–೫ ವರ್ಷಗಳವರೆಗೆ ಯಾವ ಹುದ್ದೆಯನ್ನೂ ಭರ್ತಿ ಮಾಡುವುದಕ್ಕೆ ಇದ್ದ ಅವಕಾಶವನ್ನು ನಿರ್ಬಂಧ ಮಾಡಿದ್ದೀರಿ. ಈಗ ಅಲ್ಲಿ ಯಾರಿದ್ದಾರೆ ಈ ಸಮಾಜ ಬೇರೆ ಆಗಬೇಕು ಸಮಾಜದಲ್ಲಿ ಇಲ್ಲದಿರುವವರು ಇದ್ದಾರೆ. ಅವರಿಗೆ ಅವಕಾಶವನ್ನು ಮಾಡಿಕೊಡದೆ ಇವತ್ತು ೫೫ ವರ್ಷಕ್ಕೆ ನಿವೃತ್ತಿ ಆಗುವವರು ಯಾವ ಯಾವ ವರ್ಗದವರು ಎಷ್ಟಿದ್ದಾರೆ. ಬ್ಯಾಕ ವರ್ಡ್ ಕ್ಲಾಸ್‌ನಲ್ಲಿ ಅಷ್ಟು ಇಲ್ಲ, ಷೆಡ್ಯೂಲ್ಡ್ ಕ್ಲಾಸ್‌ನಲ್ಲಿ ಅಷ್ಟು ಜಾಸ್ತಿ ಇಲ್ಲ ಯಾರಿದ್ದಾರೆಂದರೆ ಮುಂಚೆ ಕೆಲಸಕ್ಕೆ ಯಾರು ಸೇರಿಕೊಂಡಿದ್ದರು ಅವರೆಲ್ಲರೂ ಬ್ರಾಹ್ಮಣರೆ ಇದ್ದಾರೆ ೫೫ ರಿಂದ ೫೮ ವರ್ಷಕ್ಕೆ ವಯಸ್ಸನ್ನು ಜಾಸ್ತಿ ಮಾಡಿದರೆ ಅನುಕೂಲ ಯಾರಿಗೆ ಆಯಿತು? ಇವರಿಗೇ ಆಯಿತು. ಮತ್ತೆ ಸಂಬಳ ಜಾಸ್ತಿ ಮಾಡಿದರು. ಒಂದಕ್ಕೆರಡರಷ್ಟು ಸಂಬಳ ಜಾಸ್ತಿ ಮಾಡಿದ್ದಾರೆ, ಇದರಿಂದ ಯಾರಿಗೆ ಅನುಕೂಲ ಆಯಿತು ಇವರಿಗೇ ಅನುಕೂಲ ಆಯಿತು. ನಾನು ಈ ರೀತಿ ಹೇಳುತ್ತೇನೆಂದು ತಾವು ಏನೂ ತಿಳಿದುಕೊಳ್ಳಬಾರದು. ವಾಸ್ತವಿಕವಾದ ಉದ್ದೇಶ ಏನಿದೆ, ಎಂದರೆ ಇದು ಉದ್ದೇಶ, ಇವತ್ತು ಕೆಲಸವಿಲ್ಲದೆ ನೋಂದಾಯಿಸಿಕೊಂಡಿರತಕ್ಕಂಥವರು ಎಷ್ಟು ಜನರು ಇದ್ದಾರೆ ಎಂದರೆ ಸುಮಾರು ೧೦ ಲಕ್ಷ ಜನ ಇದ್ದಾರೆ. ಈ ೧೦ ಲಕ್ಷ ಜನಕ್ಕೆ ಯಾವಾಗ ಕೆಲಸ ಕೊಡುತ್ತೀರಿ? ನೀವು ಇವರಿಗೆ ಕೆಲಸ ಕೊಡುವುದಕ್ಕೆ ಪ್ರಯತ್ನವನ್ನೂ ಮಾಡುವುದಿಲ್ಲ, ಇದು ಬಿಟ್ಟು ಇರುವವರಿಗೆ ಭಡ್ತಿ ಕೊಟ್ಟುಕೊಂಡು

ಹೋಗುತ್ತಿದ್ದೀರಿ. ಕೆಲಸ ಮಾತ್ರ ಕೊಡುವುದಿಲ್ಲ. ಇವತ್ತು ೧೦ ಲಕ್ಷ ಜನ ನಿರುದ್ಯೋಗಿಗಳು ನೋಂದಾಯಿಸಿಕೊಂಡಿದ್ದಾರೆ. ಅವರೆಲ್ಲರೂ ತಮಗೆ ಕೆಲಸಕ್ಕೋಸ್ಕರ ಅರ್ಜಿ ಬರೆದುಕೊಳ್ಳಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಕೇರಳದಲ್ಲಿ ಕೂಡ ಇದೇರೀತಿ ಎಲ್ಲ ಯುವಕರಿಗೂ ಕೆಲಸ ಕೊಡುತ್ತೇವೆಂದು ಹೇಳಿದರು. ಆದರೆ ಅವರೂ ಕೊಡಲಿಲ್ಲ. ೧೦-೧೦ ಸಾವಿರ ಜನ ಅರ್ಜಿ ಬರೆದ ನಮಗೆ ಕೆಲಸ ಕೊಡಿ ಎಂದು ಅಲ್ಲಿ ಕಳುಹಿಸಿದ್ದಾರೆ. ಇದೇರೀತಿ ಇಲ್ಲಿ ಯಾರು ನಿರುದ್ಯೋಗಿಗಳು ಇದ್ದಾರೆ, ಕರ್ನಾಟಕ ರಾಜ್ಯದಲ್ಲಿ, ತಮಗೆ, ನೇರವಾಗಿ ಕೆಲಸ ಕೊಡಿ ಎಂದು ಅರ್ಜಿ ಹಾಕುವುದಕ್ಕೆ ನಾನು ಈ ಸದನದಿಂದ ಅವರನ್ನು ಬೇಡಿಕೊಳ್ಳುತ್ತೇನೆ.

ಈಗ ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಷನ್ ಮಾಡಿ ಹಿಂದುಳಿದ ವರ್ಗದವರಿಗೆ ಸಹಾಯ ಮಾಡುತ್ತೇವೆಂದು ಹೇಳಿದಿರಿ. ತಾವು ಬಂದಾಗ ಒಂದು ಕಮಿಷನ್ ಮಾಡಿದಿರಿ. ಅವರು ಮೂರು ವರ್ಷಗಳ ಕೆಲಸ ಮಾಡಿ ಒಂದು ರಿಪೋರ್ಟ್ ಕೊಟ್ಟರು. ವೆಂಕಟಸ್ವಾಮಿ ಕಮಿಷನ್‌ನವರು ಕೊಟ್ಟ ರಿಪೋರ್ಟನ್ನು ತಾವು ಒಪ್ಪಲಿಲ್ಲ. ಯಾರೋ ಒಬ್ಬರು ಚಳುವಳಿ ಮಾಡಿದರು ಎಂದು ಅದನ್ನು ವಜಾ ಮಾಡಿದಿರಿ. ಪುನಃ ಒಬ್ಬರನ್ನು ನೇಮಕ ಮಾಡಿದ್ದೀರಿ. ಶ್ರೀ ಓ. ಎ. ಚನ್ನಪ್ಪರೆಡ್ಡಿಯವರನ್ನು ನೇಮಕ ಮಾಡಿರುವುದರಲ್ಲಿ ವೈಯಕ್ತಿಕವಾಗಿ ನನ್ನದೇನೂ ಭಿನ್ನಾಭಿಪ್ರಾಯ ಇಲ್ಲ. ಅವರು ಸಮಾಜವಾದದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕ ಮಹಾನ್ ವ್ಯಕ್ತಿ, ಅವರು ಬರೆದಿರತಕ್ಕಂಥ ಜಡ್ಜ್‌ಮೆಂಟ್‌ಗಳ ಬಗ್ಗೆ ನನಗೆ ಮೆಚ್ಚುಗೆ ಉಂಟು, ಅವರು ಸಮಾಜವಾದದಲ್ಲಿ ಇಟ್ಟಿರತಕ್ಕಂಥ ಅಭಿಪ್ರಾಯಗಳಿಗೆ ನನ್ನ ಮೆಚ್ಚುಗೆ ಉಂಟು, ಎಲ್ಲರ ಮೆಚ್ಚುಗೆಯೂ ಉಂಟು. ಅವರ ಬಗ್ಗೆ ವೈಯಕ್ತಿಕವಾಗಿ ನಾನು ಏನೂ ಹೇಳುವುದಿಲ್ಲ. ಆದರೆ ನೀವು ಐದು ವರ್ಷ ಬರೀ ಕಮಿಷನ್ ನೇಮಕ ಮಾಡುವುದರಲ್ಲಿ ಕಾಲ ಕಳೆದರೆ, ನಿಮಗೆ ಬಡವರ ಬಗ್ಗೆ ನಂಬಿಕೆ ನಿಷ್ಠೆ ಇದೆ ಎಂದು ಯಾವ ರೂಪದಲ್ಲಿ ನಾವು ತಿಳಿದುಕೊಳ್ಳಬೇಕು. ನಾವು ಹೇಗೆ ತಿಳಿದುಕೊಳ್ಳಬೇಕೆಂದು ನೀವು ನೇರವಾಗಿ ನಮಗೆ ಹೇಳಬೇಕು.

ಆಮೇಲೆ ತಾವು ಸರ್ಕಾರ ನಡೆಸತಕ್ಕಂಥ ರೀತಿ ಸರಿಯಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನೌಕರ ವರ್ಗದವರು ಏನಿದ್ದಾರೆ ಅವರಲ್ಲಿ ೭೮ ನೌಕರರ ಸಂಘಗಳು ಇವೆ. ಎಲ್ಲರಿಗೂ ತಾವು ಸಂಘ ಕಟ್ಟುವುದಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ ಮಾನ್ಯ ಲಕ್ಷ್ಮೀಸಾಗರ್‌ರವರು ಏನು ತಿಳಿಯುತ್ತಾರೋ, ಬಿಡುತ್ತಾರೋ ನನಗೆ ಗೊತ್ತಿಲ್ಲ, ಕಾನ್‌ಸ್ಟಿಟ್ಯೂಷನ್ ೧೯ನೇ ಕಲಮ್ ಪ್ರಕಾರ ಯಾರು ಬೇಕಾದರೂ ಸಂಸ್ಥೆಗಳನ್ನು ಮಾಡಬಹುದೆಂದು ಅವರು ಹೇಳುತ್ತಾರೆ. ಆದರೆ ೭೮ ಸಂಸ್ಥೆಗಳನ್ನು ಮಾಡುವುದಕ್ಕೆ ಪರವಾನಗಿ ಕೊಟ್ಟು ಆ ಸಂಸ್ಥೆಗಳನ್ನು ಇಟ್ಟುಕೊಂಡು ನೀವು ಯಾವ ರೀತಿ ರಾಜ್ಯಭಾರವನ್ನು ನಡೆಸುವುದಕ್ಕೆ ಆಗುತ್ತದೆ? ಪ್ರತಿದಿವಸ ನೋಡಿದರೂ ಧರಣಿ, ಸ್ಟ್ರೈಕ್, ದಿವಸ ನೋಡಿದರೆ ಒಂದು ಬೋರ್ಡ್, ಒಂದು ಸ್ಟ್ರೈಕ್ ಮಾಡುವುದು, ಧರಣಿ ಮಾಡುವುದು. ಕಾಲೇಜ್‌ನವರು ಧರಣಿ ಮಾಡುವುದು, ಗುಮಾಸ್ತರು ಧರಣಿ ಮಾಡುವುದು, ಪ್ಯೂನ್‌ಗಳು ಧರಣಿ ಮಾಡುವುದು, ದಫೇದಾರರು ಧರಣಿ ಮಾಡುವುದು. ನೀವು ಇಂಥಹ ಒಂದು ವ್ಯವಸ್ಥೆ ಇಟ್ಟುಕೊಂಡು ಯಾವ ರೀತಿ ಸರಕಾರ ನಡೆಸುತ್ತೀರಿ? ಟ್ರೇಡ್ ಯೂನಿಯನ್ ತರದ ಸ್ವತಂತ್ರ್ಯ ಇವರಿಗೆ ಇದೆಯೋ ಎಂದು ಕೇಳಿದರೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೀರಿ ಏತಕ್ಕೆಂದರೆ ಸರಕಾರಿ ನೌಕರರಿಗೆ ಸೇರುವಾಗ ಯಾವ ಒಂದು ಆಧಾರದ ಮೇಲೆ, ಯಾವ ನಿಯಮಗಳಿಗೆ ಒಳಪಟ್ಟು ಸೇರುತ್ತಾರೋ, ಅವರು ರಿಟೈರ್ ಆಗುವ ವರೆಗೂ ಆ ನಿಯಮಗಳು ಅವರಿಗೆ ಅನ್ವಯಿಸುತ್ತವೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಸಹ ಇದೆ. ಅದನ್ನು ಬಿಟ್ಟು ಟ್ರೇಡ್ ಯೂನಿಯನ್ ರೀತಿ ಇವರು ರಾಜಕೀಯವನ್ನು ಮಾಡಿಕೊಂಡು ಹೋದರೆ

೫-೦೦ ಪಿ. ಎಂ.

ಸರಕಾರ ನಡೆಯುವುದು ಹೇಗೆ? ಸರಕಾರ ಸ್ಥಗಿತವಾಗತಕ್ಕಂಥ ಪರಿಸ್ಥಿತಿ ಬಂದಿದೆ. ಇದಕ್ಕೆ ನೀವು ಸಹಾಯಕರಾಗುತ್ತೀರಿ. ಸರಕಾರದ ಹಿತವನ್ನು ಬಲಿಕೊಟ್ಟು ಅವರ ಜೊತೆ ಸಮಜಾಯಿಸಿ ಮಾಡುತ್ತೀರಿ ಅವರ ಹತ್ತಿರ ರಾಜಿ ಮಾಡಿಕೊಳ್ಳುತ್ತೀರಿ, ಇದಕ್ಕೆ ಪ್ರಯತ್ನ ಮಾಡುತ್ತೀರಿ. ತಮ್ಮ ಸೆಕ್ರೆಟೇರಿಯೇಟ್‌ನ್ನೇ ತೆಗೆದುಕೊಳ್ಳಿ. ಗುಮಾಸ್ತರು ಸ್ಟ್ರೈಕ್ ಮಾಡಿದರೆ, ತಮ್ಮ ಚೇಂಬರ್‌ನಲ್ಲಿ ಅವರನ್ನು ಕರೆದು ಅವರ ಹತ್ತಿರ ರಾಜಿ ಮಾಡಿಕೊಳ್ಳುವುದಕ್ಕೆ ಹೊರಟ್ಟಿದ್ದೀರಿ. ಗುಮಾಸ್ತರಾಯಿತು ಪ್ಯೂನ್ಸ್ ಆಯಿತು, ಬೇರೆಯವರು ಆಯಿತು, ಹೀಗೆ ಮಾಡುತ್ತಾ ಹೋದರೆ ಸರ್ಕಾರದ ಕೆಲಸ ಹೇಗೆ ನಡೆಯುವುದು? ಸೆಕ್ರೆಟೇರಿಯೇಟ್ ಕೆಲಸ ಹೇಗೆ ನಡೆಯುವುದು? ಸಾರ್ವಜನಿಕರ ಕೆಲಸ ಹೇಗೆ ನಡೆಯುವುದು? ಇದರ ಬಗ್ಗೆ ತೀವ್ರವಾಗಿ ಗಮನ ಕೊಡದೇ ಹೋದರೆ ಸರ್ಕಾರವನ್ನು

ನಡೆಸುವುದಕ್ಕೆ ನಿಮ್ಮಿಂದ ಆಗುವುದಿಲ್ಲ. ಸರಕಾರ ನಡೆಸತಕ್ಕಂಥ ಮಂತ್ರಿ ವರ್ಗದವರು ಏನಿದ್ದಾರೆ ಅವರಿಗೆ ಸರಕಾರಿ ಜನ ಏನಿದ್ದಾರೆ, ಅಧಿಕಾರಿಗಳು ಏನಿದ್ದಾರೆ ಅವರಿಗೆ ನಿರ್ದೇಶನ ಕೊಡತಕ್ಕದ್ದು ಗೊತ್ತೇ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ನೌಕರವರ್ಗದವರು ಸ್ವತಂತ್ರ್ಯವಾಗಿ ಕೆಲಸ ಮಾಡುತ್ತಿದ್ದಾರೆ, ಯಾರ ಮಾತನ್ನೂ ಕೇಳುವುದಕ್ಕೂ ಅವರು ತಯಾರಾಗಿಲ್ಲ. ಯಾರು ವಶೀಲಿ ಬಾಜಿ ಮಾಡುತ್ತಾರೋ ಯಾರು ಹಣ ಕೊಡುತ್ತಾರೋ, ಯಾರು ಲಂಚ ಕೊಡುತ್ತಾರೋ, ಅಂತಹವರಿಗೆ ಕೆಲಸ ಆಗುತ್ತದೆಯೋ ವಿನಹ ಇವತ್ತಿನದಿವಸ ಯಾರೂ ನೇರವಾಗಿ ಹೋಗಿ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇದಕ್ಕೆ ಆಧಾರ ನನ್ನಲ್ಲಿದೆ. ಮುಖ್ಯ ಮಂತ್ರಿಗಳ ಅಭಿಪ್ರಾಯದ ಆಧಾರದ ಮೇಲೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವರು ದೊಡ್ಡದಾಗಿ ಅಧಿಕಾರಿಗಳಿಗೆ ಕಾಗದ ಬರೆದಿದ್ದಾರೆ. ಚೀಫ್ ಸೆಕ್ರೆಟರಿಗೆ ಎಲ್ಲಾ ಸೆಕ್ರೆಟರಿಗಳಿಗೆ ಕಾಗದ ಬರೆದಿದ್ದೀರಿ. ಲಂಚಗುಳಿತನ ಜಾಸ್ತಿಯಾಗಿದೆ. ಎಲ್ಲಾ ಮಟ್ಟದಲ್ಲೂ ಲಂಚಗುಳಿತನ ಇದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ತಾವು ಮುಖ್ಯ ಮಂತ್ರಿಗಳಾಗಿ ಬಂದಾಗ ಏನು ಹೇಳಿದ್ದೀರಿ ಎಂದರೆ ಇದನ್ನು ನಾನು ನಿಲ್ಲಿಸುತ್ತೇನೆ ಎಂದು ಹೇಳಿದಿರಿ. ಲಂಚಗುಳಿತನ ನಿಲ್ಲಿಸುತ್ತೇನೆ, ಸರಿಯಾಗಿ ಸರಕಾರ ನಡೆಸಿಕೊಂಡು ಹೋಗುತ್ತೇನೆ ಎಂದು ಭರವಸೆ ಕೊಟ್ಟಿರಿ. ಅದೆಲ್ಲಾ ಓದಬೇಕೆಂದರೆ ನನ್ನ ಹತ್ತಿರ ಇದೆ, ಓದುತ್ತೇನೆ.

ಓದಬೇಕೆಂದು ಹೇಳಿದರೆ ಓದುತ್ತೇನೆ. ನನ್ನ ಹತ್ತಿರ ಎಲ್ಲಾ ಇದೆ. ಆದರೆ ೩-೪ ವರ್ಷಗಳಾದ ಮೇಲೆ ಈ ಸರ್ಕಾರದಲ್ಲಿ ಲಂಚಗುಳಿತನ ಇದೆ ಎನ್ನುವುದನ್ನು ಅವರೇ ಒಪ್ಪಿಕೊಂಡಿರತಕ್ಕಂಥಾದ್ದು ಇಲ್ಲಿದೆ. ಈ ಲಂಚಗುಳಿತನವನ್ನು ಯಾವ ರೀತಿಯಲ್ಲಿ ತಡೆಯುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎನ್ನುವುದನ್ನು ತಾವು ದಯಮಾಡಿ ಹೇಳಿ. ಜನರಿಗೆ ತಾವು ಬಂದಾಗ ಏನು ಹೇಳಿದಿರಿ. ಇದು ಬರೀ ನಾಟಕವಲ್ಲದೆ ಬೇರೇನೂ ಅಲ್ಲ. ಈ ರೀತಿಯಾದರೆ ತಾವು ಯಾವ ರೀತಿ ಸರ್ಕಾರ ನಡೆಸಿಕೊಂಡು ಹೋಗುತ್ತೀರಿ. ಈ ರೀತಿ ಯಾದರೆ ನೀವು ಜನಗಳ ಸೇವೆ ಮಾಡಿದಂತಾಗುವುದಿಲ್ಲ. ಈ ಬಗ್ಗೆ ಸರ್ಕಾರದ ಕಡೆಯಿಂದ ಯಾವ ನಿಯಂತ್ರಣವು ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮುಖ್ಯ ಮಂತ್ರಿಗಳು ಬಹಳ ಧಕ್ಷರು ಇದ್ದಾಗೆ. ಅವರ ಮಂತ್ರಿ ಮಂಡಲದ ಮಂತ್ರಿಗಳು ದಕ್ಷರಾಗಿರಲೇಬೇಕು. ಆ ಮಂತ್ರಿಗಳ ಮಾತನ್ನು ಅವರ ಸೆಕ್ರೆಟರಿಗಳು ಮತ್ತು ಕೆಳಗಿನ ಅಧಿಕಾರಿಗಳು ಕೇಳಲೇಬೇಕು. ಒಂದು ವೇಳೆ ಅಧಿಕಾರಿ ವರ್ಗ ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಶೌರ್ಯ ನಿಲುವು ಸತ್ಯಸಂದತೆ ನಿಮ್ಮಲ್ಲಿ ಇರಲೇಬೇಕು. ನಿಮ್ಮಲ್ಲಿ ಆ ಒಂದು ಸತ್ಯಸಂದತ ಇಲ್ಲದೆ ಹೋದರೆ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲವೆನ್ನುವುದು ನನ್ನ ಸ್ಪಷ್ಟ ಅನುಭವ, ಅಂತಹ ಒಂದು ಸತ್ಯಸಂದತೆ ಇಲ್ಲದಿದ್ದರೆ ಲಂಚಗುಳಿತನ ಬೆಳೆಯುತ್ತದೆ. ನೀವು ಅಮಿಷಗಳಿಗೆ ಕಿವಿ ಕೊಟ್ಟರೆ ಹೇಗೆತಾನೆ ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ. ನೀವು ಅಮಿಷಗಳಿಗೆ ಕಿವಿಗೊಡದೆ ಸತ್ಯಸಂದರಾಗಿದ್ದರೆ ಮಾತ್ರ ಸರ್ಕಾರ ನಡೆಸುವುದಕ್ಕೆ ಸಾಧ್ಯ ನೀವೇನಾದರೂ ಲಂಚಗುಳಿತನಕ್ಕೆ ಆಸೆ ಪಟ್ಟರೆ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ ಇದು ನನ್ನ ಸ್ಪಷ್ಟ ಅಭಿಮತ. ಮೇಲ್ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಏನಾದರೂ ಲಂಚಗುಳಿತನಕ್ಕೆ ಸಿಕ್ಕಿಬಿದ್ದರೆ ಲಂಚ ತೆಗೆದುಕೊಂಡರೆ ಅವರ ಕೆಳಗಡೆ ಇರತಕ್ಕಂಥ ಅಧಿಕಾರಿಗಳು ಸಹ ಸಲೀಸಾಗಿ ಸ್ವತಂತ್ರ್ಯವಾಗಿ ಲಂಚವನ್ನು ಓಪನ್ ಆಗಿ ತೆಗೆದುಕೊಳ್ಳುವುದಕ್ಕೆ ಶುರು ಮಾಡುತ್ತಾರೆ. ಈ ಮಾತನ್ನು ಅನುಭವದಿಂದ ಹೇಳುತ್ತಿದ್ದೇನೆ. ನಾನೇನು ಈಗ ಮಂತ್ರಿಯಲ್ಲ, ಸದಸ್ಯನಾಗಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ ದುಡ್ಡು ಕೊಡದೆ ಕೆಲಸವಾಗುವುದಿಲ್ಲವೆನ್ನುವುದು ನನ್ನ ಸ್ಪಷ್ಟ ಅನುಭವ. ನಾನು ಹೇಳಿದೆ ಇದು ಸಾರ್ವಜನಿಕರ ಕೆಲಸ ಮಾಡಿ ಎಂದು ಆ ಕೆಲಸವಾಗಲೇ ಇಲ್ಲ. ಆಮೇಲೆ ನಮಗೆ ಬೇಕಾದವರು ಒಬ್ಬರು ಹೋಗಿ ಎಲ್ಲಾ ಕೆಲಸವನ್ನು ಒಂದೇ ದಿವಸದಲ್ಲಿ ಮಾಡಿಕೊಂಡು ಬಂದಿದ್ದಾರೆ, ಹೇಗೆಂದರೆ ಅವರು ಏನೋ ತೆಗೆದುಕೊಳ್ಳುವುದು ತೆಗೆದುಕೊಂಡು ಆ ಕೆಲಸ ಒಂದೇ ದಿವಸದಲ್ಲಿ ಮಾಡಿದರು. ಇದು ನನ್ನ ಅನುಭವ. ಇದೇ ರೀತಿಯಲ್ಲಿ ನನ್ನಂತಹವನಿಗೆ ಒಂದು ಪ್ರತಿಫಲವಾದರೆ ಇನ್ನು ಬೇರೆಯವರಿಗೆ ಹೇಗೆ? ನಾನು ಯಾರಿಗೂ ಕೊಡುವುದಕ್ಕೂ ಹೋಗುವುದಿಲ್ಲ ತೆಗೆದುಕೊಳ್ಳುವುದಕ್ಕೂ ಹೋಗುವುದಿಲ್ಲ. ನೀವು ಇವತ್ತು ರೈತರಿಗೆ ವಿರೋಧಿಯಾಗಿದ್ದೀರಿ. ಹಿಂದುಳಿದ ವರ್ಗದವರಿಗೆ ಆಸೆ ತೋರಿಸಿ ಕಮಿಷನ್ ಮಾಡಿ ಅದನ್ನು ಸಹ ಮುಂದಕ್ಕೆ ಹಾಕಿ ನಿರಾಸೆ ಮಾಡಿಸಿದಿರಿ. ಇನ್ನು ಮುಸ್ಲಿಂರ ಬಗ್ಗೆ ಹೇಳಿದ್ದಿರಿ. ಮುಸ್ಲಿಂರ ಬಗ್ಗೆ ರಿಪೋರ್ಟ್ ಕೊಟ್ಟ ಮೇಲೂ ಜಾರಿಗೆ ಕೊಡದೆ ಇನ್ನೊಂದು ಕಮಿಷನ್ ಮಾಡು

ತ್ತೇವೆಂದು ಹೇಳಿ ಅದನ್ನು ಸಹ ಮುಂದಕ್ಕೆ ಹಾಕಿದಿರಿ ಇದು ಯಾವ ವ್ಯವಸ್ಥೆ ? ಈಗ ಪರಿಶಿಷ್ಟ ಜಾತಿಯವರ ಬಗ್ಗೆ ತಾವೇನು ಹೇಳಿದಿರಿ ಪರಿಶಿಷ್ಟ ಜಾತಿಯವರಿಗೆ ಸ್ಕಾಲರ್‌ಷಿಪ್ ಕೊಡುತ್ತೇವೆಂದು ಹೇಳಿದಿರಿ ಅದು ಬಿಟ್ಟರೆ ನೂರಾರು ಹಾಸ್ಟಲ್‌ಗಳನ್ನು ಮಾಡುತ್ತೇವೆಂದು ಹೇಳಿದಿರಿ, ಕೆಲಸ ಕೊಡುತ್ತೇವೆಂದು ಹೇಳಿದಿರಿ, ಪದವೀಧರರಾದಂತಹವರಿಗೆ ಇವೊತ್ತಿನವರೆಗೆ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ ? ನೀವು ಒಬ್ಬರಿಗೂ ಕೆಲಸ ಕೊಟ್ಟಿಲ್ಲ. ನೀವು ಬಂದಾಗಿನಿಂದಲೂ ರಿಕ್ರೂಟ್‌ಮೆಂಟ್ಸ್ ಆಗಿಲ್ಲ. ಮತ್ತೆ ಪರಿಶಿಷ್ಟ ಜಾತಿಯವರಿಗೆ ಸಂಬಂಧಪಟ್ಟ ಹಾಗೆ ಒಂದು ಕಮಿಷನ್ ಮಾಡಿ ಅವರು ತಮ್ಮ ಶಿಫಾರಸ್ಸ್‌ಗಳನ್ನು ತಮಗೆ ಸಲ್ಲಿಸಿದ್ದಾರೆ ಆ ಬಗ್ಗೆ ಏನು ಮಾಡಿದಿರಿ ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ, ಗುಡ್ಡಗಾಡು ಜನರಿಗೆ ಅನುಕೂಲವಾಗುವಂತೆ ತಾವೇನು ಮಾಡಿದಿರಿ ? ಎಷ್ಟೋ ಕಮಿಷನ್‌ಗಳನ್ನು ನೇಮಕ ಮಾಡುತ್ತೀರಿ ಅವರು ಅವಧಿ ಕೊಡುತ್ತಾರೆ ಆದರೆ ಅದನ್ನು ಜಾರಿಗೆ ಮಾತ್ರ ಕೊಡುವುದಿಲ್ಲ. ಈಗ ಕಾಕಾ ಕಾಲೇಲ್ಕರ್ ಕಮಿಷನ್ ರಿಪೋರ್ಟನ್ನೂ ಯಾವ ರಾಜ್ಯದವರು ನೋಡಲಿಲ್ಲ. ಆದರೆ ಆ ರಿಪೋರ್ಟನ್ನು ಅಸ್ಸಾಂನಲ್ಲಿ ಜಾರಿಗೆ ಕೊಟ್ಟಿರೇನು ? ಆಮೇಲೆ ಮಂಡಲ್ ಕಮಿಷನ್ ರಿಪೋರ್ಟ್ ಜಾರಿಗೆ ಕೊಟ್ಟಿರಂತ್ತೇನೆ ಕಮಿಷನ್‌ಗಳನ್ನು ನಿಮಗೆ ತೋಚಿದ ಹಾಗೆ ಮಾಡಿದ್ದೀರಿ. ನಿಮ್ಮ ಕೆಲಸ ಸರಿಯಾಗಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ತಾವೀಗ ಉನ್ನತ ಮಟ್ಟದವರು. ಈ ದೇಶದಲ್ಲಿ ಎಲ್ಲರಿಗೂ ಗೊತ್ತಿರುವ ವ್ಯಕ್ತಿ. ಈ ದೇಶದಲ್ಲಿ ಕೂಲಿ ಮಾಡುತ್ತಿರುವಂತಹ ಜನರು ಎಷ್ಟು ಜನ ಇದ್ದಾರೆ ? ಸುಮಾರು ೨೬ ಕೋಟಿ ಜನ ಈ ಇಂಡಿಯಾ ದೇಶದಲ್ಲಿದ್ದಾರೆ ಅವರ ಪರಿಸ್ಥಿತಿ ಏನು ?

ಬಹಳ ಜನ ಪರರ ಆಸ್ತಿಯಲ್ಲಿ ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಇವರುಗಳೆಲ್ಲಾ ಪರರನ್ನೇ ನಂಬಿಕೊಂಡು ಜೀವನ ಮಾಡತಕ್ಕ ಪರಿಸ್ಥಿತಿ ಇದೆ. ಆಸ್ತಿ ಇಲ್ಲದೇ, ಜೀವನ ಮಾಡುವುದಕ್ಕೆ ಯಾವುದೇ ಆಧಾರ ಇಲ್ಲದೆ ಇರತಕ್ಕ ಜನಗಳಿಗೆ ತಾವು ಏನು ಸಹಾಯ ಮಾಡಿದ್ದೀರಿ ? ಬರಗಾಲ ಬಂದರೆ ಆ ಬಡವರ ಮಕ್ಕಳು ಸಾಯುವ ಪರಿಸ್ಥಿತಿಗೆ ಬರುತ್ತವೆ. ಇಂಥ ಪರಿಸ್ಥಿತಿ ಇರತಕ್ಕ ಜನಗಳು ನಮ್ಮ ಕರ್ನಾಟಕದಲ್ಲಿ ಕಾಲು ಭಾಗದಷ್ಟು ಇದ್ದಾರೆ. ಅಂಥವರ ಬಗ್ಗೆ ತಾವು ಯೋಚನೆ ಮಾಡಿದ್ದಿರಾ? ಈ ನಮ್ಮ ದೇಶದಲ್ಲಿ ಎರಡು ಭಾರತಗಳು ಇವೆಯೆಂದು ತಾವೇ ಹೇಳಿದ್ದೀರಿ. ಒಂದು, ಸಂಪತ್ತು ಇರತಕ್ಕ ಜನಗಳ ಭಾರತ, ಇನ್ನೊಂದು ಹೊಟ್ಟೆಗೆ ಇಲ್ಲದವರ ಭಾರತ. ಇದು ನಿಜವಾಗಿಯು ಸತ್ಯ. ಹೊಟ್ಟೆಗೆ ಇಲ್ಲದವರ ಭಾರತಕ್ಕೆ ತಾವು ಏನು ಮಾಡಿದ್ದೀರಿ ? ಬಡವರ ಅಂತಸ್ತನ್ನು ಬದಲಾವಣೆ ಮಾಡುವುದಕ್ಕೆ ತಾವು ಏನು ಮಾಡಿದ್ದೀರಿ? ಎಂಬದನ್ನು ತಾವು ದಯಮಾಡಿ ಹೇಳಬೇಕು.ನಾನು ಸಮಾಜ ಸೇವಕ. ತಾವು ಸಹ ಸಮಾಜ ಸೇವಕರು,ನಾನೂ ರಾಜಕೀಯಕಾರ್ಯಕರ್ತನಾಗಿದ್ದೇನೆ,ನೀವು ರಾಜಕೀಯ ಕಾರ್ಯಕರ್ತರಾಗಿದ್ದೀರಿ. ನಾವುಗಳು ಈ ಸಮಾಜದಲ್ಲಿರತಕ್ಕ ಸಮಸ್ಯೆಗಳನ್ನು ಬಿಡಿಸಿ ಪರಿಹಾರವನ್ನು ಕಂಡು ಹಿಡಿಯಬೇಕು. ಈಗಿರುವ ವ್ಯವಸ್ಥೆಯನ್ನೇ ಬದಲಾವಣೆ ಮಾಡಬೇಕು. ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡದೇ ನಾವೆಲ್ಲರೂ ಅದರಲ್ಲೆ ಸಿಕ್ಕಿಹಾಕಿಕೊಂಡಿದ್ದೇವೆ. ಇದೇ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗದೇ ಹೊಸ ವ್ಯವಸ್ಥೆಗೆ ದಾರಿ ಮಾಡಬೇಕು. ಸಮಾಜದಲ್ಲಿರತಕ್ಕ ವೆಸ್ಟೆಡ್ ಇಂಟರೆಸ್ಟ್‌ಗಳಿಗೆ ತೃಪ್ತಿಯಾಗುವಂತೆ ನಾವು ಭಾಷಣ ಮಾಡಿ ನಮ್ಮ ಹಿತದಲ್ಲಿ ನಾವು ಮುಂದುವರಿಯತಕ್ಕ ಪ್ರಯತ್ನ ಏನು ಇದೆಯೋ, ಅದನ್ನು ನಾವು ಮಾಡಬಾರದು. ಆ ರೀತಿ ನಾವು ಮಾಡಿದರೆ ನಮ್ಮ ನಿಲುವಿಗೆ ಅದು ವಿರುದ್ಧವಾಗುತ್ತದೆ. ಆದರೆ, ನೀವು ಇದುವರೆಗೆ ಯಾವುದೇ ವ್ಯವಸ್ಥೆಯನ್ನು ಬದಲಾವಣೆ ಮಾಡುವಲ್ಲಿ ಯಶಸ್ವಿಯಾಗಿಲ್ಲವೆಂದು ನಾನು ಹೇಳಬೇಕಾಗುತ್ತದೆ, ನಮ್ಮ ರಾಜ್ಯದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದವರು ಬಹಳ ಜನ ಇದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಆರಿಸಿ ಬಂದಿರುವವರಿಗೆ ಮಂತ್ರಿ ಕೆಲಸವನ್ನೂ ಕೊಡುತ್ತೀರಿ ಆದರೆ ಅವರುಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡುವುದಿಲ್ಲ. ಅವರು ಏನು ಕೆಲಸ ಮಾಡಬೇಕೆಂದು ಹೇಳುತ್ತಾರೋ ಅದಕ್ಕೆ ಮನ್ನಣೆ ಸಿಗುವುದಿಲ್ಲ. ೧೯೮೭-೮೮ರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ವಿದ್ಯಾರ್ಥಿಗಳಿಗಾಗಿ ೧೦೦ ಹಾಸ್ಟೆಲ್‌ಗಳನ್ನು ಕಟ್ಟಿಸುತ್ತೆವೆಂದು ಹೇಳಲಾಗಿತ್ತು,

ಶ್ರೀ ಜಿ. ಬಸವಣ್ಣೆಪ್ಪ.— ಸ್ವಲ್ಪ ಯೀಲ್ಡ್ ಆಗುವ ಹಾಗಿದ್ದರೆ, ಷೆಡ್ಯೂಲ್ಡ್ ಕ್ಯಾಸ್ಟ್ ವಿದ್ಯಾರ್ಥಿಗಳಿಗೆ ಯಾವರೀತಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು ಎಂಬ ಬಗ್ಗೆ ವರದಿ ಕೊಡಲು ಮಾನ್ಯ ಸದಸ್ಯರಾದ ಬಿ. ಗುರುಪ್ರಸಾದ್‌ರವರ ನೇತೃತ್ವದಲ್ಲಿ ಒಂದು ಅಧ್ಯಯನ ಸಮಿತಿಯನ್ನು ರಚಿಸಲಾಗಿತ್ತು, ಅವರು ವರದಿಯನ್ನು ಕೊಟ್ಟಿದ್ದಾರೆ. ಅವರ ವರದಿಯ ಆಧಾರದ ಮೇಲೆ ಷೆಡ್ಯೂಲ್ಡ್ ಕ್ಯಾಸ್ಟ್

ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಮೂರು ವರ್ಷಗಳ ಅವಧಿಯಲ್ಲಿ ೯ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ ಹಾಸ್ಟೆಲ್‌ಗಳನ್ನು ಕಟ್ಟುವ ಕೆಲಸವನ್ನು ಈಗಾಗಲೇ ಲ್ಯಾಂಡ್ ಆರ್ಮಿಯವರಿಗೆ ವಹಿಸಲಾಗಿದೆ. ಪ್ರಸ್ತುತ ವರ್ಷ ೬೭ ವಿದ್ಯಾರ್ಥಿ ನಿಲಯಗಳನ್ನು ಕಟ್ಟಲಾಗುತ್ತದೆ. They are in different stages.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೋದ ಸಾರಿ ಬಜೆಟ್‌ನಲ್ಲಿ, ಪ್ರತಿ ತಾಲ್ಲೂಕಿಗೂ ಒಂದೊಂದು ಷೆಡ್ಯೂಲ್ ಕ್ಯಾಸ್ಟ್ ವಿದ್ಯಾರ್ಥಿನಿಲಗಳನ್ನು ಕಟ್ಟಲಾಗುತ್ತದೆಂದು ಹೇಳಲಾಗಿತ್ತು. Before last year you said 100 hostels, this year again you have proposed 100. ನೀವು ೧೦೦ ಹಾಸ್ಟೆಲ್‌ಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದನ್ನೇ ಮಾಡಿಸುವುದಕ್ಕಾಗಲಿಲ್ಲ. ಈಗ ಪುನಃ ೧೦೦ ಹಾಸ್ಟೆಲ್‌ಗಳನ್ನು ಕಟ್ಟಿಸುತ್ತೇವೆಂದು ಹೇಳುತ್ತೀರಿ.

ಶ್ರೀ ಜಿ. ಬಸವಣ್ಣಪ್ಪ.—ಹಾಸ್ಟೆಲ್‌ಗಳಲ್ಲದೇ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿ ೨೫ ಆಶ್ರಮ ಶಾಲೆಗಳನ್ನೂ ಮಂಜೂರು ಮಾಡಿದ್ದೇವೆ. ೧೯೮೮-೮೯ರಲ್ಲಿ we have made a provision of 100 hostels for SC/ST, 100 for BCM and 50 residentional schools.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಯವರು ಹೋದ ವರ್ಷವೂ ಇದೇ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹೇಳಿದ ಹಾಗೆ, ಅವರಿಗೆ ಸ್ವಾತಂತ್ರ್ಯ ಇಲ್ಲ. ಅವರು ಹೇಳುವ ಕೆಲಸಕ್ಕೆ ಹಣ ಕೊಡುವುದೂ ಇಲ್ಲ. ಮಾನ್ಯ ದೇವೇಗೌಡರ ತರಹ ಇವರು ಹೆದರಿಸಿಕೊಂಡು ಕೆಲಸ ಮಾಡುವುದಕ್ಕೆ ಇವರ ಕೈಯಲ್ಲಿ ಆಗುವುದಿಲ್ಲ.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ರಾಮಕೃಷ್ಣ ಹೆಗಡೆಯವರ ಮಂತ್ರಿ ಮಂಡಲದಲ್ಲಿ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ ಇದೆ. As a Social Welfare Minister, I am functioning independently.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರಿಗೆ ಹೆದರಿಸಿ ಹಣ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಇಲ್ಲದಿದ್ದರೆ ಕಳೆದ ವರ್ಷ, ೧೭೫ ಹಾಸ್ಟೆಲ್‌ಗಳನ್ನು ಮಾಡುತ್ತಾ ಇದ್ದೇವೆ. ಈ ವರ್ಷ ಇನ್ನೂ ೧೦೦ ಹಾಸ್ಟೆಲ್‌ಗಳನ್ನು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಲ್ಲ ಆ ಒಂದು ಶಕ್ತಿಯನ್ನು ಅವರು ನಿಮಗೆ ಕೊಡುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈ ವರ್ಷ ೨೫೦ ಸಂಸ್ಥೆಗಳನ್ನು ಮಂಜೂರು ಮಾಡಿದ್ದಾರೆ. ತಾವುಗಳು ಹೀಗೆ ಹೇಳುತ್ತಾ ಇದ್ದರೆ ನಮಗೆ ಮರುಕ ಬರುತ್ತದೆ. ನಿಮಗೋಸ್ಕರವಾಗಿ ಜನರು ಇವೊತ್ತು ನಿಂತುಕೊಂಡಿಲ್ಲ. ನೀವು ಮಾಡಿ, ಅಥವಾ ಮಾಡದೇ ಹೋಗಿ, ನಾವು ಅದನ್ನು ನೋಡುತ್ತಾ ಇದ್ದೇವೆ. ೧೯೮೬ರಲ್ಲಿ ೨೦೦ ಹಾಸ್ಟೆಲ್‌ಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ, ಅದನ್ನು ಕೊಡಲಿಲ್ಲ. ಪುನಃ ಈ ೨೦೦ ಹಾಸ್ಟೆಲ್‌ಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ನೀವು ಹೀಗೆ ಹಾಸ್ಟೆಲ್‌ಗಳನ್ನು ಮಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ೧೦೦ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಕಟ್ಟಲಿಕ್ಕೆ ಕಂಟ್ರಾಕ್ಟ್ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ಆದರೆ ಅದು ಯಾವ ಊರಿನಲ್ಲಿ ಇದೆ, ಯಾವ ಮಟ್ಟದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಒಂದೆರಡು ಆಗಿರಬಹುದು. ಆದರೆ ಅಷ್ಟನ್ನು ಕಟ್ಟಲಿಕ್ಕೆ ನಿಮ್ಮಲ್ಲಿ ಹಣ ಬೇಕಲ್ಲ ! ಇನ್ನು ಸ್ಕೂಲ್ ಫಂಡ್ಸ್‌ಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ? ಅದಕ್ಕೋಸ್ಕರವಾಗಿ ಎಷ್ಟು ಹಣವನ್ನು ಒದಗಿಸಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ಸ್ಕೂಲ್ ಫಂಡ್ಸ್‌ನಲ್ಲಿ ೯ ಕೋಟಿ ರೂಪಾಯಿಗಳು ಇವೆ. ಅದರಲ್ಲಿ ೬ ಕೋಟಿ ರೂಪಾಯಿಗಳನ್ನು ಲ್ಯಾಂಡ್ ಆರ್ಮಿಯವರಿಗೆ ಕಟ್ಟಡ ಕಟ್ಟುವುದಕ್ಕೆ ರಿಲೀಸ್ ಮಾಡಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ವರ್ಗದವರು ನೆಮ್ಮದಿಯಾಗಿ ಇರಬೇಕು. ಅವರ ಬಗ್ಗೆ ಆಸಕ್ತಿಯನ್ನು ವಹಿಸಬೇಕು. ನಮ್ಮ ರಾಮಕೃಷ್ಣ ಹೆಗಡೆಯವರು ಮೊದಲು ಅವರ ಬಗ್ಗೆ ಆಸಕ್ತಿ ವಹಿಸಿ, ನಂತರ ಬಿಟ್ಟರು ಅಂಬೇಡ್ಕರ್ ಭವನವನ್ನು ಕಟ್ಟುತ್ತೇವೆ ಎಂದು ಹೇಳಿದರು. ಹಾಗೆ ಅವನ್ನು ಕಟ್ಟಿದರೆ ನಾವು ಸಂತೋಷಪಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಈಗ ಹೇಳಿದ್ದು ಮಾತ್ರ, ಮೊದಲು ಹೇಳಿದ ಕಟ್ಟಡಕ್ಕೇ ಇನ್ನೂ ಪ್ರಾರಂಭದ ಕಲ್ಲು ಹಾಕಿಲ್ಲ, ಈಗ ಮತ್ತೆ ಹೇಳಿದ್ದಾರೆ. ಅದಕ್ಕೆ ಫೌಂಡೇಶನ್ನೂ ಇಲ್ಲ, ಪ್ರಾರಂಭವೂ ಇಲ್ಲ.......

ಶ್ರೀ ರಾಮಕೃಷ್ಣ ಹೆಗಡೆ.—ಆ ಕಟ್ಟಡಕ್ಕೆ ಪ್ರಾರಂಭವನ್ನು ಅವರು ಹುಟ್ಟಿದ ದಿವಸ ಏಪ್ರಿಲ್ ತಿಂಗಳ ೧೪ನೇ ತಾರೀಖಿಗೆ ಮಾಡಬೇಕೆಂದು ಇತ್ತು. ಆದರೆ ಅವರ ಪತ್ನಿಯವರು ಆ ದಿವಸ ಬರುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಅವರು ಏಪ್ರಿಲ್ ಕೊನೆಯೊಳಗೆ ಅಥವಾ ಮೇ ತಿಂಗಳ ಮೊದಲ ವಾರದಲ್ಲಿ ಬರುತ್ತೇವೆ ಎಂದು ಹೇಳಿದ್ದಾರೆ. ಅವರು ಬಂದು ಶಿಲಾನ್ಯಾಸ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ಅವರ ಕೈಯಿಂದಲೇ ಹಾಕಿಸುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ತಾವುಗಳು ಎರಡು ಅಂಬೇಡ್ಕರ್ ಭವನವನ್ನು ಕಟ್ಟುವುದರಿಂದ ಈ ರಾಜ್ಯದಲ್ಲಿರತಕ್ಕಂಥ ೪೦ ಲಕ್ಷ ಜನರಿಗೆ ಪರಿಹಾರ ಸಿಕ್ಕುವುದಿಲ್ಲ. ಆದರೂ ಕೂಡ ಆ ಒಂದು ಕಾರ್ಯವನ್ನು ತಾವು ಮಾಡುತ್ತಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ತಾವುಗಳು ಐದು ವರ್ಷಗಳ ರಾಜ್ಯಭಾರವನ್ನು ಮಾಡಿದ್ದೀರಿ. ಈ ಪದವೀಧರರಿಗೆ ಕೆಲಸ ಕೊಡಿಸುತ್ತೇವೆ ಎಂದು ಹೇಳಿದ್ದೀರಿ. ಹೀಗೆ ಎಷ್ಟು ಜನರಿಗೆ ನೀವು ಕೆಲಸವನ್ನು ಕೊಟ್ಟಿದ್ದೀರಿ ? ಯಾರೋ ಹೈಕೋರ್ಟಿನಲ್ಲಿ ಸ್ಟೇ ಇದೆ ಎಂದು ಹೇಳಿದ್ದಾರೆ. ಅದು ಐದು ವರ್ಷವಾದರೂ ಇರುತ್ತದೆಯೆ ? ಹೈಕೋರ್ಟ್‌ನವರಿಗೆ ಬುದ್ಧಿ ಇಲ್ಲವೇ ? ನ್ಯಾಯ ಮಾಡುವವರಿಗೆ ನ್ಯಾಯದ ಅರಿವು ಇಲ್ಲವೇ ? ಒಂದು ಕೇಸನ್ನು ಅವರು ಇಷ್ಟು ದಿನಗಳ ಕಾಲ ಇಟ್ಟುಕೊಳ್ಳುತ್ತಾರೆಯೇ ? ನೀವೇ ಅವರ ಗಮನಕ್ಕೆ ಇದನ್ನು ತಂದಿರಕ್ಕಿಲ್ಲ ಎಂದು ಕಾಣುತ್ತದೆ. ಇಷ್ಟಾದರೂ ಕೂಡ ಇದುವರೆಗೂ ಒಬ್ಬರಿಗೂ ಕೆಲಸವನ್ನು ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ ಎಂದು ಹೇಳುತ್ತೀರಾ ? ನಮಗೆ ಇವೊತ್ತು ಮಾನಸಿಕವಾದ ಸ್ವಾತಂತ್ರ್ಯ ಬೇಕು. ನಾವು ಗುಲಾಮಗಿರಿಯಿಂದ ಬಾಳತಕ್ಕಂಥ ಸ್ವಾತಂತ್ರ್ಯ ನಮಗೆ ಬೇಕಾಗಿಲ್ಲ ಗುಲಾಮಗಿರಿಯಿಂದ ಇನ್ನು ಮುಂದೆ ನಾವು ಬಾಳಬಾರದು ಎಂದು ನಿರ್ಧಾರ ಮಾಡಿದ್ದೇವೆ. ಇವೊತ್ತು ಈ ವರ್ಗದವರು ಬ್ರಾಹ್ಮಣರ ಹೊರೆ ಹೊತ್ತುಕೊಂಡು ನಡೆಯುವುದಕ್ಕಾಗುವುದಿಲ್ಲ ಮಾನಸಿಕವಾದ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕಾಗಿದೆ. ಅದು ನಮಗೆ ಬರಬೇಕಾಗಿದೆ. ಆರ್ಥಿಕ ಸ್ವಾತಂತ್ರ್ಯ ಬರಬೇಕಾದರೆ ಅದಕ್ಕೆ ವ್ಯವಸ್ಥೆ ಇದ್ದೇ ಇದೆ. ಕೇಂದ್ರ ಸರಕಾರದವರು ಆ ದಿಶೆಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ತಾವು ಕೂಡ ಆರ್ಥಿಕ ಕಾರ್ಯಕ್ರಮವನ್ನು ಯಾವರೀತಿಯಲ್ಲಿ ರೂಢಿಸಿಕೊಂಡು ಬರುತ್ತೀರಿ ? ಎಷ್ಟು ಜನಗಳಿಗೆ ನೀವು ಜಮೀನನ್ನು ಕೊಟ್ಟಿದ್ದೀರಿ? ಹಾಗೆ ಜಮೀನನ್ನು ಕೊಟ್ಟವರಿಂದ ಈಗ ಕಿತ್ತುಕೊಳ್ಳತಕ್ಕಂಥ ಪ್ರಯತ್ನವೂ ನಡೆದಿದೆ.

ಇವತ್ತು ಯಾವ ಗ್ರಾಮಕ್ಕೇ ಹೋಗಲೀ ಯಾವ ಊರಿಗೇ ಹೋಗಲಿ ನಾವು ಏನು ಬಡವರಿಗೆ ಹರಿಜನರಿಗೆ ಜಮೀನುಗಳನ್ನು ಕೊಟ್ಟಿದ್ದೆವು ಅಂತಹ ಜಮೀನನ್ನು ಸ್ಥಿತಿವಂತರು ಮತ್ತು ಜಮೀನ್ದಾರರೇನಿದ್ದಾರೆ ಇವರು ಅವರಿಂದ ಕಿತ್ತುಕೊಳ್ಳಲಿಕ್ಕೆ ಪ್ರಯತ್ನ ನಡೆದಿದೆ. ಇವತ್ತು ತಾವು ಲ್ಯಾಂಡ್ ರಿಫಾರ್ಮ್ಸ್ ಅನ್ನು ಸ್ಥಾಪನೆ ಮಾಡಿಕೊಂಡಿದ್ದೀರಿ ಇದರಿಂದ ಏನೇನು ಇತ್ಯರ್ಥವಾಗಿತ್ತೋ ಅಂತಹ ತೀರ್ಪುಗಳನ್ನು ತಿರುವಿ ಹಾಕಿ ಯಾರು ಬಡವರಿದ್ದಾರೆ ಅಂತಹವರಿಗೆ ಇದರಿಂದ ಏನು ಅನುಕೂಲವಾಗಬೇಕಾಗಿತ್ತೋ ಅದನ್ನು ತಪ್ಪಿಸಿ ಸ್ಥಿತಿವಂತರಿಗೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡುತ್ತಿದ್ದೀರಿ ಜಿಲ್ಲಾ ಪರಿಷತ್ ಮಂಡಲ ಪಂಚಾಯತಿ ಬಂದ ಮೇಲೆ ಆದಿಯಿಂದ ಅಂದರೆ ನೂರಾರು ವರ್ಷಗಳಿಂದ ಏನು ಪದ್ಧತಿ ಬಂದಿತ್ತು, ಹರಿಜನರು ಏನು ತುಳಿತಕ್ಕೆ ಸಿಕ್ಕಿಹಾಕಿಕೊಂಡಿದ್ದರು ಅದೇ ರೀತಿಯ ಸನ್ನಿವೇಶ ಇವತ್ತು ಮತ್ತೆ ಪ್ರಾರಂಭವಾಗಿದೆ. ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಈ ರೀತಿಯ ಪರಿಸ್ಥಿತಿ ಉಂಟಾಗಿದೆ. ಇವತ್ತು ಜಿಲ್ಲಾ ಪರಿಷತ್ ಅಧ್ಯಕ್ಷ ಕೂಡ ಸ್ಥಿತಿವಂತನಾಗಿರುತ್ತಾನೆ ದೊಡ್ಡ ಜಾತಿಯವನಾಗಿರುತ್ತಾನೆ, ಜಿಲ್ಲಾ ಪರಿಷತ್ ಸದಸ್ಯ ಕೂಡ ದೊಡ್ಡ ಜಾತಿಯವರೆ ಆಗಿರುತ್ತಾರೆ ಇದರಿಂದಾಗಿ ಏನಾಗಿದೆ ಎಂದರೆ ಬಡವರಿಗೆ ಕಿರುಕುಳ ಜಾಸ್ತಿಯಾಗಿದೆ ಅವರು ಏನು ಹೇಳುತ್ತಾರೆಂದರೆ ಹಿಂದೆ ನಮಗೆ ಅಧಿಕಾರ ಹೋಗಿತ್ತು ಈಗ ಪುನಃ ಬಂದಿದೆ ನಿಮ್ಮನ್ನು ಮತ್ತೆ ನಮ್ಮ ಗುಲಾಮರನ್ನಾಗಿ ಮಾಡುತ್ತೇವೆ, ಮಾಡಿಕೊಳ್ಳುತ್ತೇವೆಂದು ಹೇಳತಕ್ಕಂತಹ ಸನ್ನಿವೇಶ ಇವತ್ತು ಕಂಡು ಬರುತ್ತಿದೆ. ಒಂದೇ ಒಂದು ಉದಾಹರಣೆ ಕೊಡುತ್ತೇನೆ ತತ್ತೂರು ಗ್ರಾಮದಲ್ಲಿ ಪಾಯಿಖಾನೆ ತಿನ್ನಿಸಿದರು, ತಿನ್ನಿಸಿದವರು ಯಾರು ತಿಂದವರು ಯಾರು ಅದು ಬೇರೆ ವಿಚಾರ ನಾನು

ಆ ವಿಚಾರಕ್ಕೆ ಹೋಗುವುದಿಲ್ಲ, ಆದರೆ ತಿನ್ನಿಸುವ ಸಾಹಸ ಏನು ಮಾಡಿದರು, ಮನಸ್ಸು ಮಾಡಿದರು ಅದರ ಹಿನ್ನೆಲೆ ಮುಖ್ಯ. ಯಾರೋ ತಾನು ದೊಡ್ಡ ಜಾತಿಯವನೆಂದು ತಿಳಿದುಕೊಂಡು ಮಾಡಿರ ಬಹುದು. ಇವತ್ತಿನ ದಿವಸ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳವರೂ ಕೂಡ ಈ ಒಂದು ಹಿನ್ನೆಲೆಯಲ್ಲಿ ಅವರಿಗೆ ಬೆಂಬಲ ಕೊಟ್ಟಿದ್ದಾರೆ ಎಂದು ಹೇಳಲೇಬೇಕಾಗಿದೆ. ಕಾಂಗ್ರೆಸ್ ಸರಕಾರ ವಿದ್ದಾಗ ಬಡವರಿಗೆ ಸಹಾಯ ಮಾಡುತ್ತಿದ್ದರು ಈಗ ನಮಗೆ ತೊಂದರೆಯಾಗಿದೆ ಎಂದು ಬಡವರು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಜಿಲ್ಲಾ ಪರಿಷತ್‌ನಿಂದ ಅಪಾಯವಾಗಿದೆಯೋ ಹೊರತಾಗಿ ಅನುಕೂಲವಾಗಿಲ್ಲ ಮಂಡಲ ಪಂಚಾಯತಿಯಿಂದ ಅಪಾಯವಾಗಿದೆಯೋ ಹೊರತಾಗಿ ಅನುಕೂಲವಾಗಿಲ್ಲ, ಸಮಾಜವಾದೀ ಸಮಾಜವನ್ನು ಏನು ನಿರ್ಮಾಣ ಮಾಡಬೇಕಾಗಿದೆಯೋ ಅದಕ್ಕೆ ಧಕ್ಕೆಯಾಗಿದೆ. ಜನರಿಗೆ ಅನುಕೂಲ ಮಾಡಲಿ ಎಂದು ಅಧಿಕಾರವನ್ನು ಇವರಿಗೆ ಇವರ ಕೈಯ್ಯಲ್ಲಿ ಕೊಟ್ಟರೆ ಬಡವರನ್ನಂತೂ ನೆಲೆ ಯಲ್ಲಿಡುವುದಿಲ್ಲ. ಇದರಿಂದಾಗಿ ತಾವು ಬಂದಾಗ ಏನು ಬೆಂಬಲವನ್ನು ಜನ ಕೊಡುತ್ತಿದ್ದರು ಜನ ಇವತ್ತು ಬೇಸತ್ತು ಕೊಂಡಿದ್ದಾರೆ, ಬೇಸತ್ತುಕೊಂಡ ಜನ ಏನು ಇದ್ದಾರೆ ಅವರು ಗೋಡೆಗಳ ಮೇಲೆ ಬರೆದಿ ದ್ದಾರೆ ಇತಿಹಾಸಗಳನ್ನು ಬರೆದುಕೊಂಡಿದ್ದಾರೆ ತಾವು ಹೋಗಿ ನೋಡಬಹುದು. ತಾವು ಅಧಿಕಾರ ಬಿಟ್ಟು ಹೋಗಬೇಕೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ ಎಲ್ಲಿಯವರೆಗೆ ಜನರ ಸಪೋರ್ಟ್ ತಮಗೆ ಇರುತ್ತದೆ, ಸಪೋರ್ಟ್ ಮಾಡುತ್ತಾರೆ ಅಲ್ಲಿಯವರೆಗೆ ನೀವು ಇದ್ದು ಹೋಗಿ. ಆದರೆ ಜನಗಳ ಬೇಸತ್ತ ಮನಸ್ಸಿನ ವರ್ತನೆ ಏನು ಇದೆ ಆ ಮನಸ್ಸನ್ನು ತಾವು ಅರಿತುಕೊಳ್ಳಬೇಕು.

ಇನ್ನು ಸರಕಾರೀ ನೌಕರರ ಬಗ್ಗೆ ಹೇಳುವುದಾದರೆ ನೀವು ಅವರಿಗೆ ಸಂಬಳ ಜಾಸ್ತಿ ಮಾಡಿದ್ದೀರಿ ಅದರಿಂದಾಗಿ ಅವರು ಸಂತುಷ್ಟರಾಗಿದ್ದಾರೆ ಸಂಬಳವನ್ನು ಜಾಸ್ತಿ ಮಾಡಿ ಎಂದು ನಿಮ್ಮನ್ನು ಯಾರು ಕೇಳಿದರು ಅವರಿಗೆ ಸಂಬಳ ಜಾಸ್ತಿ ಕೊಡುವುದನ್ನು ಬಿಟ್ಟು ಆ ಹಣವನ್ನು ಬಡವರಿಗೋಸ್ಕರ ಉಪ ಯೋಗ ಮಾಡಬೇಕಾಗಿತ್ತು. ನೌಕರ ವರ್ಗದವರಿಗೆ ಕೊಟ್ಟು ಅವರ ಮೈ ಬೆಳೆಸಲಿಕ್ಕೆ ಅವಕಾಶ ಮಾಡಿ ಕೊಡುತ್ತಿದ್ದೀರಿ ತಾವೇನಾದರೂ ಜಾಸ್ತಿ ಸಂಬಳ ಕೊಟ್ಟರೆ ಅವರು ಜನ ಸೇವೆ ಮಾಡುತ್ತಿದ್ದಾರೆಯೋ ಮಾಡುತ್ತಿಲ್ಲ. ಇವನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸಂಪತ್ತನ್ನು ರೂಢಿ ಮಾಡಿಕೊಳ್ಳುವ ಪ್ರಯತ್ನ ನಿಮ್ಮ ಕೈಯಲ್ಲಿ ಆಗಿಲ್ಲ ಯಾರು ನಿಮ್ಮ ವರ್ಗದವರಿದ್ದಾರೆ ಬಡವರಿದ್ದಾರೆ ಅವರಿಗೆ ಏನು ಸ್ವಾತಂತ್ರ್ಯ ಹರಣವಾಗಿತ್ತು ಅಂತಹ ಸ್ವಾತಂತ್ರ್ಯವನ್ನು ಕೊಡಲಿಕ್ಕೆ ತಾವು ಪ್ರಯತ್ನ ಮಾಡಿಲ್ಲ. ಈಗ ಬಡ್ಜೆಟ್ ಅನ್ನು ತಾವು ಏನು ಇಟ್ಟಿದ್ದೀರಿ ಇದರಲ್ಲಿ ಇಟ್ಟಿರತಕ್ಕಂತಹ ಪ್ರಾವಿಜನ್ಸ್‌ಗಳು ಏನು ಇವೆ ಇದರಲ್ಲಿ ಜನಗಳಿಗೆ ಉಪಕಾರವಾಗುವಂಥಾದ್ದು ಏನೂ ಇಲ್ಲ. ಇದು ರೋಟೀನ್ ಮ್ಯಾಟರ್. If these provisions have not been useful for the people in the past, they will not be useful in the future. Therefore, I say this is a routine budget. I and my party oppose this budget.

One more aspect is that on January 12th, 1983 in patriot it has appeared like this. ' Hegde for probe into Congress-I corrupt cases '

> " Chief Minister of Karnataka Sri Ramakrishna Hegde said here to-day that his Government would enquire into cases of corruption against the previous Congress-I Government. "

ಇದನ್ನು ತಾವು ಮಾಡಿದ್ದೀರಾ ? ನೀವು ಕರಪ್ಟ್ ಆಗಿದ್ದರಾ ?

> " In an interview with UNI he said that the people of the state were disillusioned and dissatisfied and obviously wanted change ofgovernment as they were disgusted with the political administarative corruption and non-performance and of theprevious government.

ತಾವು ಇಲ್ಲ ಎಂದು ಹೇಳಬೇಕು. ಕರಪಷನ್ ಇಲ್ಲ ಎಂದು ಹೇಳಬೇಕು. ಪೀಪಲ್ ವರ್ ಸಾಟಿಸ್‌ಫೈಡ್ ಎಂದು ತಾವು ಹೇಳಬೇಕು.

"Then he had given priority to the elimination of administrative corruption. On the development side rural development including building of an infra structure for irrigation would receive immediate attention. On the economic fronttbe Chief Minister his government would concentrate onarresting the price rise."

ಎರಡು ರೂಪಾಯಿ ಅಕ್ಕಿ ಇದ್ದದ್ದು ಇವತ್ತು ಆರು ರೂಪಾಯಿ ಆಗಿದೆ.

"And the reduction of poverty and providing employment to the unemployed and industrialisation would go unham pered. Another task for the Government would be to provide social Justice to down-trodden and neglected section of the society, Mr. Hegde said"

ಸ್ವಾಮಿ, ತಮ್ಮನ್ನು ಇಷ್ಟು ಮಾತ್ರ ಕೇಳುತ್ತೇನೆ, ತಾವು ಮುಖ್ಯ ಮಂತ್ರಿಗಳಾದಾಗ ಏನು ವಾಗ್ದಾನ ಮಾಡಿದ್ದೀರಿ, ಆ ನಿಲುವಿಗೆ ತಾವು ನಿಂತು ಕೊಂಡಿದ್ದೀರಾ ? ಆ ಅಭೀಷ್ಟೆಯನ್ನು ತಾವು ಸಾಧನೆ ಮಾಡಿದ್ದಿರಾ ? ಇಷ್ಟೆ ನಾನು ತಮ್ಮನ್ನು ಕೇಳುವುದು. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ(ಸಂಡೂರು).—ಮಾನ್ಯ ಅಧ್ಯಕ್ಷರೇ, ೧೯೮೮-೮೯ನೇ ಆಯುವ್ಯಯುವನ್ನು ನಮ್ಮ ಮುಂದೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ್ದಾರೆ. ಇದರ ಮೇಲೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ನನ್ನನ್ನು ಕರೆದಿದ್ದೀರಿ, ಅದಕ್ಕಾಗಿ ಪ್ರಾರಂಭದಲ್ಲಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರಲ್ಲಿ ಈ ಸಮಗ್ರ ಆಯುವ್ಯಯುದ ಪ್ರತಿಯನ್ನು ತೆಗೆದು ನೋಡಿದರೆ ಇದರಲ್ಲಿ ಹೆಚ್ಚಿನ ಅಂಶ ಮೀಸಲಿಟ್ಟರತಕ್ಕಂಥ ಭಾಗ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ, ಸಂಪನ್ಮೂಲಗಳು ಎಷ್ಟು ಭಾಗ ಬರುತ್ತದೆ, ಎಷ್ಟೆಷ್ಟು ಹಂಚಿ ಹೋಗುತ್ತಿದೆ ಎನ್ನುವುದರ ಬಗ್ಗೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕೇಂದ್ರ ಸರ್ಕಾರದ ನಿಯುಮಗಳಿಂದಾಗಿ ಅಥವಾ ನೀತಿಯಿಂದಾಗಿ ರಾಜ್ಯ ಸರ್ಕಾರಗಳು ಒಟ್ಟಾರೆ ಈ ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿವೆ. ಎನ್ನುವಂಥ ರೀತಿಯಲ್ಲಿ ಈ ಬಜೆಟ್ ಭಾಷಣ ಇದೆ. ಇದರ ಒಟ್ಟಾರೆ ಸಾರಾಂಶ ಈ ರೀತಿಯಲ್ಲಿ ಇದೆ. ಒಂದು ಕಡೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಈ ಸಂಪನ್ಮೂಲನಗಳು ಅದರಲ್ಲಿ ಮುಖ್ಯವಾಗಿ ಹಣಕಾಸಿನ ನೀತಿಯಲ್ಲಿ ಬದಲಾವಣೆಯಾಗಬೇಕು ಎನ್ನುವ ಬಗ್ಗೆ ನಮಗೆ ಎರಡು ಅಭಿಪ್ರಾಯ ಇಲ್ಲ, ಅದು ಸತ್ಯವೂ ಹೌದು. ಇವತ್ತು ಮುಕ್ಕಾಲು ಭಾಗ ಸಂಪನ್ಮೂಲ ಇಡೀ ದೇಶದಲ್ಲಿ ಕೇಂದ್ರ ಸರ್ಕಾರಕ್ಕೆ ಹೋದರೆ ಕಾಲು ಭಾಗ ಅಥವಾ ಕಾಲುಭಾಗಕ್ಕಿಂತ ಹೆಚ್ಚಿಗೆ ರಾಜ್ಯ ಸರ್ಕಾರಕ್ಕೆ ಸಂಪನ್ಮೂಲಗಳಲ್ಲಿ ಬರುತ್ತದೆ. ಆದರೆ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಾವು ಕಾರ್ಯರೂಪಕ್ಕೆ ತರಬೇಕಾಗಿತ್ತು. ಇದು ರಾಜ್ಯ ಸರ್ಕಾರದ ಮೇಲೂ ಜವಾಬ್ದಾರಿ ಇರುತ್ತದೆ. ಹೀಗೆಂದ ಮಾತ್ರಕ್ಕೆ ನಾವು ಕೊರತೆ ಬಜೆಟ್‌ನ್ನು ಇಡಲೇಬೇಕಾಗುತ್ತದೆ ಎನ್ನತಕ್ಕಂಥ ವಾದವೂ ಕೂಡಾ ಸರಿಯಲ್ಲ. ಕೊರತೆಯ ಬಗ್ಗೆ ಈ ವರ್ಷ ತಾವು ಏನು ಹೇಳಿದ್ದೀರಿ ಈ ಬಜೆಟ್‌ನಲ್ಲಿ ಇದೇ ರೀತಿಯ ಬಜೆಟ್ ಮುಂದಿನ ವರ್ಷ ಬಂದರೂ ಮತ್ತೆ ಇನ್ನೂ ಜಾಸ್ತಿಯಾಗುತ್ತದೆ. ಏಕೆಂದು ಹೇಳಿದರೆ ಸಂಪನ್ಮೂಲಗಳ ಕ್ರೋಢೀಕರಣ ಯಾವ ರೀತಿ ಮಾಡುತ್ತಾರೆ, ಎಷ್ಟೆಷ್ಟು ಮಾಡುತ್ತಾರೆ ಎನ್ನತಕ್ಕಂಥದ್ದನ್ನು ಖಾತರಿಯಾಗಿ ಇದರಲ್ಲಿ ಹೇಳಿಲ್ಲ. ಮುಖ್ಯವಾಗಿ ಕಳೆದ ವರ್ಷ ತಾವು ಈ ಬಜೆಟ್ ಭಾಷಣದಲ್ಲಿ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ನೀವು ಖರ್ಚು ಮಾಡುತ್ತೇವೆಂದು ನಿಗದಿ ಮಾಡಿದ್ದಿರೋ ಆ ಹಣವನ್ನು ಸಂಪೂರ್ಣವಾಗಿ ಖರ್ಚುಮಾಡುವುದಕ್ಕೆ ಸಾಧ್ಯವಾಗಿಲ್ಲ.

೫-೩೦ ಪಿ.ಎಂ.

ಮೊನ್ನೆ ಮೊನ್ನೆ ಸಪ್ಲಿಮೆಂಟರಿ ಬಜೆಟ್ ಅನ್ನು ಇಟ್ಟು ಹೆಚ್ಚಿನ ಮೊತ್ತದ ಹಣವನ್ನು ಈ ಮನೆ ಅಪ್ರೂವ್ ಮಾಡಿಕೊಡಬೇಕೆಂದು ಕೇಳಿದ್ದಾರೆ. ಇದರಲ್ಲಿ ಬಹು ಮುಖ್ಯವಾಗಿ ತೆರಿಗೆ ರಹಿತ ಬಜೆಟ್ ಎಂದು ತಯಾರು ಮಾಡಿ ಇಟ್ಟಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೊಂಡಿದ್ದಾರೆ. ಇಂಥ ತೆರಿಗೆ ರಹಿತವಾದ ಬಜೆಟ್. ಅದರಲ್ಲಿ ಈ ರಾಜ್ಯದ ನೀರಾವರಿ ಸೌಲಭ್ಯಗಳನ್ನು ಹೊಂದಿರತಕ್ಕ ರೈತರಿಗೆ ಮಾತ್ರ ತೆರಿಗೆ ಹಾಕಿ ತೆರಿಗೆ ರಹಿತವಾದ ಬಜೆಟ್ ಅನ್ನು ಇಟ್ಟಿದ್ದೇವೆಂದು ಹೇಳುವ ವಾದ ಸರಿಯಲ್ಲ. ಒಂದು ಕಡೆ ನಾವು ಬಯಲು ಸೀಮೆಗಳಲ್ಲಿ ಒಣ ಬೇಸಾಯ ಅಭಿವೃದ್ಧಿಗಾಗಿ ಹಣವನ್ನು ತೊಡಗಿಸಬೇಕಾಗಿದೆ. ಇದರಿಂದ ನೀರಾವರಿ ಸೌಲಭ್ಯ ಇರತಕ್ಕ ರೈತರಿಗೆ ಈ ರೀತಿಯ ತೆರಿಗೆ ನ್ಯಾಯ ಕೊಡಬೇಕೆಂದು ಸಮ್ಮತವಾಗಿ ತೋರಿಕೆಗೆ ಕಂಡು ಬಂದರೂ ಸಹ ಇದರಲ್ಲಿರತಕ್ಕ ಸತ್ಯಾಂಶ ಏನು ಅಂದರೆ ನೀರಾವರಿ ಸೌಲಭ್ಯವನ್ನು ಹೊಂದಿರತಕ್ಕವರ ರೈತರು ಬೆಳೆ ಏನು ಅವರು ಬೆಳೆಯುತ್ತಾರೆ, ಬೆಳೆದಂತಹ ಬೆಳೆಗೆ, ಹಾಕಿದಂಥ ಬೀಜಕ್ಕೆ ಕೊಳ್ಳತಕ್ಕ ಗೊಬ್ಬರಕ್ಕೆ, ಕೊಳ್ಳತಕ್ಕ ವಿದ್ಯುಚ್ಛಕ್ತಿ ಅವನು ಮಾರುಕಟ್ಟೆಯಲ್ಲಿ ತನ್ನ ಬೆಳೆಯನ್ನು ಮಾರತಕ್ಕದ್ದು ಅದರ ಲಾಭ ಇದನ್ನೆಲ್ಲಾ ಲೆಕ್ಕ ಹಾಕಿದರೆ ಬಹುಶಃ ಹೆಚ್ಚಿನ ಅಂಶ ಒಬ್ಬ ರೈತ ತಾನು ಹಾಕಿರತಕ್ಕ ಬೆಳೆ, ಭೂಮಿಯ ಬಂಡವಾಳಕ್ಕಿಂತ, ಈ ಬಂಡವಾಳವೇ ಹೆಚ್ಚು ಆಗಿದೆ. ಯಾವ ರೈತ ತಾನು ಬೆಳೆಯನ್ನು ಬೆಳೆಯಲಾರದಂತಹ ಸ್ಥಿತಿ ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿ ಇರುವಾಗ ಇದರ ಬಗ್ಗೆ ಸರ್ಕಾರದ ನೀತಿ ನಿಯಮಗಳು ಏನು ಎಂದು ಯೋಚನೆ ಮಾಡಿದರೆ ಸರ್ಕಾರದಿಂದ ಯಾವ ಪ್ರಯೋಜನವೂ ಇಲ್ಲವಾಗಿದೆ. ತೆರಿಗೆ ಮೊತ್ತದಿಂದ ತಾವು ಇದನ್ನು ಸುಧಾರಣೆ ಮಾಡುತ್ತೇವೆಂದು ಹೇಳುವ ಮಾತನ್ನು ಒಪ್ಪತಕ್ಕದ್ದು ಅಲ್ಲ ಬರೀ ದೊಡ್ಡ ರೈತರಿಂದ ರಾಜ್ಯದ ಬೊಕ್ಕಸಕ್ಕೆ ತೆರಿಗೆಯನ್ನು ವಸೂಲು ಮಾಡಿದರೆ ಮೊತ್ತ ಎಷ್ಟು ಆಗಿರಬಹುದು ಎಂದು ನೋಡಿದರೆ ಕೇವಲ ಕೆಲವಾರು ಕೋಟಿ ರೂಪಾಯಿಗಳು ಆಗಬಹುದು, ಇದರಿಂದ ಯಾವುದೇ ರಾಜ್ಯದ ಕಲ್ಯಾಣಕಾರಿ ಕಾರ್ಯಕ್ರಮಗಳು ಜಾರಿಗೆ ತರುವುದಕ್ಕೆ ಆಗುವುದಿಲ್ಲ, ನೀರಾವರಿ ಸೌಲಭ್ಯವನ್ನು ಹೊಂದಿರತಕ್ಕ ರೈತರು ಮಾತ್ರ ತೆರಿಗೆಯ ಹೊರೆಯನ್ನು ಹೊರಬೇಕೆನ್ನುವದು ತಪ್ಪು. ಆದ್ದರಿಂದ ನಾನು ಪ್ರಾರಂಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುವದು ನೀರಾವರಿ ಹೊಂದಿರತಕ್ಕ ರೈತರ ಮೇಲೆ ತೆರಿಗೆಯನ್ನು ಹೇರಬಾರದು, ಪ್ರಾರಂಭದಲ್ಲಿ ನೀರಾವರಿ ಸಚಿವರೇ ಒಪ್ಪಿಕೊಂಡಿದ್ದಾರೆ, ಬೇರೆ ಸಚಿವರ ಬಗ್ಗೆ ಸೂಚನೆ ಬಂದಿರದಿದ್ದರೂ ಸಹ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅವರು ಹೇಳಿರುವುದು ನಿಜ. ನೀರಾವರಿ ಅಭಿವೃದ್ಧಿ ಯೋಜನೆಗಳಿಗೋಸ್ಕರ ತೆರಿಗೆಗಳನ್ನು ಹಾಕಬೇಕಾಗುತ್ತದೆ ಎಂದು ಪತ್ರಿಕೆಗಳಲ್ಲಿ ಸಹ ಬಂದಿದೆ. ಅದನ್ನು ಕೈಬಿಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇನ್ನು ಯೋಜನಾ ವೆಚ್ಚದ ಬಗ್ಗೆ ಹೇಳುವುದಾದರೆ ಒಟ್ಟು ೯೧೭ ಕೋಟಿ ರೂಪಾಯಿಗಳು ೮೫ ೯೯ಕ್ಕೆ ಆಗಬಹುದು. ಇದರಲ್ಲಿ ೨೫೦ ರಿಂದ ೩೦೦ ಕೋಟಿ ರೂಪಾಯಿಗಳು ಕಡಿಮೆ ವೆಚ್ಚ ಆಗುತ್ತದೆ. ಇದಕ್ಕೆ ಕಾರಣವೆಂದರೆ ರಾಜ್ಯದಲ್ಲಿ ಮುಂಗಾರು ಬೆಳೆ ವಿಫಲವಾಗಿದೆ ಎಂದು ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದನ್ನು ನಾವು ನಿಜ ಎಂದು ಗಣನೆಗೆ ತೆಗೆದುಕೊಂಡಿಲ್ಲ ಒಂದೇ ವರ್ಷದ ಮುಂಗಾರು ಬೆಳೆ ರಾಜ್ಯದ ಹಣಕಾಸಿನ ಸ್ಥಿತಿಯನ್ನು ಅಥವಾ ಪರಿಸ್ಥಿತಿಯನ್ನು ಪೂರಾ ಬುಡಮೇಲು ಮಾಡುತ್ತದೆ ಎಂದು ಯಾರಾದರೂ ಯೋಜನೆ ಮಾಡಿದರೆ ಆ ವಾದ ಸರಿಯಲ್ಲ. ಒಂದು ಕಡೆ ಸತತ ಬರಗಾಲ ಬಂದಾಗ ರಾಜ್ಯದ ಹೆಚ್ಚಿನ ಸಂಪನ್ಮೂಲಗಳನ್ನು ಬರಗಾಲ ಪೀಡಿತ ಪ್ರದೇಶಗಳಿಗೆ ಪರಿಹಾರಕ್ಕೆ ಖರ್ಚು ಮಾಡತಕ್ಕ ವಾದ ಇದ್ದರೂ ಕೂಡ ಮುಂಗಾರು ಮಳೆ ಕಡಿಮೆ ಆಗಿದೆ ಎಂದು ಯೋಜನಾ ವೆಚ್ಚದಲ್ಲಿ ಕಡಿಮೆ ಮಾಡುವುದು ಸರಿಯಲ್ಲ. ಇಂಥ ಪರಿಸ್ಥಿತಿ ಒಂದು ಗ ವ್ಯವಸಾಯದಿಂದ ಅಥವಾ ಕೃಷಿಗೆ ಆಧಾರವಾಗಿರತಕ್ಕಂಥ ಯಾವುದೇ ಬೇರೆ ಮೂಲದಿಂದ ಭಾರಿಯಾದಂತಹ ಒಂದು ದೊಡ್ಡ ತೆರಿಗೆಯನ್ನು ಹಾಕಿ ದೊಡ್ಡ ಪ್ರಮಾಣದ, ಮೊತ್ತವನ್ನು ಆದಾಯವನ್ನು ಹೆಚ್ಚಿಸಿಕೊಳ್ಳಬಹುದು ಉದಾಹರಣೆಗೆ ಕಮರ್ಷಿಯಲ್ ಟ್ಯಾಕ್ಸ್ ಫಾರೆಸ್ಟ್. ಅಥವಾ ಅಬಕಾರಿ ಈ ಇಲಾಖೆಗಳಲ್ಲಿ ಸಾಕಷ್ಟು ಬಾಕಿ ಕೊಡತಕ್ಕ ಹಲವಾರು ಜನರು ಇದ್ದಾರೆ. ಶ್ರೀ ದಾಸಪ್ಪ ಸುಮಾರು ೪೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಪತ್ರಿಕೆಗಳಲ್ಲಿ ಬಂದಿದ್ದರೂ ಸಹ ಕೋರ್ಟಿನಲ್ಲಿ ಅವರು ಬಾಕಿ ಕೊಡಬೇಕೆಂದು ಡಿಕ್ರಿಗಳ್ನು ಪಾಸ್ ಮಾಡಿದ್ದರೂ ಸಹ ನೀವು ಅವರಿಗೆ ಕಂತಿನ ಮೇಲೆ ಬಾಕಿ ಕೊಡಬೇಕು ಎಂದು ಅವಕಾಶವನ್ನು

ಕೊಟ್ಟಿದ್ದೀರಿ. ನೀವು ಬಾಕಿಯನ್ನು ಒತ್ತಾಯ ಮಾಡಿ ವಸೂಲು ಮಾಡದೇ ಹೋದರೆ ಸರ್ಕಾರಕ್ಕೆ ಸಂಪನ್ಮೂಲಗಳ ಕ್ರೋಢೀಕರಣ ಮಾಡುವುದಕ್ಕೆ ಹೇಗೆ ಸಾಧ್ಯ. ಇದರಲ್ಲಿ [illegible] political will power... ನಿಷ್ಠುರತೆ ಬೇಕು. ನಾವು ಸರ್ಕಾರಕ್ಕೆ ಬರಬೇಕಾದ ಸಂಪನ್ಮೂಲಗಳನ್ನು ಅಥವಾ ಸಂಪನ್ಮೂಲಗಳಿಂದ ಬರಬಹುದಾದ ಆದಾಯವನ್ನು ವಸೂಲು ಮಾಡಬೇಕಾದರೆ ನಮಗೆ ಒಂದು ನಿಷ್ಠುರತೆ ಬೇಕು.

ನೀವು ಯಾರೋ ಒಬ್ಬ ಸಣ್ಣ ರೈತ ಸಹಕಾರಸಂಘದಿಂದ ಇಲ್ಲವೇ ಹಣಕಾಸು ಸಂಸ್ಥೆಯಿಂದ ಪಡೆದ ೫೦೦ ರೂಪಾಯಿಗಳನ್ನು ಇಲ್ಲವೇ ಒಂದು ಸಾವಿರ ರೂಪಾಯಿಗಳನ್ನು ಒತ್ತಾಯದಿಂದ ವಸೂಲಿ ಮಾಡುವುದು ಇಲ್ಲಿ ಮುಖ್ಯವಲ್ಲ. ಯಾರುಯಾರು ಕೋಟ್ಯಾಂತರ ರೂಪಾಯಿಗಳಷ್ಟು ಬಾಕಿಉಳಿಸಿ ಕೊಂಡಿದ್ದಾರೆ, ಅಂತಹವರಿಂದ ಬಾಕಿಯನ್ನು ಒತ್ತಾಯದಿಂದ ಹಾಗೂ ನಿಷ್ಠೂರದಿಂದ ವಸೂಲಿ ಮಾಡುವುದು ಮುಖ್ಯ. ಈ ರೀತಿ ಮಾಡದಿದ್ದರೆ ನೀವು ನಿಮ್ಮ ಸಂಪನ್ಮೂಲವನ್ನು ಕ್ರೋಢೀಕರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ವಸೂಲಿ ಮಾಡುವುದರ ಜೊತೆಗೆ ಈಗ ಮಾಡುತ್ತಿರುವ ಹಲವಾರು ಬಾಬುಗಳ ಮೇಲಿನ ವೆಚ್ಚಗಳನ್ನು ಸಹ ಕಡಿಮೆಗೊಳಿಸಬೇಕು. ದೆಹಲಿ ಮತ್ತು ನಮ್ಮ ದೇಶದ ಇತರೇ ರಾಜ್ಯಗಳಲ್ಲಿ ಹಲವಾರು ಉತ್ಸವವನ್ನು ನಡೆಸಲು ಹಣವನ್ನು ಖರ್ಚು ಮಾಡಿದ್ದೀರಿ. ಇದರ ಜೊತೆಗೆ ಇನ್ನೂ ಕೆಲವು ಕಡೆಗಳಲ್ಲಿ ಹಾಗೂ ವಿದೇಶಗಳಲ್ಲಿ ಇಂತಹ ಉತ್ಸವಗಳನ್ನು ನಡೆಸಲು ಕಮಿಟ್‌ಮೆಂಟ್ ಮಾಡಿಕೊಂಡಿದ್ದೀರಿ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇಂಥಾದ್ದಕ್ಕೆ ಹಣ ಖರ್ಚು ಮಾಡುವುದು ಒಳ್ಳೆಯದೇ ಇದಕ್ಕೆಲ್ಲಾ ಖರ್ಚು ಮಾಡುವ ಹಣವನ್ನು ನಮ್ಮ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದು ಒಳ್ಳೆಯದಲ್ಲವೇ ? ನಮ್ಮ ರಾಜ್ಯದ ಸಂಸ್ಕೃತಿ ಹಾಗೂ ಕಲೆಗಳನ್ನು ಎಲ್ಲಾ ಕಡೆಗಳಲ್ಲಿಯೂ ಎತ್ತಿ ಹಿಡಿಯಬೇಕು ಎಂಬುದನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ ಹೊಟ್ಟೆಗೇ ಹಿಟ್ಟಿಲ್ಲದಿರುವಾಗ ಜುಟ್ಟಿಗೆ ಮಲ್ಲಿಗೆ ಹೂವು ಏತಕ್ಕೆ ಬೇಕು ? ನಮ್ಮ ಆರ್ಥಿಕ ಪರಿಸ್ಥಿತಿ ಕೆಟ್ಟಿರುವಾಗ ಬೇರೆಬೇರೆ ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ಉತ್ಸವಗಳನ್ನು ನಡೆಸಲು ಲಕ್ಷಾಂತರ ಇಲ್ಲವೇ ಕೋಟ್ಯಾಂತರ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಬೇಕು ? ಈಗಿನ ಖರ್ಚಿನಲ್ಲಿ ಶೇಕಡಾ ಹತ್ತರಷ್ಟು ಉಳಿತಾಯ ಮಾಡಬೇಕೆಂಬ ಆದೇಶ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಇರುವಾಗ, ಇಂತಹ ಖರ್ಚನ್ನು, ಸಹ ಕಡಿಮೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಏನೂ ಪ್ರಯೋಜನ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಪರಿಷತ್‌ಗಳಿಗೆ ಕೊಡುವ ೫೦೦ ರೂಪಾಯಿಗಳ ಪೈಕಿ ಕಡಿಮೆ ಮಾಡುವುದಿಲ್ಲವೆಂದು ಹೇಳಿದ್ದಾರೆ. ಈ ಮಾತನ್ನು ನಾವು ಎಷ್ಟರಮಟ್ಟಿಗೆ ನಂಬಬೇಕು ? ಕಳೆದವರ್ಷ ಜಿಲ್ಲಾಪರಿಷತ್‌ಗಳಿಗೆ ಮತ್ತು ಮಂಡಲ ಪಂಚಾಯತ್‌ಗಳಿಗೆ ಏನು ಹಣವನ್ನು ನಿಗದಿ ಮಾಡಲಾಗಿತ್ತು, ಆ ಹಣವನ್ನು ಆ ಸಂಸ್ಥೆಗಳು ಸರಿಯಾಗಿ ಖರ್ಚು ಮಾಡಲಿಲ್ಲ ? ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಬಳ್ಳಾರಿ ಜಿಲ್ಲೆಯ ಜಿಲ್ಲಾಪರಿಷತ್‌ನವರು ಆ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಕಲ್ಯಾಣಕ್ಕಾಗಿ ವಿಶೇಷ ಘಟಕ ಯೋಜನೆಗಳ ಅಡಿಯಲ್ಲಿ ಏನು ಹಣವನ್ನು ಖರ್ಚು ಮಾಡಬೇಕಾಗಿತ್ತು ಅದರಲ್ಲಿ ಶೇಕಡಾ ೨೫ ಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಿಲ್ಲ. ಕುಡಿಯುವ ನೀರಿನ ಯೋಜನೆ ಒಂದನ್ನು ಬಿಟ್ಟರೆ ಬೇರೆ ಯಾವ ಯೋಜನೆಗಳು ಸಹ ಸರಿಯಾಗಿ ಕಾರ್ಯಗತ ಆಗಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಅಲ್ಲಿ ಕೆಲಸ ಮಾಡುತ್ತಿರುವ ಜನರಲ್ಲಿ ಅವರಲ್ಲಿಯೂ ಮುಖ್ಯವಾಗಿ ಜಿಲ್ಲಾಪರಿಷತ್‌ನ ಅಧ್ಯಕ್ಷರಲ್ಲಿ ಮತ್ತು ಉಪಾಧ್ಯಕ್ಷರಲ್ಲಿ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕೆಂಬ ಕಮಿಟ್‌ಮೆಂಟ್ ಇಲ್ಲದಿರುವುದು. ಈ ಕಾರಣದಿಂದ ಈ ಜಿಲ್ಲಾಪರಿಷತ್‌ಗಳ ಮತ್ತು ಮಂಡಲ್ ಪಂಚಾಯತ್‌ಗಳ ಕಾರ್ಯಚಟುವಟಿಕೆಗಳು ಯಾವ ರೀತಿಯಿಂದ ನಡೆಯುತ್ತಿವೆ ಎಂಬ ಬಗ್ಗೆ ಸೂಪರ್‌ವಿಷನ್ ಮಾಡುವ ಬಗ್ಗೆ ಒಂದು ನಿಗದಿತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈಗ ಈ ಕೆಲಸ ಆಗುತ್ತಿಲ್ಲ. ಈಗ ಇವುಗಳಿಗೆ ಸರ್ಕಾರ ಕೊಟ್ಟಿರುವ ಹಣವೇ ಕಡಿಮೆ. ಈ ಹಣವನ್ನು ಸಹ ಅವರು ಸರಿಯಾಗಿ ಖರ್ಚು ಮಾಡುತ್ತಿಲ್ಲ. ಏತಕ್ಕೆ ಅವರು ಹಣ ಕಡಿಮೆ ಖರ್ಚು ಮಾಡಿದ್ದಾರೆಂಬ ಬಗ್ಗೆ ನೋಡಲು ಸರ್ಕಾರ ನಿಗಾವಹಿಸಿಲ್ಲ. ಈ ಎಲ್ಲಾ ಕಾರಣಗಳಿಂದ ಸರ್ಕಾರದವರು ಏನಾದರೂ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ದೊಡ್ಡ ಕ್ರಾಂತಿಯನ್ನು ಮಾಡಿದ್ದೇವೆಂದರೆ ಅದು ತಪ್ಪಾಗುತ್ತದೆ ? ನಾನು ಅಧಿಕಾರ ವಿಕೇಂದ್ರೀಕರಣಕ್ಕೆ ವಿರೋಧ ಮಾಡುವುದಿಲ್ಲ. ಅದು ನಮ್ಮ ನೀತಿಯೂ ಅಲ್ಲ. ಅಧಿಕಾರ ವಿಕೇಂದ್ರೀಕರಣವಾಗಲೇಬೇಕು. ಈ ಕೆಲಸ ಆದನಂತರ ಅಲ್ಲಿ ಅಭಿವೃದ್ಧಿ ಕಾರ್ಯಗಳು ಯಾವ ರೀತಿ ಆಗುತ್ತಿವೆ ಎಂಬ ಬಗ್ಗೆ ಸರ್ಕಾರ ಗಮನಹರಿಸಬೇಕು. ಇಲ್ಲದಿದ್ದರೆ

ಅವರೇದೇ ಅದಂಥ ಪ್ಯಾರಲಲ್ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಾರೆ. ಈ ರೀತಿ ಕೆಲವು ಕಡೆ ನಡೆಯುತ್ತಿದೆ. ಆದ್ದರಿಂದ ಅವುಗಳ ಮೇಲೆ ಸರ್ಕಾರದ ಹಿಡಿತ ಇರಬೇಕು? ಅವರು ಏನು ಕೆಲಸ ಮಾಡುತ್ತಿದ್ದಾರೆಂಬ ಬಗ್ಗೆ ನಿಗಾವಹಿಸಿ ನೋಡಬೇಕು ಈ ಹಿಂದೆ ಜಿಲ್ಲಾಭಿವೃದ್ಧಿ ಮಂಡಳಿಗಳ ಸಭೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ವಿವರವಾಗಿ ಚರ್ಚೆ ನಡೆಸುತ್ತಿತ್ತು. ಆಗ ಅಭಿವೃದ್ಧಿ ಕಾರ್ಯ ಗಳ ಬಗ್ಗೆ ಸರಿಯಾದ ವಿಮರ್ಶೆ ಮಾಡಲು ಅವಕಾಶವಿತ್ತು. ಆದರೆ ಈಗ ಜಿಲ್ಲಾಪರಿಷತ್‌ಗಳು ಅಸ್ತಿತ್ವ ದಲ್ಲಿ ಬಂದಮೇಲೆ ಈ ಕೆಲಸ ನಡೆಯುತ್ತಿಲ್ಲ. ಇಂತಹ ಒಂದು ಕೆಲಸ ಈಗಲೂ ನಡೆಯಬೇಕು. ಈ ಸಲ ಜಿಲ್ಲಾಪರಿಷತ್‌ಗಳಿಗೆ ೯೦೦ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ನಿಗದಿ ಮಾಡಿದ್ದಾರೆ ಆದರೆ ಇಷ್ಟು ಹಣವನ್ನು ಕೊಡುತ್ತಾರೆಂಬ ನಂಬಿಕೆ ನನಗಿಲ್ಲ. ಇವರಿಗೆ ಸಾಕಷ್ಟು ಆದಾಯ ಬಂದರೆ ಮಾತ್ರ ಇಷ್ಟು ಹಣವನ್ನು ಕೊಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಅಂತಹ ಒಂದು ಪರಿಸ್ಥಿತಿ ಸಹ ಇದೆ.

ಆದರೆ ಬೇರೆ ಬೇರೆ ಇಲಾಖೆಗಳನ್ನು ತೆಗೆದುಕೊಂಡರೆ ಕೋಟ್ಯಾಂತರ ರೂಪಾಯಿಗಳ ಬಾಕಿ ವಸೂಲು ಮಾಡದೇ ಇರುವ ಪರಿಸ್ಥಿತಿ ಇದೆ. ಹೀಗಿರುವಾಗ ಸಂಪನ್ಮೂಲ ಕ್ರೋಢೀಕರಣ ಮಾಡುವುದು ಹೇಗೆ, ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುತ್ತೇವೆ, ಜಿಲ್ಲಾ ಪರಿಷತ್ತುಗಳಿಗೆ ಕೋಟಿಗಟ್ಟಲೆ ಹಣ ಖರ್ಚುಮಾಡುತ್ತೇವೆ ಅಂದರೆ ಆ ನಂಬಿಕೆ ನನಗೆ ಇಲ್ಲ. ಆದುದರಿಂದ ಇದರ ಬಗ್ಗೆ ನಿಗಾವಹಿಸ ಬೇಕು, ಕಾಳಜಿವಹಿಸಬೇಕು, ಕಾಳಜಿವಹಿಸದೇ ಹೋದರೆ ಅಧಿಕಾರ ವಿಕೇಂದ್ರೀಕರಣ ಮಾಡಿರತಕ್ಕಂಥ ವ್ಯವಸ್ಥೆಯಲ್ಲಿ ಸಾಮಾನ್ಯ ಜನ ನಂಬಿಕೆ ಕಳೆದಕೊಳ್ಳತಕ್ಕಂಥ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿಗೆ ಹೋಗದ ರೀತಿಯಲ್ಲಿ ಸರ್ಕಾರ ನಿಗಾವಹಿಸಬೇಕು.

ಇನ್ನು ವಿದ್ಯುತ್ ಉತ್ಪಾದನೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹಲವಾರು ಯೋಜನೆಗಳನ್ನು ಇದರಲ್ಲಿ ಕೊಟ್ಟಿದ್ದಾರೆ. ಮುಖ್ಯವಾಗಿ ವಿದ್ಯುತ್ ಇಲ್ಲದೆ ರಾಜ್ಯದ ಅಭಿವೃದ್ಧಿ ಕಾರ್ಯಗಳು ಸಾಧ್ಯವಾಗು ವುದಿಲ್ಲ, ಕೈಗಾರಿಕೆಗಳ ಬೆಳವಣಿಗೆ ಸಾಧ್ಯವಾಗುವುದಿಲ್ಲ. ಈಗ ನಮ್ಮ ರಾಜ್ಯದಲ್ಲಿ ವಿದ್ಯುತ್ ಕಡಿತ ಇದೆ. ಈ ವಿದ್ಯುತ್ ಕಡಿತದಿಂದ ಹಲವಾರು ಕೈಗಾರಿಕೆಗಳು ಮುಚ್ಚಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಇದೆ. ಆದಕಾರಣ ಪವರ್ ಜನರೇಷನ್ ಬಗ್ಗೆ ಯೋಜನೆಗಳನ್ನು ಇಟ್ಟಿದ್ದಾರೆ. ೧) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ೪ನೇ ಹಂ ೪೨೧೦ ಮೆಗಾವ್ಯಾಟ್, ೨) ಶರಾವತಿ ಟೇಲ್ ರೇಸ್ ಯೋಜನೆ ೨೪೦ ಮೆಗಾವ್ಯಾಟ್, ೩) ಬಂಧಿತ ಡೀಸಲ್ ವಿದ್ಯುತ್ ಜನಕಗಳು ೭೭ ಮೆಗಾವ್ಯಾಟ್ ಮತ್ತು ಯಲಹಂಕ ಗ್ಯಾಸ್ ಟರ್ಬೈ ಡೀಸೆಲ್ ಯೋಜನೆ ೧೨೦ ಮೆಗಾವ್ಯಾಟ್ ಈ ರೀತಿ ನಾಲ್ಕಾರು ಯೋಜನೆಗಳನ್ನು ಸರ್ಕಾರ ನಮ್ಮ ಮುಂದೆ ಇಟ್ಟಿದೆ, ಇದನ್ನು ಕಾರ್ಯಗತಗೊಳಿಸುತ್ತೇವೆ ಕೈಗೆತ್ತಿ ಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಇವುಗಳನ್ನು ಕಾರ್ಯಗತಗೊಳಿಸುವುದಕ್ಕೆ ಸರ್ಕಾರದ ಹತ್ತಿರ ಹಣ ಇದೆಯೋ ಎನ್ನುವುದು ಪ್ರಶ್ನೆ. ಬಜೆಟ್ ಭಾಷಣದಲ್ಲಿ "ಕರ್ನಾಟಕ ವಿದ್ಯುಚ್ಛಕ್ತಿ ನಿಗಮಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಬರಬೇಕಾದ ಬಹಳಷ್ಟು ಹಣ ಬಾಕಿ ಇದೆ. ಎಂದು ಹೇಳಿದ್ದಾರೆ. ಇಲ್ಲೂ ಕೂಡ ಕ್ರೈಸಿಸ್ ಇದೆ, ಬಹಳ ಬಾಕಿ ಇದೆ ಎಂದು ಹೇಳುವಾಗ ಈ ಪವರ್ ಪ್ರಾಜೆಕ್ಟ್‌ಗಳಿಗೆ ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳುವುದಕ್ಕಾಗುತ್ತದೆಯೋ. ಇದೇ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇವಲ ೩ ತಿಂಗಳ ಹಿಂದೆ ಮಾನ್ಯ ಕೈಗಾರಿಕಾ ಸಚಿವ ರಾದ ಜೆ. ಹೆಚ್. ಪಟೇಲರು ಒಂದು ಹೇಳಿಕೆಯನ್ನು ಕೊಟ್ಟರು ಅದು ಟೈಮ್ಸ್ ಆಫ್ ಇಂಡಿಯಾ ದಲ್ಲಿ ಬಂದಿತ್ತು. ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೋಸ್ಕರ ಜಾಗ ವನ್ನು ಸ್ವಾಧೀನ ಮಾಡಿಕೊಂಡಿದ್ದೇವೆ. ೮೦೦೦ ಎಕರೆ ಭೂಮಿಯಲ್ಲಿ ಒಂದು ಸಾವಿರ ಎಕರೆಯನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಕೋಲ್ ಥರ್ಮಲ್ ಪ್ಲಾಂಟನ್ನು ಮಾಡುತ್ತೇವೆ ಅದಕ್ಕಾಗಿ ಪ್ರಪೋಸ ಲನ್ನು ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳಿಸಿಕೊಟ್ಟಿದ್ದೇವೆ ಎಂದು ಹೇಳಿದರು. ಕೋಲ್ ಥರ್ಮಲ ಪ್ಲಾಂಟ್ ಮಾಡುವುದಕ್ಕೆ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಇದೆ ಎಂದು ಅವರು ಹೇಳಿದರು. ಆದರೆ ಮುಖ್ಯ ಮಂತ್ರಿಗಳ ಬಜೆಟ್ ಭಾಷಣದಲ್ಲಿ ಆ ಕೋಲ್ ಥರ್ಮಲ್ ಪ್ಲಾಂಟ್ ಬಗ್ಗೆ ಒಂದೂ ಪ್ರಸ್ತಾಪ ಇಲ್ಲ, ಅದಕ್ಕೆ ಮಂಜೂರಾತಿ ಏನಾದರೂ ಸಿಕ್ಕಿದೆಯೋ, ಅದರ ಕೆಪಾಸಿಟಿ ಏನು, ಎಷ್ಟು ವಿದ್ಯುತ್ ಉತ್ಪಾನೆ ಮಾಡುವುದಕ್ಕೆ ಸಾಧ್ಯವಿದೆ, ಇನ್‌ಫ್ರಾಸ್ಟ್ರಕ್ಚರ್ ಏನಿದೆ ಎಂಬುದರ ಒಂದು ಮಾತನ್ನೂ ಕೂಡ ಬಜೆಟ್ ಭಾಷಣದಲ್ಲಿ ಹೇಳದೇ ಏಕೆ ಕೈಬಿಟ್ಟಿದ್ದಾರೆ ಎನ್ನುವ ಅನುಮಾನ ನನ್ನನ್ನು ಕಾಡುತ್ತಿದೆ. ವಿಜಯನಗರ ಉಕ್ಕು ಕಾರ್ಖಾನೆಯ ಬಗ್ಗೆ ಒಂದು ಮಾತನ್ನೂ ಹೇಳಿದ್ದಾರೆ. ಕೇಂದ್ರ, ಮಂಗಳೂರು ತೈಲ ಶುದ್ಧೀ

ಗಾರ ಮತ್ತು ವಿಜಯನಗರ ಉಕ್ಕು ಕಾರ್ಖಾನೆಗಳ ಬಗ್ಗೆ ಮಲತಾಯಿಧೋರಣೆ ತಾಳುತ್ತಿದೆ. ಈ ವಿಚಾರದಲ್ಲಿ ಎರಡು ಅಭಿಪ್ರಾಯವಿಲ್ಲ. ಕೇಂದ್ರ ರಾಜ್ಯಕ್ಕೆ ಮಲತಾಯಿಧೋರಣೆ ತೋರುತ್ತಿದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಕೇಂದ್ರಸರ್ಕಾರದ ಮೇಲೆ ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ ಎಷ್ಟರಮಟ್ಟಿಗೆ ಒತ್ತಡ ತರಬೇಕೋ ಅಷ್ಟು ಒತ್ತಡವನ್ನು ಇಲ್ಲಿಯವರೆಗೆ ನೀವು ತಂದಿಲ್ಲ, ಇದರಲ್ಲಿ ರಾಜ್ಯಸರ್ಕಾರದ ಪ್ರಾಮಾಣಿಕತೆಯನ್ನು ಕಾನ್ ಪ್ರಶ್ನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ೧೯೮೩ರಲ್ಲಿ ಬಹಿರಂಗವಾಗಿ ಒಂದು ಆಶ್ವಾಸನೆ ಕೊಟ್ಟಿದ್ದರು ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ ನಾನು ಕೇಂದ್ರಸರ್ಕಾರದ ಪ್ರಧಾನಮಂತ್ರಿಗಳ ಹತ್ತಿರಕ್ಕೆ ಸರ್ವಪಕ್ಷಗಳ ಒಂದು ನಿಯೋಗವನ್ನು ಕಳುಹಿಸುತ್ತೇನೆ. ಆದರೂ ಅವರು ಆಸಕ್ತಿ ತೋರದೇ ಹೋದಪಕ್ಷದಲ್ಲಿ ಇಡೀ ರಾಜ್ಯ ಬಂದ್ ಮಾಡುವುದಕ್ಕೆ ತಯಾರಿದ್ದೇನೆ, ನಿಮ್ಮ ಜೊತ ಬರುವುದಕ್ಕೆ ತಯಾರಿದ್ದೇನೆ ಎಂದು ಹೇಳಿದರು. ಅವರನ್ನು ಕರೆಯುವುದಿಲ್ಲ, ಬರುವುದಿಲ್ಲ ಎಂದು ಗೊತ್ತಿದೆ. ಆದರೆ ಸರ್ವಪಕ್ಷಗಳ ನಿಯೋಗವನ್ನು ಕಳಿಸಿ, ಅವರು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ಒತ್ತಾಯವಮಾಡತಕ್ಕಂಥ ಪ್ರಯತ್ನವನ್ನು ಇಲ್ಲಿಯವರೆಗೆ ೫ ವರ್ಷಗಳಾಗುತ್ತಾ ಬಂದರೂ ಮುಖ್ಯ ಮಂತ್ರಿಗಳು ಮಾಡಲಿಲ್ಲ. ಇದನ್ನು ಆದಷ್ಟುಬೇಗ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲದೇಹೋದಪಕ್ಷದಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ ನಮಗಿರತಕ್ಕ ಪ್ರಾಮಾಣಿಕತೆಯನ್ನು ಕಾಳಜಿಯನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಮುಖ್ಯವಾಗಿ ಈಗ ಬಳ್ಳಾರಿ ಜಿಲ್ಲೆಯ ಪರಿಸ್ಥಿತಿ ಏನಾಗಿದೆಯೆಂದರೆ ಅದು ಬಹಳ ಅಧೋಗತಿಗೆ ಹೋಗಿದೆ, ಒಂದು ಕಡೆ ಹೈದರಾಬಾದ್ ಕರ್ನಾಟಕ ಬೆಳವಣಿಗೆಯಾಗಬೇಕು, ಅದರ ಅಭಿವೃದ್ಧಿ ಆಗಬೇಕು ಎನ್ನತಕ್ಕಂಥ ಅಭಿಪ್ರಾಯ ಇದೆ.

ನಮ್ಮ ಬಳ್ಳಾರಿ ಜಿಲ್ಲೆಯ ಜನ ಆಂಧ್ರಪ್ರದೇಶಕ್ಕೆ ಹತ್ತಿರವಾಗಿದ್ದಾರೆ, ಹೈದರಬಾದ್ ಕರ್ನಾಟಕದಲ್ಲಿ ಯಾವುದೇ ನಾಯಕರಿಗೂ ಬಳ್ಳಾರಿ ಜಿಲ್ಲೆಯ ಗಮನದಲ್ಲಿ ಬರುವುದಿಲ್ಲ. ಬಳ್ಳಾರಿ ಜಿಲ್ಲೆಯ ಬಗ್ಗೆ ಯೋಚನೆ ಕೂಡ ಮಾಡುವುದಿಲ್ಲ. ಅದಕ್ಕೆ ಏನು ಕಾರಣವೋ ಗೊತ್ತಿಲ್ಲ. ರಾಜಕೀಯವಾಗಿ ಕೂಡ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಯನ್ನು ಸರ್ಕಾರ ಸಂಪೂರ್ಣವಾಗಿ ತಾತ್ಸಾರ ಮಾಡುತ್ತಿದೆಯೆಂದು ಈ ಸಂದರ್ಭದಲ್ಲಿ ಆಪಾದನೆ ಮಾಡಬೇಕಾಗಿದೆ. ಅಲ್ಲಿರತಕ್ಕ ಒಂದೇ ಒಂದು ಆಶಾಭಾವನೆ ಎಂದರೆ ವಿಜಯನಗರ ಉಕ್ಕಿನ ಕಾರ್ಖಾನೆ. ಈ ಕಾರ್ಖಾನೆಯ ಉಪಯೋಗ ಬರೀ ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಇಡೀ ರಾಜ್ಯಕ್ಕೆ ಇದರ ಅನುಕೂಲ ಸಿಗುವುದರಿಂದ ಈ ಒಂದು ದೊಡ್ಡ ಕೈಗಾರಿಕೆಯ ವಿಚಾರದಲ್ಲಿ ರಾಜ್ಯಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ಈ ವಿಚಾರದಲ್ಲಿ ಕೇಂದ್ರಸರ್ಕಾರದ ಮೇಲೆ ಯಾವುದೇ ರೀತಿಯ ಒತ್ತಡ ತರುವುದಕ್ಕೆ ಕಾರ್ಯಕ್ರಮ ಹಾಕಿಕೊಂಡರೆ, ನಮ್ಮ ಬೆಂಬಲ ಇದೆ. ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುತ್ತಾ, ಕೇಂದ್ರ ಸರ್ಕಾರವನ್ನು ೩ ಸಹಕಾರ ಸಕ್ಕರೆ ಕಾರ್ಖಾನೆಗಳ ಬಗ್ಗೆ ಲೈಸೆನ್ಸ್ ಕೇಳಿದ್ದೇವೆ. ಇಲ್ಲಿಯವರೆಗೆ ಪರ್ಮಿಷನ್ ಸಿಕ್ಕಿಲ್ಲ ಅಪ್ರೂವಲ್ ಸಿಕ್ಕಿಲ್ಲ, ಇದರಲ್ಲಿ ಕೂಡ ಮಲತಾಯಿ ಧೋರಣೆ ತೋರಿಸುತ್ತಿದ್ದಾರೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಕಾಂಗ್ರೆಸ್ಸೇತರ ಸರ್ಕಾರಗಳಿಗೆ ಮಲತಾಯಿಧೋರಣೆ ತೋರಿಸುತ್ತಿದೆ ಎಂಬುದರಲ್ಲಿ ಅನುಮಾನ ಇಲ್ಲ. ಅದು ಕಮ್ಯುನಿಸ್ಟ್ ಸರಕಾರ ಇರಬಹುದು, ಸಿ. ಪಿ. ಎಂ. ಸರ್ಕಾರ ಇರಬಹುದು, ತೆಲುಗುದೇಶಂ ಸರ್ಕಾರ ಇರಬಹುದು, ಇದು ನಿಜವಾದ ವಿಷಯವೇ ಇವತ್ತು ಕರ್ನಾಟಕದಲ್ಲಿರುವ ಹಲವಾರು ಸಕ್ಕರೆ ಕಾರ್ಖಾನೆಗಳು ಮುಚ್ಚಿಹೋಗಿವೆ. ಮುಚ್ಚುವ ಸ್ಥಿತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಜೀವ ತುಂಬದೇ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದನ್ನು ನಾವು ಒಪ್ಪುವುದಿಲ್ಲ. ಮುಚ್ಚುವ ಸ್ಥಿತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಸರ್ಕಾರವೇ ವಹಿಸಿಕೊಂಡು ನಡೆಸಲಿ. ನಾವು ಉತ್ಪಾದನೆ ಮಾಡತಕ್ಕ ಕಬ್ಬಿಗೆ ಅನುಗುಣವಾಗಿ ಕಾರ್ಖಾನೆಗಳನ್ನು ಮಾಡಿದರೆ ಅನುಕೂಲವಾಗುತ್ತದೆ. ಮಲತಾಯಿ ಧೋರಣೆ ತೋರಿಸುತ್ತಾರೆಂದು ಒಂದೇ ಮಾತಿನಲ್ಲಿ ಹೇಳುವ ವಾದವನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಸಣ್ಣ ಕೈಗಾರಿಕೆಗಳ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. "ನಷ್ಟದಲ್ಲಿ ನಡೆಯುತ್ತಿರುವ ಉದ್ಯಮಗಳ ಪುನರುಜ್ಜೀವನವೂ ಸೇರಿದಂತೆ ಸಣ್ಣ ಉದ್ಯಮಗಳಿಗಾಗಿ ಸಮಗ್ರ ಶಾಸನವೊಂದನ್ನು ತರಲಾಗುವುದು. ರಾಜ್ಯದಲ್ಲಿ ಸಣ್ಣ ಉದ್ಯಮಗಳು ಬಂದ್ ಆಗಿವೆ, ಅದರಲ್ಲಿ ಮುಖ್ಯವಾಗಿ ಟೆಕ್ಸ್‌ಟೈಲ್ ಮತ್ತು ಸ್ಪಿನ್ನಿಂಗ್ ಇಂಡಸ್ಟ್ರೀಸ್, ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿಗಳು ಮುಚ್ಚಿವೆ. ೧೯೮೩ರಲ್ಲಿ ಕೈಗಾರಿಕಾ

ನೀತಿಯ ಘೋಷಣೆಯ ಪ್ರಕಾರ ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಮಾಡಲಾಗುವುದೆಂದು ತಿಳಿಸಲಾಯಿತು. ಅವರ ಲೆಕ್ಕದಲ್ಲಿ ಘೋಷಣೆ ಸರಿಯಿರಬಹುದು, ರಿಜಿಸ್ಟರ್ ಮಾಡಿಸಿರುವ ಇಂಡಸ್ಟ್ರೀಸ್‌ಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಹಲವಾರು ಸಾವಿರ ಕೈಗಾರಿಕೆಗಳಾಗುತ್ತವೆ. ಇವುಗಳ ಫಿಸಿಕಲಿ ಅಚೀವ್‌ಮೆಂಟ್‌ಗೆ ಬರೀ ಅಂಕಿಸಂಖ್ಯೆಗಳನ್ನು ನೋಡುವುದು ಸರಿಯಲ್ಲ. ಈ ಪಾಲಿಸಿ ಸ್ವಲ್ಪಮಟ್ಟಿಗೆ ತಪ್ಪು ಎಂದು ಕಾಣುತ್ತದೆ. ಮಾನ್ಯ ಪಟೇಲರು ಒಂದು ಸಂದರ್ಭದಲ್ಲಿ ಇದನ್ನು ಒಪ್ಪಿಕೊಂಡಿದ್ದಾರೆ.

ಉಪಾಧ್ಯಕ್ಷರು.—ತಮಗೆ ೨೫ ಆಯಿತು. ಇನ್ನು ಎಷ್ಟು ಹೊತ್ತು ಬೇಕಾಗಬಹುದು.

ಶ್ರೀ ಯಂ. ಭೂಪತಿ.— ಇನ್ನು ೫ ನಿಮಿಷದಲ್ಲಿ ಮುಗಿಸುತ್ತೇನೆ, ಇಲ್ಲಿ ಶಾಸನದಲ್ಲಿ ಅಡಕವಾದಂಥ ಅಂಶಗಳು ಏನು ? ಶಾಸನವನ್ನು ಮಾಡುವಾಗ ವಿರೋಧ ಪಕ್ಷದವರನ್ನು ನಂಬಿಕೆಗೆ ತೆಗೆದುಕೊಂಡು ಮಾಡುತ್ತೀರೋ, ಸ್ವತಃ ನೀವೇ ನೀತಿಯನ್ನು ಮಾಡುತ್ತೀರೋ ? ಅದನ್ನು ಸ್ಪಷ್ಟಪಡಿಸಿದರೆ ಒಳ್ಳೆಯದು. ಒಂದೊಂದು ಟ್ರೇಡ್ ಇಂಡಸ್ಟ್ರೀಸ್‌ನಲ್ಲೂ ಒಂದೊಂದು ರೀತಿಯ ಕ್ರೈಸಿಸ್ ಇದೆ. ನೀವು ಯಾವರೀತಿಯ ಶಾಸನ ತರುತ್ತೀರಿ ಅದು ಉದ್ಯಮಗಳ ಅಭಿವೃದ್ಧಿಗೆ ಬೆಳವಣಿಗೆಗೆ ಉತ್ತೇಜನಕಾರಿಯಾಗಿರುವುದಲ್ಲದೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂಥಾದ್ದಿರಬೇಕು. ಈ ಸೌಲಭ್ಯವನ್ನು ಒದಗಿಸುವಾಗ ಒಂದು ಕಂಡೀಷನ್ ಏನು ಯಾವುದೇ ರೀತಿಯ ಫೈನಾನ್ಷಿಯಲ್ ಬರ್ಡನ್ ಸರ್ಕಾರದ ಮೇಲೆ ಇರಬಾರದು, ಸರ್ಕಾರದ ಮೇಲೆ ಫೈನಾನ್ಷಿಯಲ್ ಬರ್ಡನ್ ಇಲ್ಲದೇ ಇರತಕ್ಕ ಕೈಗಾರಿಕೆಗಳು ಇದ್ದರೆ, ಇವರು ಲಿಪ್ ಸಿಂಪತಿ ತೋರಿಸುತ್ತಾರೆ, ಶಹಭಾಸ್ ಎಂದು ಹೇಳಿ ಬೆನ್ನುತಟ್ಟಿ ಕಳುಹಿಸುತ್ತಾರೆ. ಅದರಿಂದ ಈ ಒಂದು ಉದ್ದೇಶ ಸಫಲವಾಗುವುದಿಲ್ಲ. ಸರ್ಕಾರ ಇವೊತ್ತು ರಾಜ್ಯದಲ್ಲಿ ಉಂಟಾಗಿರುವ ಕೈಗಾರಿಕಾ ಬಿಕ್ಕಟ್ಟನ್ನು ಮತ್ತೆ ಮುಚ್ಚಿರತಕ್ಕ ಕೈಗಾರಿಕೆಗಳನ್ನು ತೆಗೆಸತಕ್ಕ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುತ್ತಿಲ್ಲ. ಇದನ್ನು ಮೊದಲು ಮಾಡಬೇಕು. ಈ ರೀತಿ ಮುಚ್ಚಿರುವ ಕೈಗಾರಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಡ್ಜೆಟ್ ಭಾಷಣದಲ್ಲಿ ಏನಾದರೂ ಮಾತನಾಡಬಹುದು ಎಂದು ನಾವು ತಿಳಿದು ಕೊಂಡಿದ್ದೆವು. ಆದರೆ ಈ ಬಡ್ಜೆಟ್ ಭಾಷಣದಲ್ಲಿ ಸೂಕ್ಷ್ಮವಾಗಿ ಸಣ್ಣ ಕೈಗಾರಿಕೆಗಳ ನೀತಿಯ ಬಗ್ಗೆ ಹೊಸದನ್ನು ಮಾಡುತ್ತೇವೆಂದು ಹೇಳಿದ್ದಾರೆಯೇ ವಿನಹ ಯಾವುದೇ ರೀತಿಯ ವಿವರಗಳನ್ನು ಕೊಡತಕ್ಕದ್ದು ಮಾಡುತ್ತಿಲ್ಲ, ಆದ್ದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೊನೆಯಲ್ಲಿ ಉತ್ತರ ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡುತ್ತೇನೆ.

ಇನ್ನು ಸ್ವಾಗತಿಸತಕ್ಕ ವಿಚಾರ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ೧೦೦ ಹಾಸ್ಟಲ್ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಬಸವಣ್ಣಪ್ಪನವರು ಮೂರು ವರ್ಷಗಳಲ್ಲಿ ೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪರಿಶಿಷ್ಟ ವರ್ಗದವರಿಗೆ ಈ ರೀತಿಯಾಗಿ ಏನು ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರು ಅದು ಬಹಳ ಒಳ್ಳೆಯ ವಿಚಾರ. ಈಗಾಗಲೇ ಇದು ಬಹಳ ತಡವಾಗಿದೆ, ಇಷ್ಟು ಸಮಯವನ್ನು ಕೂಡ ತಾವು ತೆಗೆದುಕೊಳ್ಳಬೇಕಾಗಿರಲಿಲ್ಲ. ಬ್ಯಾಕ್‌ವರ್ಡ್‌ಕ್ಲಾಸ್ ಮೈನಾರಿಟೀಸ್‌ರವರು ೧೦೦ ಹಾಸ್ಟಲುಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ, ಅದರ ಜೊತೆಗೆ ೫೦ ಆಶ್ರಮ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಈ ವಿಚಾರಗಳನ್ನೆಲ್ಲಾ ನಾವು ಸ್ವಾಗತ ಮಾಡಬೇಕಾಗುತ್ತದೆ. ಇವೊತ್ತು ಶಿಕ್ಷಣಕ್ಕೆ ಮೂಲಭೂತವಾದಂಥ ಈ ಸೌಲಭ್ಯಗಳು ಬೇಕಾಗುತ್ತವೆ. ಇನ್ನು ವಿರೋಧ ಮಾಡತಕ್ಕ ಅಂಶಗಳು ಎಂದ. "ಹಳೆಯ ವಿಶ್ವವಿದ್ಯಾನಿಲಯಗಳಿಗೆ ನೀಡಲಾಗುತ್ತಿದ್ದ ಅನುದಾನಗಳನ್ನು ಪ್ರಸಕ್ತ ಹಂತದಲ್ಲಿ ಸ್ಥಗಿರೆಗೊಳಿಸಲಾಗುವುದು ಮತ್ತು ಅದರಿಂದ ಆಗುವ ಉಳಿತಾಯಗಳನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚ ಮಾಡಲಾಗುವುದು" ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಸರ್ಕಾರಕ್ಕೆ ಹೇಳುವಂಥಾದ್ದು ಇಷ್ಟೆ. ಇವೊತ್ತಿನವರೆಗೆ ಸರ್ಕಾರ ಯಾವುದೇ ಯೂನಿವರ್ಸಿಟಿಗೆ ತಾವು ಪ್ರಪೋಸಲ್ ಮಾಡಿರತಕ್ಕ ಬಡ್ಜೆಟ್ಟಿನ ಅನುದಾನವನ್ನು ಸಂಪೂರ್ಣವಾಗಿ ಕೊಡಲಿಕ್ಕೆ ಆಗಿಲ್ಲ, ಗುಲ್ಬರ್ಗ ಯೂನಿವರ್ಸಿಟಿ ಪ್ರಾರಂಭವಾಗಿ ಎಷ್ಟೋ ವರ್ಷಗಳಾಗಿದ್ದರೂ ಸಂಪೂರ್ಣವಾಗಿ ಕಟ್ಟಡವನ್ನು ಕಟ್ಟಲಿಕ್ಕೆ ಸಾಧ್ಯವಾಗಿಲ್ಲ. ಇದರ ಜೊತೆಗೆ ಶಿವಮೊಗ್ಗದಲ್ಲಿ ಕುವೆಂಪು ಯೂನಿವರ್ಸಿಟಿ ಪ್ರಾರಂಭ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಯೂನಿವರ್ಸಿಟಿ ಮಟ್ಟದಲ್ಲಿ ಶಿಕ್ಷಣ ಮಟ್ಟವನ್ನು ಕಾಪಾಡಿಕೊಂಡು ಬರಬೇಕಾದರೆ ಅಲ್ಲಿ ಈಗ ಕೊಡತಕ್ಕ ಅನುದಾನದ ಮೊತ್ತ ಬಹಳ ಕಡಿಮೆ, ಇದರಲ್ಲಿ ಇನ್ನೂ ಕಡಿಮೆ ಮಾಡುವು

ದಾದರೆ ಶಿಕ್ಷಣಕ್ಕೆ ಬೇಕಾಗಿರತಕ್ಕ ಒಂದು ಪರಿಸರವನ್ನು ಯೂನಿವರ್ಸಿಟಿ ಲೆವೆಲ್‌ನಲ್ಲಿ ಸೃಷ್ಟಿಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇವೊತ್ತು ಪ್ರೈಮರಿ, ಹೈಸ್ಕೂಲು ಎಜುಕೇಷನ್ ಹೆಚ್ಚು ಕಡಿಮೆ ಪ್ರೈವೇಟ್‌ನವರಿಗೆ ಮಾರಾಟ ಮಾಡಿದಂತೆ ಆಗಿದೆ. ರಾಜ್ಯದಲ್ಲಿ ಇವೊತ್ತು ಉನ್ನತ ಶಿಕ್ಷಣಕ್ಕಾಗಿ ಸುಮಾರು ೫೬ ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೀರಿ ಪ್ರಾಥಮಿಕ ಶಾಲೆಗಳಿಗೆ ೨೭ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೀರಿ. ಈಗ ಇವು ವ್ಯಾಪಾರ ಮಾಡತಕ್ಕ ಸಂಸ್ಥೆಗಳಾಗಿವೆ. ಶಿಕ್ಷಣ ಸಂಸ್ಥೆ ಪ್ರಾರಂಭ ಮಾಡುವುದು ಎಂದರೆ ವ್ಯಾಪಾರ ಮಾಡುವುದು ಎಂದು ಅರ್ಥ. ಯಾರಾದರೂ ಒಬ್ಬರು ಒಂದು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಿದರೆ ಅವರು ಎರಡು ವರ್ಷಗಳಲ್ಲಿ ಕಾರು ತೆಗೆದುಕೊಂಡು ಒಂದು ಬಂಗಲೆ ಕಟ್ಟಿಕೊಳ್ಳುತ್ತಾರೆ. ಟೀಚರ್ಸ್ ಅಪಾಯಿಂಟ್‌ಮೆಂಟ್‌ನಲ್ಲಿ ಲಂಚ ತೆಗೆದುಕೊಳ್ಳುತ್ತಾರೆ. ಐಷಾರಾಮವಾಗಿ ಜೀವನ ಮಾಡುತ್ತಾರೆ. ಇದನ್ನು ನಾವು ಕಣ್ಣಾರೆ ನೋಡಿರುವುದರಿಂದ ಹೇಳುತ್ತಿದ್ದೇವೆ. ಆದ್ದರಿಂದ, ಇಂತಹ ಪರಿಸ್ಥಿತಿಯನ್ನು ನಿಜವಾಗಿಯೂ ಕೊಡ ಹೋಗಲಾಡಿಸಬೇಕು. ಇವೊತ್ತು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತೇವೆಂದು ಹೇಳಿದ್ದೀರಿ, ಈ ಶಿಕ್ಷಣದ ಬಗ್ಗೆ ಹೆಚ್ಚು ಗಮನಹರಿಸುವುದಕ್ಕೆ ಯೂನಿವರ್ಸಿಟಿ ಗ್ರಾಂಟ್ಸ್ ಕಡಿಮೆ ಮಾಡಬೇಕಾಗಿಲ್ಲ, ಇದು ತಪ್ಪು ಬೇರೆ ರೀತಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಅನುಕೂಲವನ್ನು ಕೊಟ್ಟು, ಅಲ್ಲಿಗೆ ಬೇಕಾಗಿರತಕ್ಕ ಒಂದು ಒಳ್ಳೆಯ ಪರಿಸರವನ್ನು ನಿರ್ಮಾಣ ಮಾಡಿ ಶಿಕ್ಷಣವನ್ನು ಬೆಳೆಸಬೇಕು. ಇವೊತ್ತು ಯೂನಿವರ್ಸಿಟಿ ಗ್ರಾಂಟ್ಸ್ ಕಡಿಮೆ ಮಾಡುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಇನ್ನು ಸ್ಟೈಫಂಡರಿ ಪದವೀಧರರಿಗೆ ೫೦ ರೂಪಾಯಿಗಳು ಜಾಸ್ತಿ ಮಾಡಿದ್ದೇವೆಂದು ಹೇಳಿದ್ದಾರೆ, ಇವರಿಗೆ ೫೦ ರೂಪಾಯಿ ಜಾಸ್ತಿ ಮಾಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಈಗಾಗಲೇ ಅವರಲ್ಲಿ ೩೦–೩೫ ವರ್ಷ ದಾಟಿರುವವರು ಇದ್ದಾರೆ. ಅವರಿಗೆ ಕೆ. ಪಿ. ಎಸ್. ಸಿ. ಯಲ್ಲಿ ೫೦ ಪರ್‌ಸೆಂಟ್ ರಿಸರ್ವೇಷನ್ ಕೊಡುತ್ತಿದ್ದೇವೆಂದು ಹೇಳುವುದು ಬೇರೆ ಪ್ರಶ್ನೆ. ಆದರೆ ಎಲ್ಲರೂ ಅದರಲ್ಲಿ ಸೆಲೆಕ್ಟ್ ಆಗುವುದಿಲ್ಲ.

ಆದರೆ ಈ ಜನರಿಗೆ ಏನಾದರೂ ಅನುಕೂಲ ಮಾಡಬೇಕೆಂದಿದ್ದರೆ, ಸರ್ಕಾರದ ಕಾನೂನಿನಲ್ಲಿ ಏನಾದರೂ ತೊಡಕಿದ್ದರೆ ಅದನ್ನು ನಿವಾರಣೆ ಮಾಡಿ. ಇವರನ್ನು ಬೇರೆಕಡೆಗೆ ಟ್ರ್ಯಾನ್ಸ್‌ಫರ್ ಮಾಡುವುದಕ್ಕೆ ಬದಲಾಗಿ ಈಗ ಇವರು ಎಲ್ಲೆಲ್ಲಿದ್ದಾರೆ ಅಲ್ಲಲ್ಲಿಯೇ ಖಾಯಂ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಇವರೇನೂ ಹೆಚ್ಚು ಜನರಿಲ್ಲ. ತಾವು ಈಗಾಗಲೇ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ರೆಗ್ಯುಲರೈಸ್ ಮಾಡಿದ್ದೀರಿ. ಅದೇರೀತಿ ಇವರಿಗೂ ಮಾಡಿದರೆ ಒಳ್ಳೆಯದು. ಇವರು ಕೇವಲ ಕೆಲವು ಸಾವಿರ ಜನ ಮಾತ್ರ ಇದ್ದಾರೆ. ಆದ್ದರಿಂದ ಈ ಸ್ಟೈಪೆಂಡರಿಯವರನ್ನು ಮಾನವೀಯತೆಯಿಂದ ಅವರು ಇರತಕ್ಕ ಜಾಗದಲ್ಲಿಯೇ ಖಾಯಂ ಮಾಡಿದರೆ ಅವರಿಗೂ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೂ ಕೂಡ ಒಳ್ಳೆಯ ಹೆಸರು ಬರುತ್ತದೆ. ನೀವು ಕೇವಲ ೫೦ ರೂಪಾಯಿಗಳನ್ನು ಅವರಿಗೆ ಹೆಚ್ಚು ಮಾಡಿದರೆ ಅದರಿಂದ ಅವರಿಗೆ ಏನೇನೂ ಪ್ರಯೋಜನವಾಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ.

ಇನ್ನು ಪೋಲೀಸ್ ಆಯೋಗದ ಬಗ್ಗೆ ಹೇಳುವುದಾದರೆ, ಪೋಲೀಸ್ ಆಯೋಗದ ಶಿಫಾರಸುಗಳ ಮೇರೆಗೆ, ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಕಡಿಮೆ ದರದಲ್ಲಿ ಅತ್ಯವಶ್ಯ ದಿನಸಿಗಳ ಸರಬರಾಜು ಮಾಡುವುದಾಗಿ ಹೇಳಿದ್ದೀರಿ. ಪೋಲೀಸ್‌ನವರ ಬಗ್ಗೆ ನಮಗೆ ಒಳ್ಳೆಯ ಅಭಿಪ್ರಾಯ ಇದೆ. ನಾವು ಮಾತನಾಡುವಾಗ ಪೋಲೀಸ್ ಎಂದರೆ, ಇವರು ಏನಪ್ಪಾ ಮಾತು ಮಾತಿಗೂ ಪೋಲೀಸರ ವಿಚಾರ ಎತ್ತುತ್ತಾರೆ. ಪೋಲೀಸರನ್ನು ವಿರೋಧ ಮಾಡುತ್ತಾರೆ ಎಂದು ಮಾನ್ಯ ಜಾಲಪ್ಪನವರಿಗೆ ಸ್ವಲ್ಪ ಮಟ್ಟಿಗೆ ಬೇಸರ ಬರಬಹುದು. ಸ್ವಾಮಿ, ನಾವು ಪೋಲೀಸರನ್ನು ವಿರೋಧ ಮಾಡುತ್ತಿಲ್ಲ. ಆದರೆ ಪೋಲೀಸ್ ವ್ಯವಸ್ಥೆಯನ್ನು ನಾವು ವಿರೋಧ ಮಾಡುತ್ತೇವೆ. ಪೋಲೀಸರ ಜೀವನ ಇವತ್ತು ಯಾವ ರೀತಿ ಇದೆ ಎಂಬುದನ್ನು ನಾವು ನೋಡಿದ್ದೇವೆ. ಅವರು ಕಷ್ಟದಿಂದ ಜೀವನವನ್ನು ನಡೆಸುತ್ತಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೊತ್ತು ಕೃಷಿ ಕಾರ್ಮಿಕರಿಗೆ ಸರ್ಕಾರದವರೇ ಗೊತ್ತುಮಾಡಿರುವ ಪ್ರಕಾರ ಒಂದು ದಿವಸಕ್ಕೆ ೧೦ ರೂಪಾಯಿಗಳ ಕೂಲಿ ಸಿಕ್ಕುತ್ತಿದೆ. ಅಂದರೆ ಹಳ್ಳಿಗಳಲ್ಲಿ ಒಂದು ದಿವಸಕ್ಕೆ ೧೦ ರೂಪಾಯಿಗಿಂತಲೂ ಹೆಚ್ಚಿನ ಕೂಲಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಅದೇ ಪೋಲೀಸರು ವೀಕ್ಲಿ ಹಾಫ್ ದಿನದಂದು ಕೆಲಸವನ್ನು ಮಾಡಿದರೆ ಅವನಿಗೆ ನೀವು

ಕೊಡತಕ್ಕದ್ದು ಕೇವಲ ೭ ರೂಪಾಯಿ ಮಾತ್ರ. ೨೪ ಗಂಟೆಗಳ ಕಾಲ ರೂರಲ್‌ನಲ್ಲಿ ಇರತಕ್ಕ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಕೆಲಸಮಾಡಿದರೆ ನೀವು ಕೊಡತಕ್ಕದ್ದು ಕೇವಲ ೭ ರೂಪಾಯಿ ಇದನ್ನು ತಾವು ಹೆಚ್ಚು ಮಾಡಬೇಕು ತಮ್ಮ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ೧೯೭೭ರಲ್ಲಿ ಧರ್ಮವೀರ ಕಮಿಷನ್‌ನ್ನು ಪೋಲೀಸ್ ಡಿಪಾರ್ಟ್‌ಮೆಂಟ್‌ನ ಇನ್‌ಫ್ರಾಸ್ಟ್ರಕ್ಚರ್‌ನ್ನು ಹೆಚ್ಚು ಮಾಡಬೇಕು, ಇದರ ಎಫಿಷಿಯೆನ್ಸಿಯನ್ನು ಹೆಚ್ಚಿಗೆ ಮಾಡಬೇಕೆಂದು ನೇಮಕ ಮಾಡಿದಿರಿ. ನನಗೆ ತಿಳಿದ ಮಟ್ಟಿಗೆ ಅವರ ಶಿಫಾರಸ್ಸು ಸರ್ಕಾರಕ್ಕೆ ಬಂದು ಬಹಳ ದಿವಸಗಳಾಗಿವೆ. ಆ ಶಿಫಾರಸ್ಸುಗಳನ್ನು ಯಾವರೀತಿ ಜಾರಿಗೆ ತರಬೇಕು, ಯಾವ ಯಾವ ಶಿಫಾರಸ್ಸುಗಳನ್ನು ಜಾರಿಗೆ ತರಬೇಕೆಂಬ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಒಂದು ಕಮಿಟಿಯನ್ನು ರಚನೆ ಮಾಡಿದ್ದಾರೆ. ಆ ಕಮಿಟಿಯಲ್ಲಿ ಕೆಲವು ರಿಟೈರ್ಡ್ ಡಿ.ಐ.ಜಿ.ಗಳನ್ನು ಹಾಕಿದ್ದಾರೆ ಅದರಲ್ಲಿ ಹೋಂ ಸೆಕ್ರೆಟರಿಯವರು ಇದ್ದಾರೆ. ಅವರು ಏನೇನು ರೆಕಮೆಂಡೇಷನ್‌ನ್ನು ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಒಂದುವೇಳೆ ಸರ್ಕಾರದವರೇ ಆ ರೆಕಮೆಂಡೇಷನ್‌ನ್ನು ಹೇಳಿದರೆ ಒಳ್ಳೆಯದು. ಪೋಲೀಸರಿಗೆ ಕೊಡತಕ್ಕ ವೇಜಸ್, ಪೇ ಸ್ಕೇಲ್ ಬಹಳ ಕಮ್ಮಿ ಇದೆ. ಇದನ್ನು ಹೆಚ್ಚು ಮಾಡಬೇಕು. ಹೌಸಿಂಗ್ ಫೆಸಿಲಿಟೀಸ್ ಕೊಡಬೇಕು. ಇನ್ನೊಂದು ವಿಚಾರವನ್ನು ಹೇಳುವುದಾದರೆ ದಿನೇ ದಿನೇ ನಮ್ಮ ರಾಜ್ಯದಲ್ಲಿ ಅಪರಾಧಗಳು ಹೆಚ್ಚುತ್ತಿವೆ, ಜನಸಂಖ್ಯೆ ಕೂಡ ದಿನೇ ದಿನೇ ಜಾಸ್ತಿಯಾಗುತ್ತಿದೆ. ಆದರೆ ಅದಕ್ಕನುಗುಣವಾಗಿ ಪೋಲೀಸ್ ಸ್ಟಾಫ್ ಮಾತ್ರ ಜಾಸ್ತಿ ಆಗಿಲ್ಲ. ಇದನ್ನು ಜಾಸ್ತಿ ಮಾಡಬೇಕು. ಮತ್ತು ಇದರ ಜೊತೆಗೆ ಪೋಲೀಸ್ ಸ್ಟೇಷನ್‌ನ ಜೂರಿಸ್‌ಡಿಕ್ಷನ್‌ನ್ನೂ ಕೂಡ ರೀ ಆರ್ಗನೈಸ್ ಮಾಡಬೇಕು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಸಂಡೂರು ತಾಲ್ಲೂಕಿನಲ್ಲಿ ಅಂದರೆ ಹೊಸಪೇಟೆ ತಾಲೂಕಿನಲ್ಲಿ ಕೆಲವು ಹಳ್ಳಿಗಳು ನನ್ನ ಕ್ಷೇತ್ರಕ್ಕೆ ಬರುತ್ತವೆ. ನನ್ನ ಕ್ಷೇತ್ರದಲ್ಲಿ ೨ ಪೋಲೀಸ್ ಸ್ಟೇಷನ್‌ಗಳಿವೆ ಅಲ್ಲಿ ಇಬ್ಬರು ಸಬ್ ಇನ್‌ಸ್ಪೆಕ್ಟರ್‌ಗಳು ಮತ್ತು ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಇದ್ದಾರೆ. ಆದರೆ ಒಂದು ವಿಚಿತ್ರ ಎಂದರೆ ನನ್ನ ತಾಲೂಕಿನ ಒಂದು ಭಾಗ ಪಕ್ಕದ ಕೂಡ್ಲಗಿ ತಾಲ್ಲೂಕಿನ ಯಾವುದೋ ಹಳ್ಳಿಯಲ್ಲಿರತಕ್ಕ ಪೋಲೀಸ್ ಸ್ಟೇಷನ್‌ಗೆ ಸೇರುತ್ತದೆ. ನನ್ನ ತಾಲ್ಲೂಕಿನ ೬೦ ಪರ್ಸೆಂಟ್ ಈ ೨ ಪೋಲೀಸ್ ಸ್ಟೇಷನ್‌ನ ವ್ಯಾಪ್ತಿಯಲ್ಲಿ ಬರುತ್ತದೆ. ಹೊಸಪೇಟೆಯ ಕೆಲವು ಹಳ್ಳಿಗಳು ಸಂಡೂರು ತಾಲ್ಲೂಕಿನ ಕೆಲವು ಹಳ್ಳಿಗಳು ಒಂದು ಪೋಲೀಸ್ ಸ್ಟೇಷನ್‌ಗೆ ಸೇರುತ್ತವೆ. ಸಂಡೂರಿನಲ್ಲಿರತಕ್ಕ ಸರ್ಕಲ್ ಇನ್‌ಸ್ಪೆಕ್ಟರ್‌ರವರಿಗೆ ಬೇರೆ ತಾಲ್ಲೂಕಿಗೆ ಸಂಬಂಧಪಟ್ಟಿರತಕ್ಕ ಮರಿಯಮ್ಮನಹಳ್ಳಿ ಎನ್ನತಕ್ಕ ಪೋಲೀಸ್ ಸ್ಟೇಷನ್‌ಗೆ ಅಟ್ಯಾಚ್ ಮಾಡಿದ್ದಾರೆ, ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬ ಸರ್ಕಲ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿ, ಪೋಲೀಸ್ ಸ್ಟೇಷನ್‌ನ ಜ್ಯೂರಿಸ್‌ಡಿಕ್ಷನ್‌ನ್ನು ರೀ ಆರ್ಗನೈಸ್ ಮಾಡುವುದರ ಜೊತೆಗೆ ಸ್ಟಾಫನ್ನೂ ಕೂಡ ಜಾಸ್ತಿ ಮಾಡಿ ಧರ್ಮವೀರ ಅವರ ಕಮಿಷನ್‌ನ ಶಿಫಾರಸುಗಳನ್ನು ಜಾರಿಗೆ ತರಬೇಕೆಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೬-೦೦ ಪಿ. ಎಂ.

† ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ಅರ್ಥ ಸಚಿವರಾದಂಥ ಮುಖ್ಯಮಂತ್ರಿಗಳು ಈ ವರ್ಷ ಮಂಡಿಸಿರುವಂಥ ಮುಂಗಡ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ಇಗ ತಮ್ಮಲ್ಲಿರುವ ಲಿಸ್ಟ್ ಪ್ರಕಾರ ಇನ್ನು ಎಷ್ಟು ಜನರು ಮಾತನಾಡುವವರಿದ್ದಾರೆ. ಇವತ್ತೇ ನಾವು ಮಾತನಾಡಲು ಅವಕಾಶ ಇದೆಯೋ ಅಥವಾ ನಾಳೆ ಅವಕಾಶ ಸಿಗುತ್ತದೆಯೋ ?

ಉಪಾಧ್ಯಕ್ಷರು.—ಇವತ್ತು ಆರೂವರೆ ಗಂಟೆಯವರೆಗೆ ಈ ಸದನವನ್ನು ನಡೆಸಬೇಕೆಂದು ಇದೆ. ನಾಳೆ ಉಳಿದವರಿಗೆ ಅವಕಾಶ ಮಾಡಿಕೊಡಲಾಗುತ್ತದೆ. ನಿಮ್ಮ ಮುಖಂಡರೇ ಈ ಪಟ್ಟಿಯನ್ನು ಕೊಟ್ಟಿರುತ್ತಾರೆ.

ಶ್ರೀ ಆರ್. ಎನ್. ನಾಯಕ್.—ನಾವು ಮುಖಂಡರಲ್ಲವೇ ?

ಉಪಾಧ್ಯಕ್ಷರು.—ಇಲ್ಲಿ ನಾನು ಒಪ್ಪಿಕೊಂಡರೆ ಮುಗಿಯುವುದಿಲ್ಲ. ಜನರು ಒಪ್ಪಿಕೊಳ್ಳಬೇಕು. ದಯವಿಟ್ಟು ತಾವು ಇದನ್ನು ತಿಳಿದುಕೊಳ್ಳುತ್ತೀರೆಂದು ಭಾವಿಸುತ್ತೇನೆ. ನೀವು ೧೬ನೆಯ ಸ್ಥಾನದಲ್ಲಿರುತ್ತೀರಿ. ನಾಳೆಯ ದಿವಸ ಸಾಧ್ಯವಾದರೆ ಮಾತನಾಡಲು ತಮಗೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಉಪಾಧ್ಯಕ್ಷರೇ ನನ್ನ ತಿಳುವಳಿಕೆಯ ಪ್ರಕಾರ ವೇಳಾಪಟ್ಟಿಯ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ನಾಳೆಯ ದಿವಸ ರಿಪ್ಲೆಯನ್ನು ಕೊಡಬೇಕಾಗಿದೆ. ೧೧ ಗಂಟೆಗೆ ರಿಪ್ಲೆ ಪ್ರಾರಂಭವಾಗುತ್ತದೆ ಕನಿಷ್ಟಪಕ್ಷ ೧೦ ನಿಮಿಷಗಳಕಾಲ ಅವಕಾಶವನ್ನು ನನಗೂ ಕೊಟ್ಟಲ್ಲಿ ನಮ್ಮ ಜಿಲ್ಲೆಗೆ, ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಮಾತನಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ನಾನು ಹೇಳುವುದೇನೆಂದರೆ ತಮ್ಮ ಚೇಂಬರ್‌ನಲ್ಲಿ ನಮ್ಮನ್ನು ಕರೆಯಿಸಿದಾಗ ಹೇಳಿದರು, ಆ ಕಡೆಯವರು ಯಾರು ಮಾತನಾಡುವುದಿಲ್ಲ ನೀವೇ ಮಾತನಾಡಬಹುದು. ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದರು. ಈ ಕಡೆಯವರು ಬಹಳಮಂದಿ ಮಾತನಾಡುವವರಿದ್ದಾರೆ. ಆದ್ದರಿಂದ ನ್ಯಾಚುರಲಿ ನಾಳೆ ಕೂಡ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣವನ್ನು ಒಂದು ಗಂಟೆಯ ಮೇಲೆ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು.—ಈಗ ಮಾತನಾಡುವವರ ಪಟ್ಟಿಯ ಸಂಖ್ಯೆಯಲ್ಲಿ ಮಾನ್ಯ ಆರ್. ಎ. ನಾಯಕ್‌ರವರದು ಸಂಖ್ಯೆ ೧೬ ಇರುತ್ತದೆ. ಈಗ ಒಟ್ಟು ೪೦ ನಿಮಿಷ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ, ಉಳಿದ ಎಲ್ಲಾ ಸದಸ್ಯರಿಗೂ ಐದೈದು ನಿಮಿಷ ಮಾತನಾಡಲು ಅವಕಾಶವನ್ನು ಮಾಡಿಕೊಡಲಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಕೊಟ್ಟಿರುವವರ ಹೆಸರನ್ನೆಲ್ಲ ಕರೆಯುತ್ತೀರಾ ದಯವಿಟ್ಟು ತಿಳಿಸಿ ?

ಉಪಾಧ್ಯಕ್ಷರು.—ನಾಳೆ ಅವಕಾಶ ಮಾಡಿಕೊಡೋಣ.

ಶ್ರೀ ಆರ್. ಎನ್. ನಾಯಕ್.—ವೇಳಾಪಟ್ಟಿಯಲ್ಲಿ ಅವಕಾಶವನ್ನು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇವೆ.

ಉಪಾಧ್ಯಕ್ಷರು.—ತಮ್ಮ ವಿಫ್ ಕೊಟ್ಟಿರುವ ಪಟ್ಟಿಯನ್ನು ಓದಿರುತ್ತೇನೆ. ನಾಳೆ ಮುಖ್ಯಮಂತ್ರಿಗಳು ತಮ್ಮ ಭಾಷಣವನ್ನು ಆರಂಭ ಮಾಡುವುದರೊಳಗೆ ಎಷ್ಟು ಮಂದಿಗೆ ಸಾಧ್ಯವೋ ಅಷ್ಟು ಮಂದಿಗೆ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ಈಗ ಮಾನ್ಯ ಬಾಬು ರೆಡ್ಡಿ ತುಂಗಳ್ ಅವರನ್ನು ಕರೆದಿದ್ದೇನೆ ಅವರು ತಮ್ಮ ಭಾಷಣವನ್ನು ಮುಂದುವರಿಸಲಿ.

ಶ್ರೀ ಆರ್. ಎನ್. ನಾಯಕ್.—ತಾವು ನಿಖರವಾಗಿ ಹೇಳಬೇಕು.

ಉಪಾಧ್ಯಕ್ಷರು.—ನಿಖರವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಅವಕಾಶ ಕೊಡುತ್ತೇವೆ ಇಲ್ಲ, ಆಗುವುದಿಲ್ಲವೆಂದು ಅದನ್ನಾದರೂ ಹೇಳಿ. ಆಗುವುದಿಲ್ಲವೆಂದು ಹೇಳಿದರೂ ಚಿಂತೆ ಇಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ತಾವು ನನ್ನನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಮಂತ್ರಿಗಳ ಪಕ್ಕದಲ್ಲಿ ಕುಳಿತುಕೊಂಡು ಕೆಲಸ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ. ನಮ್ಮ ಜಿಲ್ಲೆ ನಮ್ಮ ತಾಲ್ಲೂಕು ಬಗ್ಗೆ ನಾನು ಏನಾದರೂ ಮಾತನಾಡಬೇಕು.

ಉಪಾಧ್ಯಕ್ಷರು.—ನಾಳೆ ಅವಕಾಶವನ್ನು ಮಾಡಿಕೊಡುತ್ತೇನೆ ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ೩ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡೋಣವೆಂದು ಹೇಳಿದ್ದೀರಿ. ಆ ೩ ಗಂಟೆಯಲ್ಲಿ ೪ ಜನರು ಮಾತನಾಡುತ್ತಾರೆ.

ಉಪಾಧ್ಯಕ್ಷರು.—ಬೆಳಿಗ್ಗೆ ೯ಕ್ಕೆ ಪ್ರಾರಂಭಿಸಿ ೧೧ರ ವರೆಗೆ ಎರಡು ಗಂಟೆ ಕಾಲ ಚರ್ಚಿಸಬಹುದು ಮಾನ್ಯ ಮುಖ್ಯ ಮಂತ್ರಿಗಳು ೧೧ ಗಂಟೆಗೆ ಉತ್ತರ ನೀಡಲಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ತಾವು ಒಂದು ನಿರ್ಧಾರಕ್ಕೆ ಬನ್ನಿ. ನನಗೆ ಎಷ್ಟು ಅವಕಾಶ ಕೊಡುತ್ತೀರೆಂಬುದನ್ನು ಮೊದಲು ನಿರ್ಧಾರ ಮಾಡಿ ಹೇಳಿ.

ಶ್ರೀ ಬಾಬುರೆಡ್ಡಿ ಪಿ. ತುಂಗಳ್.—ನಾನು ಇಷ್ಟರಲ್ಲಿ ಮಾತನಾಡಿ ಮುಗಿಸುತ್ತಿದ್ದೆ.

ಶ್ರೀ ಆರ್. ಎನ್. ನಾಯಕ್.—ತಾವು ೪೧½ ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರೆಂದರೆ ಆಗುವುದಿಲ್ಲ. ಹೆಚ್ಚು ಜನರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ಮಾತನಾಡುವ ಸದಸ್ಯರು ಗಂಟೆಗಟ್ಟಲೆ ಮಾತನಾಡಿದರೆ ಹೇಗೆ ಆಗುತ್ತದೆ ?

ಶ್ರೀ ಆರ್. ಎನ್. ನಾಯಕ್.—ನಾನು ಸದಸ್ಯನಾಗಿದ್ದೇನೆಯೇ ಹೊರತು ತಮ್ಮ ಹಾಗೆ ಇಲ್ಲ.

ಉಪಾಧ್ಯಕ್ಷರು,—ದಯೆಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಆಕಸ್ಮತ್ತಾಗಿ ಭಾಗವಹಿಸುವ ಅವಕಾಶ ಸಿಗದಿದ್ದರೆ ಬೇಡಿಕೆಗಳ ಮೇಲೆ ಚರ್ಚೆ ಆಗುವಾಗ ಮಾತನಾಡಬಹುದು. ಆಗ ಒಂದು ತಿಂಗಳು ಚರ್ಚೆ ಆಗುತ್ತದೆ. ಆ ಸಂದರ್ಭದಲ್ಲಿ ಜಿಲ್ಲಾ ಪರಿಷತ್ತುಗಳ ಸಮಸ್ಯೆಗಳನ್ನು ಪ್ರಸ್ತಾಪಿಸಬಹುದು, ಬೇರೆ ವಿಚಾರಗಳ ಅಗತ್ಯವಿದ್ದರೆ ಅದನ್ನೂ ಪ್ರಸ್ತಾಪಿಸಬಹುದು. ಮಹಿಳೆಯರು ಒಬ್ಬರಿಗೂ ಅವಕಾಶ ಕೊಟ್ಟಿಲ್ಲವೆಂದು ಹೇಳಿದ್ದುದು ಕೇಳಿ ದುಃಖವಾಯಿತು. ಶ್ರೀಮತಿ ನಾಗರತ್ನಮ್ಮನವರು ಮಾತನಾಡಲಿಲ್ಲವೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಅವರು ಮಹಿಳೆಯಾಗಿ ಮಾತನಾಡಲಿಲ್ಲ. ವಿರೋಧ ಪಕ್ಷದ ನಾಯಕರಾಗಿ ಮಾತನಾಡಿದರು. ಮಹಿಳೆಯರಿಗೆ ಪ್ರತ್ಯೇಕ ಕೋಟಾ ಕೊಡಲಿಲ್ಲ,

ಉಪಾಧ್ಯಕ್ಷರು.—೧೧ ಜನ ಸದಸ್ಯರು ೪೧½ ನಿಮಿಷ ಮಾತನಾಡಿದ್ದಾರೆ. ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸುವವರೆಗೆ ಅವಕಾಶ ಇದೆ. ಆ ಎರಡು ಗಂಟೆ ಸಮಯದಲ್ಲಿ ತಾವು ಮಾತನಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಂಜಾನೆ ಸಭೆ ಸೇರುವುದು ಇತ್ತು. ಕೋರಂ ಇರಲಿಲ್ಲವೆಂದು ೩ ತಾಸು ಮುಂದೆ ಹೋಯಿತು. ಆಗ ೪-೫ ಜನ ಮಾತನಾಡಬಹುದಾಗಿತ್ತು. ಅದಕ್ಕೋಸ್ಕರ ಈಗ ಅಡ್ಜಸ್ಟ್ ಮಾಡಬೇಕಾಗಿದೆ. ಸ್ಟ್ರಿಕ್ಟ್ ಆಗಿ ಹೇಳಿದರೆ ಆಗುವುದಿಲ್ಲ, ಈಗ ೪-೫ ಜನ ಮಾತನಾಡುವವರು ಇದ್ದಾರೆ. ಅದಕ್ಕೋಸ್ಕರ ಅಡ್ಜಸ್ಟ್ ಮಾಡಿಕೊಳ್ಳಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಆಯಿತು.

ಶ್ರೀ ಆರ್. ಎನ್. ನಾಯಕ್.—ನಾನು ಒಂದು ಸೂಚನೆ ಕೊಡಬಯಸುತ್ತೇನೆ. ನೀವು ಹೆಚ್ಚು ವೇಳೆ ಕೊಟ್ಟರೆ ಆಗಲಿಲ್ಲ. ಹೆಚ್ಚು ಜನರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುವುದು ಮುಖ್ಯ. ಅದು ನಿಮ್ಮ ಕೈಯಲ್ಲಿದೆ. ನಾನು ಇಡೀ ದಿವಸ ಮಾತನಾಡಬೇಕೆಂದರೆ ಅಷ್ಟು ಸಮಯವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ನನಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು.—ತಮ್ಮ ಸಲಹೆಯನ್ನು ಗಮನಿಸಲಾಗುವುದು. ಈಗಾಗಲೇ ೧೫ ನಿಮಿಷ ಹೋಯಿತು. ಇಷ್ಟು ಹೊತ್ತಿಗೆ ಅವರು ಮುಗಿಸುತ್ತಿದ್ದರು. ನೀವು ಮುಂದುವರಿಸಿ ತುಂಗಳ್‌ರವರೆ.

ಶ್ರೀ ಬಾಬುರೆಡ್ಡಿ ಪಿ. ತುಂಗಳ್.—ನಾನಿನ್ನೂ ಶುರು ಮಾಡಿಲ್ಲ, ಎಲ್ಲಿ ಮುಂದುವರಿಸುವುದು ? ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳೂ ಆಗಿರುವ ಮಾನ್ಯ ಮುಖ್ಯ ಮಂತ್ರಿಗಳು ಈ ವರ್ಷ ಸದನದ ಎದುರಿಗೆ ಮಂಡಿಸಿರುವ ಬಜೆಟ್ ಕೇಂದ್ರ ಸರ್ಕಾರಕ್ಕೆ ನೇರವಾಗಿ ಸ್ಪಷ್ಟವಾಗಿ ಹೇಳಿದ ಒಂದು ಧೀಮಂತಿಕೆಯ ನಿದರ್ಶನ. ಕೇಂದ್ರ ಸರ್ಕಾರದ ಆರ್ಥಿಕ ವೈಫಲ್ಯತೆಯನ್ನು ಜನರ ಮುಂದೆ ಪುಸ್ತಕದಂತೆ ಇಟ್ಟದ್ದಕ್ಕಾಗಿ ನಾನು ವೈಯಕ್ತಿಕವಾಗಿ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ ಜನಸಾಮಾನ್ಯರ ಕಲ್ಪನೆ ಏನು ಇರುತ್ತದೆಂದರೆ ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು. ಹೀಗಿರುವಾಗ ಕೇಂದ್ರ ಸರ್ಕಾರದಲ್ಲಿ ಆರ್ಥಿಕವಾಗಿ ಸಂಪನ್ಮೂಲ ಏರುಪೇರಾಗುತ್ತದೆಂಬುದು ಸಾಮಾನ್ಯ ಜನರಿಗೆ ಗೊತ್ತಿರುವುದಿಲ್ಲ, ಕರ್ನಾಟಕದ ಮುಖ್ಯ ಮಂತ್ರಿಗಳೂ ಆರ್ಥಿಕ ಮಂತ್ರಿಗಳೂ ಆದ ಶ್ರೀಮಾನ್ ಹೆಗಡೆಯವರು ಕೇಂದ್ರ ಸರ್ಕಾರದ ಆರ್ಥಿಕ ವೈಫಲ್ಯತೆಯನ್ನು ಈ ಸದನದ ಮೂಲಕ ಜನರ ಮುಂದಿಟ್ಟಿರುವುದಕ್ಕೆ ಅಭಿನಂದಿಸುತ್ತೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಇವತ್ತಿನ ದಿವಸ ನಾವು ಅನೇಕ ಜನಕಲ್ಯಾಣ ಕಾರ್ಯಕ್ರಮಗಳನ್ನು ನಿರೀಕ್ಷೆ ಮಾಡಿದ್ದೇವೆ. ರಾಜ್ಯ ಸರ್ಕಾರಕ್ಕೆ ಸಧ್ಯಕ್ಕೆ ಇರುವ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸಗಳು ಆಗಿಲ್ಲ

ಅವು ಮುಂದಾದರೂ ಆಗಬೇಕೆಂದು ತಮ್ಮ ಮುಖಾಂತರ ಮಂತ್ರಿಗಳಿಗೆ ಹೇಳಬಯಸುತ್ತೇನೆ. ಬಡ್ಜೆಟ್ಟಿನಲ್ಲಿ ಅನೇಕ ವಿಷಯಗಳು ಪ್ರಸ್ತಾಪವಾಗಿವೆ.

ಈ ಬಜೆಟ್‌ನಲ್ಲಿ ಅನೇಕ ವಿಷಯಗಳು ಪ್ರಸ್ತಾಪವಾಗಿವೆ. ಅನೇಕ ವರ್ಷಗಳಿಂದ ಒಂದು ವಿಚಾರದ ಬಗ್ಗೆ ನಾವು ಹೋರಾಟ ಮಾಡುತ್ತಿದ್ದೆವು. ಆಹಾರಧಾನ್ಯ ಹಂಚಿಕೆ ವಿಷಯದಲ್ಲಿ ಹಳ್ಳಿಗಾಡಿಗೆ ಆಹಾರಧಾನ್ಯ ಸಿಗುವಂಥ ಹಸಿರು ಕಾರ್ಡನ್ನು ಕೊಡಲಾಗಿತ್ತು, ಬಹುಸಂಖ್ಯಾತ ಜನರಿರುವ ಪಟ್ಟಣ ಪ್ರದೇಶಗಳಿಗೂ ಇದನ್ನು ವಿಸ್ತಾರ ಮಾಡಬೇಕೆಂದು ಹೇಳಿದ್ದೆವು. ಈ ವರ್ಷದ ಬಡ್ಜೆಟ್ಟಿನಲ್ಲಿ ಬಹಳ ದಿಟ್ಟ ಕ್ರಮ ಕೈಗೊಂಡು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಹಸಿರು ಕಾರ್ಡ್‌ಗಳನ್ನು ಕೊಡುವುದು ಗ್ರಾಮಾಂತರ ಪ್ರದೇಶಗಳಲ್ಲಿ ಏನು ಮೀಸಲಾಗಿತ್ತೋ ಆ ಸೌಕರ್ಯವನ್ನು ಪಟ್ಟಣ ಪ್ರದೇಶಗಳಿಗೂ ವಿಸ್ತರಣೆ ಮಾಡುತ್ತೇವೆಂದು ಹೇಳಿ ನಗರವಾಸಿಗಳ ಹೃದಯವನ್ನು ಮಾನ್ಯ ಮುಖ್ಯಮಂತ್ರಿಗಳು ಗೆದ್ದಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ವರ್ಗದ ಹಾಸ್ಟೆಲ್‌ಗಳನ್ನು ತೆರೆಯುತ್ತೇವೆಂದು ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ. ಇದು ಕೇವಲ ಕಾಗದದಲ್ಲಿ ಮಾತ್ರ ಆಗಬಾರದು. ಬಡವರ ಮಕ್ಕಳು ಈ ಕಾರಣದಿಂದಾಗಿ ವಿದ್ಯೆಯಿಂದ ವಂಚಿತರಾಗಿದ್ದಾರೆ. ಶತಶತಮಾನಗಳಿಂದ ಹಿಂದುಳಿದ ವರ್ಗದವರು ವಿದ್ಯಾ ಸೌಕರ್ಯದಿಂದ ವಂಚಿತರಾಗಿದ್ದಾರೆ. ಅವರ ವಿದ್ಯಾರ್ಜನೆಗೆ ಹೆಚ್ಚಿನ ಬಲ ಕೊಡುವ ದೃಷ್ಟಿಯಿಂದ ಈ ವರ್ಷ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಇದರಲ್ಲಿ ಹೆಜ್ಜೆ ಹಿಂದೆ ಇಡಲಾರದೆ ನಿಗದಿಯನ್ನು ಮೀರಿ ಸಾಧನೆ ಮಾಡಿ ಅವರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಬೇಕೆಂದು ಹೇಳುತ್ತೇನೆ. ಎಲ್ಲರಿಗೂ ಸಂದೇಹವಿದ್ದು ತಾಳಿ ಭಾಗ್ಯ ಯೋಜನೆಯನ್ನು ರದ್ದು ಮಾಡಿ ಇದಕ್ಕಿಂತ ಜಾಸ್ತಿ ಉಪಯೋಗವಾಗುವ ರೀತಿಯಲ್ಲಿ ಇನ್ನೊಂದು ಯಾವುದಾದರೂ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತರುತ್ತದೆ ಎಂಬ ಮಾತನ್ನು ಇಲ್ಲಿ ಹೇಳಿದ್ದಾರೆ. ಇದನ್ನು ಆದಷ್ಟು ಬೇಗ ಮಾಡಬೇಕು. ನಮಗೆ ಸಿಗುವಂಥ ತಾಳಿಭಾಗ್ಯವನ್ನು ಕಸೆದುಕೊಂಡರು ಎಂದು ಜನರಲ್ಲಿ ಅಸಮಾಧಾನದ ಅಲೆ ಏಳಬಾರದು. ಆದಷ್ಟು ಬೇಗ ಬದಲಿ ಕಾರ್ಯಕ್ರಮವನ್ನು ಹಾಕಿ ನಿರ್ದಿಷ್ಟವಾದ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇನ್ನೊಂದು ಕಾರ್ಯ ಆಗಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದವರಿಗೆ ಎಲ್ಲಾ ರೀತಿಯಲ್ಲಿ ಉಚಿತ ವೈದ್ಯಕೀಯ ಸೌಕರ್ಯ ಸಿಗುವಂತೆ ಹಸಿರು ಕಾರ್ಡು ಕೊಡುವ ಕ್ರಮ ಕೈಗೊಳ್ಳಲಾಗಿದೆ. ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಜಿಲ್ಲಾ ಪರಿಷತ್ತಿಗೆ ಬಹಳಷ್ಟು ಅಧಿಕಾರವನ್ನು ಕೊಟ್ಟಿದ್ದು ಅಲ್ಲಿ ಏನೊಂದೂ ಕೆಲಸಕಾರ್ಯಗಳು ಆಗುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಜಿಲ್ಲಾ ಪರಿಷತ್ತಿನ ಬಗ್ಗೆ ನಮ್ಮ ಗುರಿ, ಕಲ್ಪನೆ ಬೇರೆ ಇತ್ತು. ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ ಶಾಸಕರು ಕೂಡ ಜಿಲ್ಲಾ ಪರಿಷತ್ತಿನ ಸದಸ್ಯರಾಗಿ ಕಾರ್ಯ ವೈಖರಿಯನ್ನು ನೋಡಿದಾಗ ಜಿಲ್ಲಾ ಪರಿಷತ್ತಿಗೆ ಅಪರಿಮಿತ ಅಧಿಕಾರವನ್ನು ಕೊಟ್ಟಿದ್ದೇವೇನೋ ಎಂದು ಅನ್ನಿಸುತ್ತಿದೆ. ಹಳ್ಳಿಗಳಿಗೆ ನೀರು ಪೂರೈಸುವ ಅಧಿಕಾರವನ್ನು ಮತ್ತು ಶೈಕ್ಷಣಿಕ ರಂಗದ ವಿಚಾರವನ್ನು ಜಿಲ್ಲಾ ಪರಿಷತ್ತಿಗೆ ಏನು ಒಪ್ಪಿದ್ದೇವೆ ಅದನ್ನು ತೆಗೆದು ಹಿಂದೆ ಯಾವರೀತಿ ಇಲಾಖೆಗೆ ವಹಿಸಿದ್ದೆವೋ ಅದೇ ರೀತಿ ಕೊಟ್ಟರೆ ಕಲ್ಯಾಣವಾಗುತ್ತದೆಂದು ಅನ್ನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ, ಅವರಿಗೆ ೫೦ ರೂಪಾಯಿ ಗೌರವಧನವನ್ನು ಹೆಚ್ಚು ಮಾಡುತ್ತೇವೆಂದು ಹೇಳಿದ್ದಾರೆ. ಪ್ರತಿವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ಗೌರವಧನ ಹೆಚ್ಚು ಮಾಡುತ್ತಿದ್ದಾರೆ, ಎಷ್ಟು ದಿನವಾದರೂ ೧೦೦ ರೂಪಾಯಿ, ೫೦ ರೂಪಾಯಿ ಅವರಿಗೆ ಭಿಕ್ಷೆ ಕೊಡುವುದು ಬೇಡ ಅವರಿಗೆ ಭವಿಷ್ಯ ಇಲ್ಲ. ವಯಸ್ಸು ಮೀರುತ್ತಾ ಬಂದಿದೆ. ಅವರಿಗೆ ೧೦೦ ರೂಪಾಯಿ, ೫೦ ರೂಪಾಯಿ ಕೊಡುವ ಬದಲು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು ಶಾಶ್ವತ ಪರಿಹಾರ ನೀಡಬೇಕು. ಕಳೆದ ವರ್ಷ ಈ ಸದನದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪ್ರಶ್ನೆ ಬಂದಾಗ ಈ ಕಡೆ ಮತ್ತು ಆ ಕಡೆ ಕುಳಿತಿರುವ ಮಾನ್ಯ ಸದಸ್ಯರು ಪಕ್ಷಬೇಧ ಮರೆತು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ಈ ಸಮಸ್ಯೆಯನ್ನು ಕೊನೆಗಾಣಿಸಬೇಕೆಂದು ಹೇಳಿದ್ದರು. ಕಳೆದ ಅಧಿವೇಶನದಲ್ಲಿ ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀ ಬೊಮ್ಮಾಯಿಯವರು ಒಂದು ವರ್ಷದೊಳಗೆ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಪುನರ್‌ನೆಲೆ ಒದಗಿಸುವ ಕಾರ್ಯ ಮಾಡುತ್ತೇನೆ ಎಂದು ಹೇಳಿದ್ದರು. ನಾವು ಕೊಡುವ ೫೦ ರೂಪಾಯಿಗಳಿಂದ ಅವರಿಗೆ ಸಮಾಧಾನ ಆಗುವುದಿಲ್ಲ. ಅವರ ವಯಸ್ಸು ಮೀರುತ್ತಿದೆ, ಆದ್ದರಿಂದ ಸ್ವಾತಂತ್ರ್ಯ ಹೋರಾಟಗಾರರಿಗೆ ಅವರ ಬದುಕಿಗೆ ಭದ್ರ ನೆಲೆಯನ್ನು ಒದಗಿಸಬೇಕೆಂದು ಮಾನ್ಯ ಮುಖ್ಯ

ಮಂತ್ರಿಗಳಿಗೆ ಹೇಳಬಯಸುತ್ತೇನೆ. ಸಮಯಾಭಾವದಿಂದ ಒಂದೇ ಮಾತು ಹೇಳುತ್ತೇನೆ. ರೈತರಿಗೆ ಅತ್ಯಂತ ಅವಶ್ಯಕವಾದ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್ ಭಾಷಣದಲ್ಲಿ ಕೆಲವು ವಿಷಯಗಳನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ. ಬಹಳ ನಿರ್ವಿಕಾರ ಮನಸ್ಸಿನಿಂದ ತೆರೆದ ಮನಸ್ಸಿನಿಂದ ಒಪ್ಪಿಕೊಂಡಿದ್ದಾರೆ. ಕಳೆದ ೪ ವರ್ಷಗಳಿಂದ ಅನೇಕ ರೀತಿಯ ಕಾರಣಗಳಿಂದಾಗಿ ಆರ್ಥಿಕ ಹಿಂಜರಿತಕ್ಕೆ ಕಾರಣವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಸರ್ವದರಲ್ಲೂ ಸ್ವಲ್ಪ ಸ್ವಲ್ಪ ವಿಫಲತೆಯನ್ನು ಕಾಣುವ ಪ್ರಸಂಗ ಬಂದಿದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಅದು ಒಪ್ಪತಕ್ಕಂಥದ್ದೆ. ನಾನು ಮೊದಲು ಹೇಳಿದ ಹಾಗೆ ಈ ಒಂದು ಬಡ್ಜೆಟ್ ಪುಸ್ತಕದಲ್ಲಿ ತೆರೆದು ಇಟ್ಟಿದ್ದಾರೆ. ಈ ಹಿನ್ನೆಲೆಗೆ ಕಾರಣವೇನೆಂದರೆ, ನಾವು ಕೃಷಿಗೆ, ನಮ್ಮ ಜಮೀನಿಗೆ ನೀರಾವರಿಯನ್ನು ಒದಗಿಸದೇ ಇರುವುದು ಕಾರಣವಾಗಿದೆ. ನೆರೆ ಮಹಾರಾಷ್ಟ್ರದಲ್ಲಿ ನಾವೆಲ್ಲಾ ನೋಡುತ್ತಿದ್ದೇವೆ. ತಮ್ಮಂತೆ ತಾವೂ ಕೂಡ ನೋಡಿರಬಹುದು. ಮಹಾರಾಷ್ಟ್ರ ಕಳೆದ ೩-೪ ದಶಕಗಳಲ್ಲಿ ಯಾವ ರೀತಿ ಚಿಕ್ಕ ಚಿಕ್ಕ ನೀರಾವರಿಗೆ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆಂಬುದನ್ನು ನೋಡಬಹುದು. ನೀರಾವರಿ ವಿಷಯದಲ್ಲಿ ಮಹಾರಾಷ್ಟ್ರಕ್ಕೂ ನಮಗೂ ಕೆಲವು ಬೇಧ ಭಾವ ಇರಬಹುದು. ಕೆಲವು ಭಿನ್ನಾಭಿಪ್ರಾಯ ಇರಬಹುದು ಆದರೆ ಸಣ್ಣ ನೀರಾವರಿ ವಿಷಯದಲ್ಲಿ ಅವರು ಸಾಧಿಸಿರುವ ಪ್ರಗತಿಯನ್ನು ಇಡೀ ದೇಶವೇ ಕಣ್ಣು ತೆರೆದು ನೋಡಬೇಕು. ಅದನ್ನು ಮೆಚ್ಚಿಕೊಳ್ಳಬೇಕು. ಮಹಾರಾಷ್ಟ್ರ ನಮ್ಮ ಕ್ಷೇತ್ರದಿಂದ ಕೇವಲ ೨೮ ಕಿಲೋಮೀಟರ್ ದಾಟಿದರೆ ಮಹಾರಾಷ್ಟ್ರ ಆರಂಭವಾಗುತ್ತದೆ. ಇದರಿಂದಾಗಿ ನಮಗೆ ಮರಾಠಿಯ ಸಂಪರ್ಕ ಬಹಳ. ನಾವು ವ್ಯಾಪಾರದ ಉದ್ದೇಶಕ್ಕಾಗಿ, ಹಾಗೂ ಟ್ರ್ಯಾಕ್ಟರ್‌ಗಳಿಗೆ ಬೇಕಾದ ಬಿಡಿ ಭಾಗಗಳನ್ನು ಕೊಂಡುಕೊಳ್ಳಬೇಕಾದರೆ ನಾವು ಹುಬ್ಬಳ್ಳಿಗೆ ಬರಬೇಕಾಗುತ್ತದೆ. ನಾವು ಹುಬ್ಬಳ್ಳಿಗೆ ಬರುವುದಕ್ಕೆ ಬದಲಾಗಿ ಸಾಂಗ್ಲಿ ಹಾಗೂ ಮೀರಜ್‌ಗೆ ಹೋಗುತ್ತೇವೆ. ಕೃಷಿ ಕ್ಷೇತ್ರದಲ್ಲಿ ಹಾಗೂ ನೀರಾವರಿ ವಿಷಯದಲ್ಲಿ ಅವರು ಯಾವ ರೀತಿಯ ಪ್ರಗತಿಯನ್ನು ಸಾಧಿಸಿದ್ದಾರೆ ಎಂಬುದನ್ನು ಯಾವುದೇ ಸಂಕುಚಿತ ಭಾವನೆಯನ್ನು ತಾಳಲಾರದೆ, ಅವರ ಈ ಸಾಧನೆಯನ್ನು ನಾವು ಅನುಕರಣೆ ಮಾಡಬೇಕು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಂದ ಎಷ್ಟರ ಮಟ್ಟಿನ ಫಲ ಸಿಕ್ಕುತ್ತದೆಂಬುದು ನಮಗೆ ಸಂದೇಹವಾಗುತ್ತದೆ. ನಮ್ಮ ಕ್ಷೇತ್ರದ ಭಾಗದಲ್ಲಿ ಆಗುತ್ತಿರುವಂತಹ ಯು.ಕೆ.ಪಿ. ಯೋಜನೆ ಹಾಗೂ ಆಲಮಟ್ಟಿ ಯೋಜನೆ ಯಾವಾಗ ಫಲ ಕೊಡುತ್ತದೆಂಬುದು ಗೊತ್ತಿಲ್ಲ. ಆದ್ದರಿಂದ ಪ್ರತಿ ವರ್ಷ ಕೃಷ್ಣಾ ನದಿಗೆ ನೀರನ್ನು ಬಿಡಬೇಕೆಂದು ಮಹಾರಾಷ್ಟ್ರ ಸರ್ಕಾರಕ್ಕೆ ೪ ಕೋಟಿ, ೨ ಕೋಟಿ ರೂಪಾಯಿಗಳನ್ನು ಹಣವನ್ನು ಕೊಡುತ್ತೇವೆ. ಆ ರೀತಿ ಹಣವನ್ನು ಕೊಡುವುದು ನಮಗೆ ತಪ್ಪುವುದಿಲ್ಲ. ಆದರೆ ಪ್ರತಿಫಲವಾಗಿ ನಮಗೆ ಬಿಡಬೇಕಾದ ನೀರು ಸಿಕ್ಕುತ್ತಿಲ್ಲ. ಮತ್ತು ಈ ವರ್ಷ ಮಹಾರಾಷ್ಟ್ರ ಸರ್ಕಾರ ನಿರ್ಧಿಷ್ಟ ಕ್ರಮವನ್ನು ಈಗಾಗಲೇ ಹೇಳಿಬಿಟ್ಟಿದೆ. ಮಹಾರಾಷ್ಟ್ರದ ರಾಜ್ಯದ ೩೦ ಜಿಲ್ಲೆಗಳ ಪೈಕಿ ೨೭ ಜಿಲ್ಲೆಗಳಲ್ಲಿ ಬರಗಾಲ ಇರುವುದರಿಂದ ಕೊಯ್ನಾ ನದಿಯಿಂದ ನೀರನ್ನು ಕೃಷ್ಣಾ ನದಿಗೆ ಬಿಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನೀರಾವರಿ ಸಚಿವರು ಈ ಸಭೆಯಲ್ಲಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ನೀರಾವರಿ ಸಚಿವರಿಬ್ಬರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿ ವರ್ಷವೂ ನೀರನ್ನು ತರುವ ಸಲುವಾಗಿ ಮಹಾರಾಷ್ಟ್ರ ಸರ್ಕಾರಕ್ಕೆ ೪ ಕೋಟಿ ೬ ಕೋಟಿ ಹಣವನ್ನು ಕೊಡುವುದಕ್ಕೆ ಬದಲಾಗಿ ಹಾಲಿ ನಮ್ಮಲ್ಲಿರುವ ನದಿಗಳಲ್ಲಿರುವ ಜಲ ಸಂಪನ್ಮೂಲವನ್ನು ತಡೆ ಹಾಕಿ. ೧೦-೧೫ ಮೈಲಿಗೊಂದರಂತೆ ಬ್ಯಾರೇಜನ್ನು ಕಟ್ಟುವ ಕೆಲಸ ಮಾಡಬೇಕು. ಬ್ಯಾರೇಜನ್ನು ಕಟ್ಟುವ ಕೆಲಸದಲ್ಲಿ ಸರ್ಕಾರ ಹಣವನ್ನು ತೊಡಗಿಸುವುದರ ಜೊತೆಗೆ ಜನಶಕ್ತಿ, ರೈತಶಕ್ತಿಯನ್ನು ಉಪಯೋಗ ಮಾಡುವ ಕೆಲಸವನ್ನು ಏಕೆ ಮಾಡಬಾರದೆಂದು ನಾನು ಸರ್ಕಾರವನ್ನು ಪ್ರಶ್ನೆ ಮಾಡುತ್ತೇನೆ. ನನ್ನ ಕ್ಷೇತ್ರದಲ್ಲಿಯೇ ಅಂತಹ ಒಂದು ಪ್ರಯತ್ನ ನಡೆದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ ಕಳೆದ ನವಂಬರ್ ತಿಂಗಳ ೧೧ರಂದು ಅಡಿಗಲ್ಲು ಹಾಕಿ ಬಂದಿದ್ದಾರೆ. ರೈತರೇ ಸುಮಾರು ೧ ಕೋಟಿ ರೂಪಾಯಿಗಳನ್ನು ಕೊಡಿಸಿ ಕೃಷ್ಣಾ ನದಿಗೆ ಬ್ಯಾರೇಜನ್ನು ಕಟ್ಟಿ, ಅದರಿಂದ ೨೫ ಸಾವಿರ ಎಕರೆಗೆ ನೀರಾವರಿಯನ್ನು ಒದಗಿಸುವಂತಹ ಯೋಜನೆಯನ್ನು ಸಿದ್ಧ ಮಾಡಿದ್ದಾರೆ. ನಾನೇ ಆ ಒಂದು ಗುಂಪಿನ ಅಧ್ಯಕ್ಷನಾಗಿ, ರೈತರ ಮನವನ್ನು ಒಲಿಸಿ ಈ ಕೆಲಸವನ್ನು ಮಾಡಿದ್ದೇನೆ. ಇಂತಹ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ರೈತರ ಬೆನ್ನು ತಟ್ಟಿದರೆ ರೈತರು ಯಾವ ಕೆಲಸವನ್ನು ಮಾಡುವುದಕ್ಕೂ ಹಿಂಜರಿಯುವುದಿಲ್ಲ. ಕಳೆದ ೩-೪ ದಶಕಗಳಲ್ಲಿ ನೀರಾವರಿಗೆ ಆದ್ಯತೆಯನ್ನು ಕೊಟ್ಟಿಲ್ಲದಿರುವ ಕಾರಣ ನಾವು ಆರ್ಥಿಕ ಸಾಧನೆಯಲ್ಲಿ ಹಿಂಜರಿತವನ್ನು ಕಂಡಿದ್ದೇವೆ. ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿ

ಉತ್ಪಾದನೆ ಮಾಡಿದರೂ, ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆ ಮಾಡಿದರೂ ಇನ್ನೊಂದು ಕ್ಷೇತ್ರದಲ್ಲಿ ಉತ್ಪಾದನೆ ಮಾಡಿದರೂ, ನೀರಾವರಿ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸದೆ ಇರುವುದರಿಂದ, ಆರ್ಥಿಕ ರಂಗದಲ್ಲಿ ಹಿನ್ನೆಲೆಯನ್ನು ಸಾಧಿಸಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಈ ಒಂದು ಹಿನ್ನೆಲೆಯಲ್ಲಿ ಕಳೆದ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಶ್ರೀಮಾನ್ ಎಸ್. ಎಸ್. ಕಡಪಟ್ಟಿಯವರು ಸೂಚಿಸಿದರು. ಅದನ್ನು ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದನೆ ಮಾಡಿದರು, ಅದರಲ್ಲಿ ಏನು ಸೂಚನೆ ಮಾಡಿದರು ಎಂದರೆ, ೧೯೮೭–೮೮ನೇ ಸಾಲಿಗೆ ಕೃಷ್ಣಾ ನದಿ ಯೋಜನೆಗೆ ೨೦೦ ಕೋಟಿ ರೂಪಾಯಿಗಳನ್ನು ಹಾಗೂ ಕಾವೇರಿ ಜಲಾನಯನದ ಯೋಜನೆಗೆ ೧೦೦ ಕೋಟಿ ರೂಪಾಯಿಗಳನ್ನು ಒಟ್ಟು ೩೦೦ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷದ ಆಯವ್ಯಯದಲ್ಲಿ ಒದಗಿಸಬೇಕೆಂದು ಒಮ್ಮತದ ನಿರ್ಣಯ ಮಾಡಿದರು ಅದರಲ್ಲಿ ಸರ್ಕಾರ ಈವರೆಗೂ ಖರ್ಚು ಮಾಡಿರುವುದು ೧೨೦ ಕೋಟಿ ರೂಪಾಯಿಗಳು. ಆದರೂ ಅಷ್ಟು ಹಣವನ್ನು ಆಯವ್ಯಯದಲ್ಲಿ ಒದಗಿಸಿಲ್ಲ. ಕೇವಲ ೧೨೦ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ ಎನ್ನುವ ಮಾತನ್ನು ಬಹಳ ವಿಷಾದದಿಂದ ಹೇಳುತ್ತೇನೆ ನೀರಾವರಿಗೆ ಆದ್ಯತೆಯನ್ನು ಕೊಡಬೇಕು, ನೀರಾವರಿಗೆ ಆದ್ಯತೆಯನ್ನು ಕೊಡದಿದ್ದರೆ, ಮುಂದೆ ಬರುವ ಪೀಳಿಗೆ ಎಂದೆಂದೂ ನಮ್ಮನ್ನು ಕ್ಷಮೆ ಮಾಡುವುದಿಲ್ಲ.

ಹೀಗೆ ಮಾಡಿದರೆ ಮುಂದೆ ಬರುವ ಪೀಳಿಗೆಗೆ ಅಪಚಾರ ಮಾಡಿದ ಹಾಗೆ, ಅಪಕೀರ್ತಿ ನಮ್ಮ ತಲೆಗೆ ಬರುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಹೇಳುತ್ತೇನೆ, ಅವರು ನಮಗೆ ಶಾಲೆ ಹಣ ಕೊಡುವುದು ಬೇಡ, ಬಸ್ ಕೊಡುವುದು ಬೇಡ, ಡಾಂಬರು ರಸ್ತೆ ಕೊಡುವುದು ಬೇಡ, ನಮಗೆ ದನಗಳ ದವಾಖಾನೆ ಬೇಡ, ನಮಗೆ ಪಿ.ಎಚ್.ಇ. ಇಲ್ಲದಿದ್ದರೂ ಪರ್ವಾಯಿಲ್ಲ. ನೀರಾವರಿ ವಿಚಾರದಲ್ಲಿ ಮಾತ್ರ ದಯವಿಟ್ಟು ಕಡಿತ ಮಾಡಬಾರದು. ಯಾವುದೇ ರೀತಿಯಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಹಣವನ್ನು ತಂದು ನೀರಾವರಿಯಲ್ಲಿ ಏನು ಗುರಿಯನ್ನು ಮುಟ್ಟಬೇಕೋ ಅದನ್ನು ವೇಗವಾಗಿ ತಲುಪಿದರೆ ರಾಜ್ಯ ಸುಭಿಕ್ಷವಾಗುತ್ತದೆ. ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ ೪೦ರಷ್ಟು ಹಣವನ್ನು ನೀರಾವರಿಗೆ ಉಪಯೋಗ ಮಾಡಿದರೆ ಕೆಲಸ ಬೇಗ ಆಗುತ್ತದೆ. ನಮ್ಮ ರಾಜ್ಯ ಸಂಪತ್‌ಭರಿತ ರಾಜ್ಯ ಎಂದು ರಾಷ್ಟ್ರಪತಿಗಳು, ರಾಜ್ಯಪಾಲರು ತಮ್ಮ ಮೆಚ್ಚುಗೆಗಳನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯ ಇನ್ನೂ ಹೆಚ್ಚಿನ ಸರ್ಟಿಫಿಕೇಟನ್ನು ಪಡೆಯಬೇಕಾದರೆ ಬಹಳ ದೊಡ್ಡ ಪ್ರಮಾಣದಲ್ಲಿ ನೀರಾವರಿಗೆ ಆದ್ಯತೆ ಕೊಡಬೇಕೆಂದು ಮತ್ತೊಮ್ಮೆ ಸರ್ಕಾರವನ್ನು ಒತ್ತಾಯಪಡಿಸಿ ಇಷ್ಟು ಗಡಿಬಿಡಿಯಲ್ಲಿ ಮಾತನಾಡುವುದಕ್ಕೆ ಸ್ವಲ್ಪ ಅವಕಾಶವನ್ನು ತಾವು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಕೆ. ಎಚ್. ಪಾಟೀಲರೇ, ತಮಗೆ ಅರ್ಧ ಗಂಟೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ತಾವು ಮಾತನಾಡಿ.

† ಶ್ರೀ ಕೆ. ಎಚ್, ಪಾಟೀಲ್ (ಗದಗ್). —ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಮೊಯಿಲಿಯವರು ಅಂಕಿಸಂಖ್ಯೆಗಳನ್ನು ಕೊಟ್ಟು ಬಡ್ಜೆಟ್ ಬಗ್ಗೆ ವಿವರಣೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ ಪ್ರತಿ ಮಾತಿಗೂ ನಾನು ಬೆಂಬಲವನ್ನು ಸೂಚಿಸುತ್ತಾ, ಅವರು ಹೇಳಿದ ವಿಷಯವನ್ನು ಬಿಟ್ಟು ಉಳಿದ ವಿಷಯಗಳಲ್ಲಿ ಕೆಲವನ್ನು ಮಾತ್ರ ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರೂಢಿಗನುಸಾರವಾಗಿ ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದಕ್ಕಾಗಿ ಈ ಬಡ್ಜೆಟ್‌ನ ಬಹು ಭಾಗದ ಸಮಯವನ್ನು ತೆಗೆದುಕೊಂಡಿದ್ದಾರೆ, ಅದು ಅವರ ವೈಯಕ್ತಿಕವಾದ ಅಭಿಪ್ರಾಯ. ಆದರಲ್ಲಿ ನಾನು ಲೋಪದೋಷವನ್ನು ಹೊರಿಸುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಟೀಕೆ ಮಾಡುವಾಗ ಆ ಟೀಕೆಯ ಹಿನ್ನೆಲೆಯಲ್ಲಿ ರಚನಾತ್ಮಕವಾದ ನಮ್ಮ ಕಾರ್ಯಗಳನ್ನು ತೋರಿಸಿಕೊಟ್ಟರೆ ಇದು ಹೆಚ್ಚು ಸಮರ್ಪಕವಾದ ಟೀಕೆ ಆಗುತ್ತಾ ಇತ್ತು ಎಂದು ನಾನು ಹೇಳುವುದಕ್ಕಿಷ್ಟಪಡುತ್ತೇನೆ. ಈ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬರುವಾಗ, ಜನತಾ ಪಕ್ಷ ಅಧಿಕಾರಕ್ಕೆ ಬರುವಾಗ ೧೯೮೩ರಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿದ್ದರು. ನಂತರ ೧೯೮೫ರಲ್ಲಿ ಒಂದು ಪ್ರಕಟಣೆ ಹೊರಡಿಸಿದರು. ಈ ಎರಡೂ ಪ್ರಕಟಣೆಗಳಲ್ಲಿ ಏನೇನು ಹೇಳಿದ್ದಾರೆ ಆ ಮಾತುಗಳನ್ನು ಗಮನಿಸಿದರೆ ನಮ್ಮ ಈ ಬಡ್ಜೆಟ್ ಭಾಷಣ ಬಹುದೂರ ಹೋಗಿದೆ, ಯಾವುದೂ ಗೊತ್ತಾಗುತ್ತಿಲ್ಲ. ಅವರು ಹೇಳಿದ್ದು ಹಾಗೂ ಮಾಡಿದ್ದನ್ನು ತುಲನಾತ್ಮಕವಾಗಿ ನೋಡಿದರೆ ಬಹಳ

ಅಂತರ ಕಾಣುತ್ತದೆ. ಇರಲಿ, ಅವರು ಹೇಳುವ ಒಂದು ಸರಣಿಯನ್ನು ಒಪ್ಪುವುದಾದರೆ, ಅಧಿಕಾರಕ್ಕೆ ಬಂದ ಮೇಲೆ ನಾಲ್ಕೈದು ವರ್ಷಗಳವರೆಗೆ ಬರಗಾಲ ಇತ್ತು. ನಾವು ಅನೇಕ ಸೌಕರ್ಯಗಳನ್ನು ಒದಗಿ ಬೇಕೆಂದಿದ್ದರೂ ಅವುಗಳನ್ನು ಒದಗಿಸುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ ಎಂದು ಹೇಳಿದ್ದಾರೆ. ಅದನ್ನು ನಾವು ಸ್ವಲ್ಪ ಮಟ್ಟಿಗೆ ಒಪ್ಪೋಣ. ಆದರೆ ಬರಗಾಲ ಇದ್ದಾಗಲೂ ಕೂಡಾ ಜನತೆಗೆ ಅವಶ್ಯಕವಾದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಹಮ್ಮಿದ ಕಾರ್ಯಕ್ರಮಗಳನ್ನು ಕೈಬಿಡುವ ರೀತಿಯಲ್ಲಿ ನೀವು ನಡೆದುಕೊಂಡು ಬಂದ ದಾರಿಯನ್ನು ನೋಡಿದರೆ ನನಗೆ ನಗು ಬರುತ್ತದೆ, ಈ ಸರ್ಕಾರ ಅಸ್ತಿತ್ವಕ್ಕೆ ಬರಬೇಕಾದರೆ ಇದು ರೈತರ ಬೆನ್ನೆಲುಬಾಗಿ ಅಧಿಕಾರಕ್ಕೆ ಬಂತು, ಇದನ್ನು ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ. ಜನತಾ ಸರ್ಕಾರ ಬರುವುದಕ್ಕಿಂತ ಪೂರ್ವ ಇದ್ದ ಕಾಂಗ್ರೆಸ್ ಸರ್ಕಾರ ರೈತರಿಗೆ ಕೊಟ್ಟ ಕೆಲವು ಮಾತುಗಳಲ್ಲಿ ತಪ್ಪಿ ನಡೆದುಕೊಂಡಿದೆ, ರೈತರಿಗೆ ಅನೇಕ ಆಶ್ವಾಸನೆಗಳನ್ನು ಕೊಟ್ಟು ಅವರನ್ನು ನಂಬಿಸಿ ಅದರ ದುರ್ಲಾಭ ಪಡೆದುಕೊಂಡಿದೆ ಎಂದು ಹೇಳಿ ನೀವು ಅಧಿಕಾರಕ್ಕೆ ಬಂದಿರಿ. ನಾನು ತಮ್ಮನ್ನು ಕೇಳುತ್ತಿದ್ದೇನೆ, ನಿಮ್ಮ ಬಡ್ಜೆಟ್ ಭಾಷಣದಲ್ಲಿ ಒಂದು ಅಕ್ಷರವನ್ನಾದರೂ ರೈತರ ಬಗ್ಗೆ ಮಾತನಾಡಿದ್ದೀರಾ ? ಇವತ್ತು ನೀವು ಕೇಂದ್ರ ಸರ್ಕಾರದ ಬಡ್ಜೆಟ್‌ನ್ನು ಟೀಕಿಸುವುದಕ್ಕೆ ಹೊರಟಿದ್ದೀರಿ. ಕೇಂದ್ರ ಸರ್ಕಾರದ ಬಡ್ಜೆಟ್‌ನಲ್ಲಿ ರೈತರ ಬಗ್ಗೆ ಎಷ್ಟೋ ಅನುಕೂಲಗಳನ್ನು ಮಾಡಿ ಕೊಟ್ಟಿದ್ದಾರೆ. ಕೇಂದ್ರದಲ್ಲಿ ಇಲ್ಲಿಯವರೆಗೆ ಪ್ರಧಾನಮಂತ್ರಿಗಳಾಗಿದ್ದ ಪಂಡಿತ ಜವಹರಲಾಲ್‌ರವರು, ಶ್ರೀಮತಿ ಇಂದಿರಾಗಾಂಧಿಯವರು ಇದ್ದಾಗ ರೈತರ ಬಗ್ಗೆ ಇಷ್ಟೊಂದು ಪ್ರಾಮುಖ್ಯತೆಯನ್ನು ಕೊಟ್ಟಿರಲಿಲ್ಲ. ಈ ಸಲದ ಬಡ್ಜೆಟ್ ವ್ಯವಸಾಯ ಹುಟ್ಟಿದಾಗಿನಿಂದ ಈ ತರಹ ಬಡ್ಜೆಟ್ ಬಂದಿರಲಿಲ್ಲವೇನೋ ಎಂದು ಎಲ್ಲರ ಅಭಿಪ್ರಾಯ. ಬಡ್ಜೆಟ್ ತಯಾರು ಮಾಡುವ ಪೂರ್ವಕಾಲದಲ್ಲಿ ಕೆಲವರನ್ನು ಕರೆಯಿಸಿದ್ದರು. ನನ್ನನ್ನು ಕರೆದಿದ್ದರು. ವ್ಯವಸಾಯಗಾರರಿಗೆ ಇಂತಹದ್ದೆಲ್ಲಾ ಆಗಬೇಕೆಂದು ಏನು ಸಲಹೆಗಳನ್ನು ಕೊಟ್ಟಿದ್ದೆವು ಅವುಗಳಲ್ಲಿ ಬಹುಭಾಗವನ್ನು ಅಕ್ಸೆಪ್ಟ್ ಮಾಡಿದ್ದಾರೆ. ವ್ಯವಸಾಯಗಾರರಿಗೆ ಪ್ರೋತ್ಸಾಹ ಕೊಡುವಂತಹ ಸ್ಕೀಮ್‌ಗಳಿವೆ. ವ್ಯವಸಾಯಗಾರರ ಬಗ್ಗೆ ಒಂದು ಅಕ್ಷರ ಸಹ ಈ ಬಡ್ಜೆಟ್ಟಿನಲ್ಲಿ ಇಲ್ಲದೇ ಇರುವುದು ಸಾಧುವಾದುದಲ್ಲ. ನೀವು ಮಾಡಿರುವಂತಹ ಅನೇಕ ಕೆಲಸಗಳಲ್ಲಿ ಎಲ್ಲಾ ಕೆಲಸಗಳಿಗೆ ಅಲ್ಲದಿದ್ದರೂ ಕೆಲವು ಕೆಲಸಗಳಲ್ಲಿ ಪ್ರೋತ್ಸಾಹಕ್ಕೆ ತಾವು ಅರ್ಹರಾಗುತ್ತೀರಿ. ಎಲ್ಲಿ ಟೀಕೆ ಮಾಡಬೇಕೋ ಅಲ್ಲಿ ಟೀಕೆ ಮಾಡಿದ್ದೇವೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಜಾಣ್ಮೆಯಲ್ಲಿ ನನಗಂತೂ ಬಹಳ ವಿಶ್ವಾಸ. ಅಂತಹ ಜಾಣರು ತಮ್ಮ ಜಾಣತನದಲ್ಲಿ ಒಮ್ಮೊಮ್ಮೆ ದಾರಿ ತಪ್ಪುತ್ತಿದ್ದಾರೆ. ರಾಜಕೀಯದಲ್ಲೂ ಸಹ ದಾರಿ ತಪ್ಪಿದೆ. ಆಡಳಿತದಲ್ಲಿ ರಚನಾತ್ಮಕ ಅಭಿವೃದ್ಧಿಯಾಗಿದ್ದರೆ ನಿಜವಾಗಿಯೂ ನಮ್ಮ ದೇಶಕ್ಕೆ ಅದೊಂದು ಸೌಕರ್ಯವಾಗುತ್ತಿತ್ತು ಎಂದು ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ, ಇವೊತ್ತಿನ ಬಡ್ಜೆಟ್‌ನಲ್ಲಿ ಅನೇಕ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ನಮಗೆ ತೊಂದರೆಯಾಗಿದೆ ಕೇಂದ್ರ ಕೊಡತಕ್ಕ ಪಾಲನ್ನು ಕೊಟ್ಟಿಲ್ಲ, ಅದಕ್ಕಾಗಿ ನಾವು ಟ್ಯಾಕ್ಸ್ ಹಾಕಿದ್ದೇವೆಂದು ಹೇಳಿದ್ದಾರೆ. ನೀವು ಇವತ್ತಿನ ದಿವಸ ಸಂಪನ್ಮೂಲಗಳನ್ನು ಹೆಚ್ಚಿಸಲಿಕ್ಕೆ ಯಾವ ಪ್ರಯತ್ನ ಮಾಡಿದ್ದೀರಿ. ಟ್ಯಾಕ್ಸ್ ಹಾಕುವುದೊಂದೇ ಸಂಪನ್ಮೂಲಗಳನ್ನು ಹೆಚ್ಚಿಸುವ ಮಾರ್ಗವಲ್ಲ, ಸಂಪನ್ಮೂಲಗಳನ್ನು ಹೆಚ್ಚಿಸಲಿಕ್ಕೆ ಹೇಗೆ ಮಾಡಬೇಕೆಂಬುದರ ಬಗ್ಗೆ ವಿಚಾರ ಮಾಡಬೇಕು. ಈಗ ತಾನೇ ಮಾತನಾಡಿದ ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಅಬಕಾರಿ ಇಲಾಖೆಯಲ್ಲಿ ಎಷ್ಟು ಕಡೆಗಳಲ್ಲಿ ಉದ್ರಿ ಕೊಟ್ಟಿದ್ದೀರಿ, ಅವರಿಂದ ಯಾವ ರೀತಿಯ ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದೀರಿ ? ಇದು ಅಲ್ಲದೆ ಅನೇಕ ಸಾಲಗಳನ್ನು ವಸೂಲಿ ಮಾಡುವ ರೀತಿಯ ಬಗ್ಗೆ ಹೇಳಿ ಸಾಲಗಳನ್ನು ಸರಿಯಾದ ರೀತಿಯಲ್ಲಿ ವಸೂಲಿ ಮಾಡುವುದಕ್ಕೆ ನಿಗಾವನ್ನು ಸರ್ಕಾರ ವಹಿಸಿಲ್ಲ. ಹಣವನ್ನು ಜನರ ಮೇಲೆ ಉಳಿದವರ ಮೇಲೆ ಬಿಟ್ಟು ಸಂಸ್ಥೆಗಳ ಮೇಲೆ ಬಿಟ್ಟು ಇವತ್ತು ಸರ್ಕಾರ ತೀರಾ ಬಡವಾಗಿದೆ. ಇದಕ್ಕೆ ಎರಡು ಕಾರಣಗಳಿವೆ. ನಮ್ಮ ಒಂದು ಗಾಧೆ ಮಾತು ಇದೆ. ಇದನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ಒಪ್ಪುತ್ತಾರೆಂದು ತಿಳಿದಿದ್ದೇನೆ. 'ಕಾಲ್ಗುಣ' ಎಂದು ಹೇಳುತ್ತಾರೆ. ಫೈನಾನ್ಸ್‌ನಲ್ಲಿ ಅದೇ ಆಗಿದೆ. ಇವತ್ತು ಮುಖ್ಯ ಕಾರ್ಯದರ್ಶಿಗಳಾಗಿರುವ ದಾತಾರ್‌ರವರು ಏನಿದ್ದಾರೆ ಅವರ ಕಾಲ್ಗುಣ ಚೆನ್ನಾಗಿದೆ, ಅವರನ್ನು ಮಂಡ್ಯಕ್ಕೆ ಕಳುಹಿಸಿದಿರಿ ಅಲ್ಲಿ ಚಲೋ ಆಯಿತು. ಆಮೇಲೆ ಮಂಗಳೂರಿಗೆ ಕಳುಹಿಸಿದಿರಿ ಅಲ್ಲಿ ಚಲೋ ಆಯಿತು. ಅವರ ಕಾಲ್ಗುಣ ಚೆನ್ನಾಗಿದೆ. ಇಲ್ಲಿ ಅಡ್ಮಿನಿಸ್ಟ್ರೇಷನ್ ನಾವು ಏನೇ ಟೀಕೆ ಮಾಡಿದರು ಅದು ಚಲೋ ಆಗುತ್ತದೆ. ನೀವು ಏನೇ ಸಂಪನ್ಮೂಲಗಳನ್ನು ಕೂಡಿ ಹಾಕಿದರೂ ಅದರ ಬಹುಭಾಗವನ್ನು ಸರ್ಕಾರಿ ನೌಕರರಿಗೆ ಕೊಡುತ್ತೀರಿ. ಎಷ್ಟು ಪರ್ಸೆಂಟ್ ಹಣವನ್ನು ಸರ್ಕಾರಿ ನೌಕರರಿಗೆ ಕೊಡಲಾಗುತ್ತಿದೆ ಎನ್ನುವುದು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಗೊತ್ತಿದೆ. ಇದರ ಬಗ್ಗೆ ಮಾನ್ಯ ಅಧ್ಯಕ್ಷರು ವಿವರವಾಗಿ ಅಭ್ಯಾಸ ಮಾಡಿದ್ದಾರೆ, ಅದರ ಬಗ್ಗೆ

ನಾನು ಹೆಚ್ಚು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ನಮ್ಮ ಆದಾಯ ಬಹುಭಾಗವನ್ನು ಅಧಿಕಾರಿ ವರ್ಗದವರಿಗೆ ಕೊಟ್ಟು ಕೈಕಟ್ಟಿ ಕೂಡುವಂತಹದ್ದಾಗಿದೆ. ಇನ್ನೊಂದು ಮಾತು ನಾವು ಪ್ರಜಾಪ್ರಭುತ್ವವಾದಿಗಳು ಜನರ ಕೈಗೆ ಅಧಿಕಾರವನ್ನು ಕೊಟ್ಟಿದ್ದೇವೆ, ನಮ್ಮಲ್ಲಿ ಏನೂ ಇಲ್ಲವೆಂದು ಹೇಳತ್ತಾರೆ. ನಿಮ್ಮ ಕೈಯಲ್ಲಿ ಆಗದಿದ್ದರೆ ಜನರ ಕೈಯಲ್ಲಿ ಅಧಿಕಾರವಿದೆ ನಿಮ್ಮ ಅಭಿನಂದನೆ ಮಾಡುತ್ತಿದ್ದೇವೆ. ಕೇವಲ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ಗಳನ್ನು ಮಾಡಿದರೆ ಏನೂ ಆಗುವುದಿಲ್ಲ. ಅಲ್ಲೊಂದು ೧೫ ಜನ ಆರಿಸಿ ಬರುತ್ತಾರೆ. ಅವರು ೧೫ ರೂಪಾಯಿ ಭತ್ಯ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ, ಏನು ಅಧಿಕಾರ ಅವರಿಗೆ ಕೊಟ್ಟಿದ್ದೀರಿ ? ಅವರಿಗೆ ಯಾವ ಅಧಿಕಾರ ಕೊಟ್ಟಿದ್ದೀರಿ ? ಯಾರು ಮಂಡಲ ಮತ್ತು ಜಿಲ್ಲಾ ಪರಿಷತ್‌ನ ಅಧ್ಯಕ್ಷರಾಗಿರುತ್ತಾರೆ ಅವರು ಅಧಿಕಾರದ ಲಗಾಮು ಹಿಡಿಯುವಂತಹ ಅಧಿಕಾರ ಕಕ್ಷೆಯನ್ನು ಕೊಟ್ಟಿದ್ದೀರಾ ? ಎಲ್ಲಿ ಹೋದರೂ ಸಹಿತ ಇವತ್ತು ಕೇಳುತ್ತಿದ್ದಾರೆ, ೧೫ ರೂಪಾಯಿ ಭತ್ಯ ತೆಗೆದುಕೊಳ್ಳುವುದಕ್ಕೆ ಟ್ರಸರಿಯಲ್ಲಿ ದುಡ್ಡಿಲ್ಲ ಟ್ರಸರಿಗೆ ಹೋಗಿ ಹಿಂದಕ್ಕೆ ಬರುತ್ತಿದ್ದಾರೆ. ನಿಮ್ಮ ವ್ಯವಹಾರ ಯಾವ ರೀತಿ ನಡೆದಿದೆ ಎಂಬುದನ್ನು ಅಲ್ಲಿ ಹೋಗಿ ನೋಡಬೇಕು. ಮಾನ್ಯ ಜಾಲಪ್ಪನವರು ಸಹಕಾರ ಸಚಿವರಾಗಿದ್ದಾಗ ಒಳ್ಳೆಯ ಕೆಲಸ ಮಾಡಿದ್ದಾರೆ ಅದು ನಿಜ, ರೈತರಿಗೆ ದಳ್ಳಾಳಿಗಳಿಂದ ಮಾರ್ಕೆಟ್ ಯಾರ್ಡ್‌ಗಳಲ್ಲಿ ಆಗುತ್ತಿದ್ದ ಕಿರುಕುಳವನ್ನು ತಪ್ಪಿಸಿ ಶ್ರೇಯಸ್ಕರವಾದ ಕೆಲಸವನ್ನು ಜಾಲಪ್ಪನವರು ಮಾಡಿದ್ದಾರೆ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಹಕಾರ ಸಂಘಗಳಲ್ಲಿ ನಾಮಕರಣ ಮಾಡುವಂತಹ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಿ ಸಹಕಾರ ಸಂಘಗಳು ಹಾಳಾದರೂ ಅಡ್ಡಿಯಿಲ್ಲ ನಾಮಪತ್ರ ಬೇಡವೆಂದು ಹೇಳಿದೆವು ಅದನ್ನು ಮಾಡಿದರು. ಅವರಿಗೆ ನಿಜವಾಗಿಯೂ ವಂದನೆಗಳನ್ನು ಅರ್ಪಿಸಬೇಕಾಗಿದೆ.

೬–೩೦ ಪಿ.ಎಂ.

ಇಲ್ಲಿ ನಾವು ಏನು ಮಾಡುತ್ತೇವೆ ? ಕೇಂದ್ರ ಸರ್ಕಾರದವರು ನಾಮಿನೇಶನ್ ಮಾಡುತ್ತಿಲ್ಲವೆ ಎಂದು ಕೇಳಬಹುದು. ಹೌದು, ಅವರು ಮಾಡುತ್ತಾರೆ. ತಪ್ಪು ಅಲ್ಲವೆಂದು ನಾನು ಹೇಳಿಲ್ಲ. ನನ್ನನ್ನು ಕೇಂದ್ರದಲ್ಲಿ ಕಾನೂನು ಮಾಡುವ ಸಮಿತಿಯಲ್ಲಿ ನಾಮಕರಣ ಮಾಡಿದಾಗ ನೀವು ಮಾಡಿದ್ದು ತಪ್ಪು ಎಂದು ನಾನು ಬರೆದಿದ್ದೇನೆ. ಅಷ್ಟೇ ಅಲ್ಲ, ಎಂ.ಎಲ್.ಎ. ಎಂ.ಎಲ್.ಸಿ. ಸಹಿತ ಅಲ್ಲಿ ಇರಬಾರದು ಎಂದು ಬರೆದಿದ್ದೇನೆ, ನೀವು ಏನು ಮಾಡುತ್ತೀರಿ ? ಮುನಿಸಿಪಾಲಿಟಿಗೂ ಎಂ.ಎಲ್.ಎ. ಬೇಕು, ಕಾರ್ಪೊರೇಷನ್ ಒಳಗೂ ಎಂ.ಎಲ್.ಎ. ಬೇಕು. ಸಹಕಾರ ಸಂಘದಲ್ಲೂ ಎಂ.ಎಲ್.ಎ. ಬೇಕು, ಮಂಡಲ್ ಪಂಚಾಯತಿಯಲ್ಲೂ ಅವರು ಬೇಕು. ಅಲ್ಲಿ ಮಾಡುವ ಕಾಮಗಾರಿಗಳಿಗೆ ಎಲ್ಲರೂ ಭಾಗಿಗಳಾಗಬೇಕು ಮತ್ತೆ ಇಲ್ಲಿ ಅಸೆಂಬ್ಲಿಯಲ್ಲಿ ಅವರು ಬಂದು ಟೀಕೆ ಮಾಡಬೇಕು. ಎಂಥ ನ್ಯಾಯ ಇದು ? ತಹಶೀಲ್ದಾರನೂ ಅವನೇ, ಮ್ಯಾಜಿಸ್ಟ್ರೇಟನ್ನು ಅವನೇ. ಅನಂತರ, ಈ ಎಲ್ಲ ಸಮಿತಿಯಲ್ಲಿ ನಾಮಕರಣ ಮಾಡುವುದು ಒಂದು ಕಡೆ ಇರಲಿ. ಈ ಸಹಕಾರ ಸಂಘಗಳಲ್ಲಿ ಒಂದು ವಿಚಿತ್ರ ಇದೆ. ಅದು ಏನೆಂದರೆ ಸೆಕ್ಷನ್ ೩೦ ಬಿ ಕೆಳಗೆ ರಿಜಿಸ್ಟ್ರಾರ್ ಅವರು ಒಂದು ಆದೇಶವನ್ನು ಕೊಡುತ್ತಾರೆ. ಅವರ ಕಡೆಯಿಂದ ಈ ಆದೇಶ ಹೊರಡುತ್ತದೆ. ಅದು ಏನು ಎಂದರೆ ಯಾರೇ ಒಬ್ಬ ಸಹಕಾರಿ ಸಂಘದ ಅಧಿಕಾರಿಯಾಗಲೀ, ಅಧಿಕಾರೇತರರಾಗಲೀ ತನ್ನ ಕ್ಷೇತ್ರವನ್ನು ಬಿಟ್ಟು ಹೋಗಬೇಕಾದರೆ ಇಂತಿಂಥ ಅಧಿಕಾರಿಯಿಂದ ಪರವಾನಗಿಯನ್ನು ತೆಗೆದುಕೊಳ್ಳಬೇಕೆಂದು ಆದೇಶ ಇದೆ. ಒಂದು ಹಳ್ಳಿಯ ಊರು ಸೊಸೈಟಿಯ ಚೇರ್ಮನ್‌ರಾಗಲೀ, ಸೆಕ್ರೆಟರಿಯಾಗಲೀ ಹಣ ತುಂಬಲಿಕ್ಕೆ ತಾಲ್ಲೂಕು ಮಟ್ಟಕ್ಕೆ ಹೋಗಬೇಕಾಗುತ್ತದೆ. ಏಕೆಂದರೆ ತಾಲ್ಲೂಕಿನಲ್ಲಿ ಬ್ಯಾಂಕುಗಳು ಇರುತ್ತವೆ, ಅಪೆಕ್ಸ್ ಬ್ಯಾಂಕ್ ಇರಬಹುದು, ಸೆಂಟ್ರಲ್ ಬ್ಯಾಂಕ್ ಇರಬಹುದು. ಆದರೆ ಹಾಗೆ ಹೋಗಬೇಕಾದರೆ ಅವರು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅಥವಾ ಡೆಪ್ಯುಟಿ ರಿಜಿಸ್ಟ್ರಾರ್ ಅವರ ಪರವಾನಗಿಯನ್ನು ತೆಗೆದುಕೊಳ್ಳಬೇಕು. ಒಂದು ಟೆಕ್ಸ್‌ಟೈಲ್ ಮಿಲ್‌ನಲ್ಲಿ ಇರತಕ್ಕಂಥ ಮ್ಯಾನೇಜಿಂಗ್ ಡೈರೆಕ್ಟರ್ ತಾನು ಹಣ ತುಂಬುವುದಕ್ಕೆ ಅಥವಾ ಯಾವುದೇ ಕೆಲಸಕ್ಕೆ ಹೋಗಬೇಕಾದರೆ ತನಗಿಂತ ಕೆಳದರ್ಜೆಯಲ್ಲಿರತಕ್ಕಂಥ ಡೆಪ್ಯುಟಿ ರಿಜಿಸ್ಟ್ರಾರ್ ಕಡೆಯಿಂದ ಪರವಾನಗಿಯನ್ನು ತೆಗೆದುಕೊಳ್ಳಬೇಕು. ಇದು ಎಷ್ಟು ಅಭಾಸವಾಗುತ್ತದೆ ? ಇದನ್ನು ನಿಮ್ಮ ಹತೋಟಿಯಲ್ಲಿ ಜನ ಇರಬೇಕೆಂದು ಮಾಡುತ್ತೀರೋ ಹ್ಯಾಗೆ ? ಅಥವಾ ಗೊತ್ತಾಗದೆ ಮಾಡುತ್ತೀರಾ ? ಒಂದುವೇಳೆ ಶ್ರೀ ಜಾಲಪ್ಪನವರಿಗೆ ತಪ್ಪಿಹೋಯಿತು ಎಂದರೆ ಸೆಕ್ರೆಟರಿಯವರು ಅದನ್ನು ತಿದ್ದಬೇಕು. ಈಗ ಇರುವ ಶ್ರೀ ಏಕಾಂತಯ್ಯನವರು ತಿದ್ದಬೇಕು. ಇವರು ಎಲ್ಲಾ ಕಡೆಗೆ ಪ್ರವಾಸ ಮಾಡಿ ಬಂದಿದ್ದಾರೆ. ಈ ವೇಳೆಗೆ ಇದು ಅವರ ಗಮನಕ್ಕೆ ಬಂದಿರಬೇಕು. ಇದನ್ನು

ಇಲ್ಲಿಯ ತನಕವೂ ತಿದ್ದದೆ ನಾವು ಭಾರಿ ಡೆಮಾಕ್ರಟಿಕ್ ಇದ್ದೇವೆ ಎಂದು ಹೇಳುತ್ತೀರಿ ? ಇದಕ್ಕೆ ಅನೇಕ ಉದಾಹರಣೆಗಳು ಇದ್ದರೂ, ಒಂದು ಉದಾಹರಣೆಗಳು ಹೇಳುತ್ತೇನೆ. ನಾನ್ ಅಫಿಶಿಯಲ್ಸ್ ಮೀಟಿಂಗ್ ಇರುತ್ತವೆ, ನ್ಯಾಷನಲ್ ಕೋಪರೇಟಿವ್ ಯೂನಿಯನ್ ಮೀಟಿಂಗ್ ನಡೆಯುತ್ತದೆ. ಅಲ್ಲಿ ಹೋಗಬೇಕಾದರೆ ಪರವಾನಗಿಯನ್ನು ತೆಗೆದುಕೊಳ್ಳಬೇಕು. ನಾನು ತೆಗೆದುಕೊಳ್ಳುವುದಿಲ್ಲ, ಏಕೆಂದರೆ ನಾನು ಯಾವ ಸೊಸೈಟಿಯಿಂದಲೂ ಹಣ ತೆಗೆದುಕೊಳ್ಳುವುದಿಲ್ಲ. ಅದಕ್ಕಾಗಿ ನಾನು ಹಾಗೆಯೇ ಹೋಗುತ್ತೇನೆ. ಆದರೆ ಇವರು ಎನ್.ಸಿ.ಐ.ಗೆ ಏಕೆ ಬರಲಿಲ್ಲ ಎಂದರೆ ಪರವಾನಗಿ ಕೊಡಲಿಲ್ಲ ಎಂದು ಹೇಳುತ್ತಾರೆ. ಒಬ್ಬ ನಾನ್ ಅಫಿಶಿಯಲ್ ರಾಜ್ಯ, ರಾಷ್ಟ್ರಮಟ್ಟದ ಒಂದು ಸಭೆಗೆ ಹೋಗಬೇಕಾದರೆ ಪರವಾನಗಿಯನ್ನು ಕೊಡದೇ ಇದ್ದರೆ ನಿಮ್ಮ ರಾಜ್ಯದ ಹಿತರಕ್ಷಣೆ ಮಾಡುವಂಥ ಅಧಿಕಾರವನ್ನು ಪ್ರಜೆಗಳ ಕೈಗೆ ಹೇಗೆ ಕೊಟ್ಟಂತಾಗುತ್ತದೆ ? ಇದನ್ನು ದಯವಿಟ್ಟು ವಿಚಾರ ಮಾಡಿ. ಇನ್ನು ಅಧಿಕಾರಿಗಳ ಮಟ್ಟಕ್ಕೆ ತೆಗೆದುಕೊಂಡರೆ ಬಹಳ ಸಹಾನುಭೂತಿಪರರಿದ್ದೀರಿ. ಉದಾಹರಣೆಗೆ ನಿಮ್ಮ ಫೈನಾನ್ಸ್ ಸೆಕ್ರೆಟರಿಯವರನ್ನು ತೆಗೆದುಕೊಳ್ಳಿ. ತಮಗೆ ಇರತಕ್ಕಂಥ ಮನೆಯನ್ನು ಒಂದು ಕಂಪನಿಗೆ ಬಾಡಿಗೆಗೆ ಕೊಟ್ಟು ಬಹಳಷ್ಟು ಹಣ ಬಾಡಿಗೆ ತೆಗೆದುಕೊಂಡು ಕಂಪನಿಯ ಕಡೆಯಿಂದ ಗುಂಡೂರಾಯರಿಗೆ ಕೊಟ್ಟಿದ್ದಾರೆ. ಇವತ್ತಲ್ಲ ನಾಳೆ ಏನಾದರೂ ಬದಲಾವಣೆ ಆದರೆ, ಶ್ರೀ ಗುಂಡೂರಾಯರ ಮರ್ಜಿಯಲ್ಲಿ ಇರಬೇಕೆಂದು ಹೇಳಿ. ಅಮೇಲೆ ಸರ್ಕಾರದ ಕಡೆಯಿಂದ ಪಗಾರ ತೆಗೆದುಕೊಂಡು ಬೇರೆ ಮನೆಯಲ್ಲಿ ಇದ್ದಾರೆ. ಇದು ನಿಮ್ಮ ಕಣ್ಣೆದುರಿಗೆ ಇದ್ದರೂ ಸುಮ್ಮನೆ ಇದ್ದೀರಿ. ಇದಕ್ಕೆ ಯಾವ ರೆಕ್ಷನ್ ಬೇಡ, ಸರ್ಕ್ಯುಲ್ಯಾಡ್ ಬೇಡ, ಯಾವ ಡೈರೆಕ್ಷನ್ ಬೇಡ. ಆಮೇಲೆ ಇಲ್ಲಿ ಅಧಿಕಾರಿಗಳ ರಾಜ್ಯ ಇದೆಯೇ ಹೊರತು ನಾನ್ ಅಫಿಶಿಯಲ್ಸ್ ರಾಜ್ಯ ಇದೆಯೆಂದು ನಾನು ತಿಳಿಯುವುದಿಲ್ಲ. ಏತಕ್ಕೆ ಎಂದು ಹೇಳಿದರೆ ಇವರು ಡೆಲ್ಲಿಗೆ ಹೋದಾಗ. ಫೈನಾನ್ಸ್ ಸೆಕ್ರೆಟರಿಯವರನ್ನು ತೆಗೆದುಕೊಳ್ಳಿ. ಮತ್ತೊಬ್ಬರನ್ನು ತೆಗೆದುಕೊಳ್ಳಿ. ಇಲ್ಲಿ ಏನು ಲುಕ್ಸಾನು ೧೧೩ ಕೋಟಿ ಆಗಿದೆ, ಅದು ಇವರು ಮಾಡತಕ್ಕದ್ದರಿಂದ ವೆಚ್ಚದಿಂದ ಆಗುತ್ತದೆ. ಎಲ್ಲಾ ಕಂಪನಿಯಲ್ಲೂ ಈ ಡೈರೆಕ್ಟರುಗಳು ಏನು ಇದ್ದಾರೆ, ಇವರು ಒಬ್ಬೊಬ್ಬರು ನಾಲ್ಕೈದರೊಳಗೆ ಇದ್ದಾರೆ ಇವರು ಅಲ್ಲಿ ಹೋದಾಗ ಅಶೋಕಾ ಹೋಟೆಲ್‌ನಲ್ಲಿ. ಅಥವಾ ಇಲ್ಲದಿದ್ದರೆ ತಾಜ್ ಹೋಟೆಲ್‌ನಲ್ಲಿ ದಿನಕ್ಕೆ ೬೦೦–೭೦೦ ರೂಪಾಯಿ ಖರ್ಚುಮಾಡಿ ಇರುತ್ತಾರೆ. ನಾವು ಹೋದರೆ, ಅಧ್ಯಕ್ಷರಾದ ತಾವು ಹೋದರೂ ಸಹಿತ ತಮ್ಮ ಭತ್ಯೆ ೭೫ ರೂಪಾಯಿಗೆ ಮೀಸಲಾಗಿರುತ್ತದೆ. ನಮಗೆ ಡೆಲ್ಲಿಯಲ್ಲಿ ಕರ್ನಾಟಕ ಭವನದೊಳಗೆ ಹೋದರೆ ಮೂರು ದಿವಸ, ಐದು ದಿವಸಕ್ಕಿಂತ ಹೆಚ್ಚು ಇರುವಹಾಗಿಲ್ಲ.

ಅಧಿಕಾರಸ್ಥರು ಮಾತ್ರ ಏನು ಬೇಕಾದರೂ ಮಾಡುತ್ತಾರೆ. ಒಬ್ಬ ಅಧಿಕಾರಿ ಕೋ-ಅಪರೇಷನ್ ಡಿಪಾರ್ಟ್‌ಮೆಂಟಿನಲ್ಲಿದ್ದು, ಹೊರ ದೇಶಗಳಿಗೆ, ಆ ಇಲಾಖೆಯ ಹಣವನ್ನು ಉಪಯೋಗ ಮಾಡಿಕೊಂಡು ಪ್ರವಾಸ ಹೋಗಿಬರುತ್ತಾನೆ. ಮತ್ತೆ ಆ ಅಧಿಕಾರಿಯನ್ನು ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸುತ್ತಾರೆ. ಇ ದಿನ ಫೈನಾನ್ಸ್ ವ್ಯವಸ್ಥೆ ಸರಿಯಾಗಿದೆ ಎಂದು ನೋಡುವುದಾದರೆ, ಹೀಗೆ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಈ ವಿಚಾರಗಳೆಲ್ಲಾ ತಿಳಿದರೂ ಅವರು ಈ ರೀತಿಯ ಅನ್ಯಾಯ ಮಾಡುತ್ತಾರೆಂದು ನನ್ನ ಮಟ್ಟಿಗೆ ತಿಳಿದುಕೊಂಡಿಲ್ಲ. ಅವರಿಗೆ ಇಂತಹ ವಿಷಯಗಳೆಲ್ಲಾ ಯಾವಾಗಲೋ ಗಮನಕ್ಕೆ ಬರಬಹುದು, ಸುಮಾರು ೧೦ ವರ್ಷಕ್ಕೋ ವರ್ಷಕ್ಕೋ ತಿಳಿಯಬಹುದು. ಏಕೆಂದರೆ ಅವರಿಗೆ ಬಹುತೇಕ ಕೆಲಸಗಳಿರುತ್ತವೆ. ಅವರಿಗೆ ದೆಹಲಿಯಲ್ಲಿ, ಮತ್ತಿತರ ಕಡೆಗಳಲ್ಲಿ ಕೆಲಸಗಳು ಇರುತ್ತವೆ. ನಾವು ಮೊನ್ನೆ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಒಂದು ಮಾತ ಹೇಳಿದ್ದೆವು. ಫೆಬ್ರುವರಿಯಲ್ಲಿ ಎಲ್ಲಾ ಬಿಲ್ಲುಗಳನ್ನೂ ಕೊಟ್ಟಿದ್ದಾರೆಯೇ ಎಂದು ಕೇಳಿದ್ದೆ. ಅದಕ್ಕೆ ಅವರು ಫೈನಾನ್ಸ್ ಸೆಕ್ರಟರಿಯವರು ದಕ್ಷರು ಇದ್ದಾರೆ, ಯಾವುದನ್ನೂ ನಿಲ್ಲಿಸಿಲ್ಲ ಎಂದು ಹೇಳಿದರು. ನನಗೆ ಅತ್ಯಂತ ಸ್ಪಷ್ಟವಾದ ತಿಳುವಳಿಕೆ ಇಲ್ಲದೇಹೋದರೆ, ನನ್ನ ಎದುರಿಗೆ ಡಾಕ್ಯುಮೆಂಟ್ಸ್ ಇಲ್ಲದೇಹೋದರೆ. ನಾನು ಯಾವುದೇ ರೀತಿಯ ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಆರೋಪ ಮಾಡುವುದಕ್ಕೂ ನನಗೆ ನಿಯಮ ಗೊತ್ತಿದೆ. ಯಾವುದೇ ಸೆಕ್ರಟರಿಯವರ ಆರೋಪ ಮಾಡುವುದಕ್ಕೆ ಮುಂಚಿತವಾಗಿ ತಿಳುವಳಿಕೆ ಕೊಡಬೇಕಾಗುತ್ತದೆ. ಆದರೆ ಈ ವಿಚಾರದಲ್ಲಿ ಆ ರೀತಿ ಮುಂಚಿತವಾಗಿ ಕೊಡುವುದಕ್ಕೆ ಬರುವುದಿಲ್ಲ. ಅವರು ಆಡಳಿತಾತ್ಮಕವಾಗಿ ಗಮನ ಕೊಡಬೇಕಾಗಿದೆ, ಫೈನಾನ್ಸ್‌ನ್ನು ದುರುಪಯೋಗ ಮಾಡುತ್ತಿದ್ದಾರೆ. ಬೇರೆ ಬೇರೆ ಡಿಪಾರ್ಟ್‌ಮೆಂಟ್ಸ್‌ನ ಎಲ್ಲಾ ಬಿಲ್ಲುಗಳೂ ಟ್ರಜರಿ ಮುಖಾಂತರ, ಚೆಕ್ ಮುಖಾಂತರ ಹೋಗುತ್ತವೆ. ಇದರಿಂದ ಟ್ರಜರಿ

ಆಫೀಸರಿಗೆ, ಫೈನಾನ್ಸ್ ಸೆಕ್ರೆಟರಿಯವರು ಲಗಾಮು ಹಾಕಿರುತ್ತಾರೆ. ನೋಡಿ ಕೆ. ಹೆಚ್. ಪಾಟೀಲರ ಬಿಲ್ಲು ಬಂದಿದೆ. ಏನಾದರೂ ಇದರ ಬಗ್ಗೆ ಅಂಗೀಕಾರ ಮಾಡಬೇಕೇ ಬೇಡವೇ ಎಂದು ಕೇಳುತ್ತಾರೆ. ಇದಕ್ಕೆ ಒಬ್ಬರು ಜಾಯಿಂಟ್ ಸೆಕ್ರೆಟರಿಯವರನ್ನು ನೇಮಿಸುತ್ತಾರೆ. ಟ್ರಜರಿಯವರು, ಇವರನ್ನು ಕೇಳಿದರೆ, ಈ ಜಾಯಿಂಟ್ ಸೆಕ್ರೆಟರಿ, ಸೆಕ್ರೆಟರಿಯವರನ್ನು ಕೇಳಿ ಹೇಳಬೇಕೆಂದು ಹೇಳುತ್ತಾರೆ. ಸೆಕ್ರೆಟರಿಯವರು ಸರಳ ವಿಚಾರ ಇದ್ದರೆ ಹೇಳಬಹುದು. ಆದರೆ ಅವರು, ಒಬ್ಬರಿಗೆ ಬಿಲ್ ಪಾಸ್ ಮಾಡಿಕೊಡುವುದು, ಮತ್ತೊಬ್ಬರಿಗೆ ಕೊಡದೇ ಇರುವುದು, ಈ ರೀತಿ ಮಾಡಿದಾಗ, ಈ ವ್ಯವಸ್ಥೆಯು ಲಂಚದಿಂದ ದೂರ ಇದೆಯೆಂದು ಹೇಳುವುದಕ್ಕೆ ಬರುವುದಿಲ್ಲ. ಅವರು ಯಾವುದೇರೀತಿ ಮಾಡಲಿ, ಅವರಿಗೆ ಬರತಕ್ಕಂಥ ಪಗಾರವೂ ಬರುತ್ತದೆ. ಮಳೆ ಆದರೂ ಪಗಾರ ಬರುತ್ತದೆ ಮಳೆ ಆಗದೇ ಹೋದರೂ ಬರುತ್ತದೆ. ನಾವು ಅಸೆಂಬ್ಲಿ ಒಳಗೆ ಕುಳಿತರೂ ಬರುತ್ತದೆ, ಇಲ್ಲದೇಹೋದರೂ ಬರುತ್ತದೆ. ಆಡಳಿತ ಮಾಡುವವರು ಅಪ್ರೊಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಡಿ ಎಂದು ಹೇಳುತ್ತಾರೆ. ನಾವು, ಇಲ್ಲಿ ಅನೇಕ ಬಗೆಯಲ್ಲಿ ಚರ್ಚೆ ಮಾಡಿದರೂ, ಬಿಲ್ ಮಾತ್ರ ಪಾಸ್ ಆಗುತ್ತದೆ. ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಇಂತಹ 00-20 ಉದಾಹರಣೆ ಬೇಕಾದರೂ ಕೊಡುತ್ತೇನೆ. ಆದರೆ, ಈ ವಿಚಾರವನ್ನು ಇಲ್ಲಿ ಜನರಲ್ ಆಗಿ ಹೇಳಿದ್ದೇನೆ. ಹಣ ಮಂಜೂರ್ಮಾಡಿ ಒಂದು ವರ್ಷವಾಗಿದ್ದರೂ, ನಾಲ್ಕಾರು ತಿಂಗಳವರೆಗೆ ಬಿಲ್ ಕೊಟ್ಟಿಲ್ಲ. ನೀವು ಲಾ ಡಿಪಾರ್ಟ್‌ಮೆಂಟ್‌ನವರು, ಈ ವಿಚಾರಗಳು ಅಷ್ಟಾಗಿ ನಿಮ್ಮ ಗಮನಕ್ಕೆ ಬಾರದಿರಬಹುದು. ಹೈಕೋರ್ಟ್ ಜಡ್ಜ್‌ಮೆಂಟ್ ಆದರೂ ಸಹಿತ ಒಂದೊಂದು ವರ್ಷವಾದರೂ ಕೂಡ ಬಿಲ್ ಕೊಟ್ಟಿಲ್ಲ. ಈಗ ಸಹಕಾರ ಸಂಘ ಸುಸ್ಥಿತಿಗೆ ಬಂದಿಲ್ಲವೆಂದು ಹೇಳುತ್ತಾರೆ, ಇದಕ್ಕೆ ಕಾರಣ ಏನು ? ಅಧಿಕಾರಿಗಳ ಮೇಲೆ ನಿಮ್ಮ ಹಿಡಿತ ಇಲ್ಲದಿರುವುದೂ ಒಂದು ಕಾರಣ. ಚೇರ್ಮನ್ ಏನು ಮಾಡುತ್ತಾರೆ, ಸೆಕ್ರೆಟರಿಯವರು ಏನು ಮಾಡುತ್ತಾರೆ. ಇವತ್ತು ಎಲ್ಲಿ ನೋಡಿದರೂ ಕೂಡ ಹಣ ದುರುಪಯೋಗವಾಗತಕ್ಕಂಥ ಸನ್ನಿವೇಶಗಳನ್ನು ನೋಡುತ್ತಿದ್ದೇವೆ. ದುರ್ದೈವ ಇವತ್ತಿನ ದಿವಸ ಏನಾಗಿದೆ, ಸರ್ಕಾರದೊಳಗೆ ನಿಜವಾದ ಕಣ್ಣನ್ನು ತೆಗೆದು, ಸಹಕಾರಿಗಳ ದೃಷ್ಟಿಯಿಂದ, ಸಹಕಾರ ಸಂಘದ ದೃಷ್ಟಿಯಿಂದ, ಜನತಾ ಪ್ರತಿನಿಧಿಗಳ ದೃಷ್ಟಿಯಿಂದ ನೋಡುವುದು ಕಡಿಮೆ. ಇದು ಬದಲಾವಣೆಯಾಗಬೇಕು. ತಾವು ಇದರ ಕಡೆ ಲಕ್ಷ್ಯ ಕೊಡಬೇಕು.

ಮಾನ್ಯ ಲಕ್ಷ್ಮೀಸಾಗರ್ ಅವರು ನಿಜವಾಗಿಯೂ ಕೇಳುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಕೆಲವು ಕಡೆ ಹೈಕೋರ್ಟ್ ಆರ್ಡರ್ ಆದರೂ ಸಹಿತ ಹಣ ಕೊಟ್ಟಿಲ್ಲ. ನಾವು ವಿರೋಧ ಪಕ್ಷದವರಿದ್ದರೂ ಸಹಿತ ಇದು ನಮ್ಮ ಸರಕಾರ ಮಾನ್ಯ ಲಕ್ಷ್ಮೀಸಾಗರ್ ಅವರು ವಿರೋಧ ಪಕ್ಷದಲ್ಲಿದ್ದರೂ ಸಹಿತ ಇದು ನಮ್ಮದ್ದೇ ಸರಕಾರ. ಈ ಸರಕಾರಕ್ಕೆ ತೊಂದರೆಯಾಗುವುದು ಬೇಡ, ಒಂದಲ್ಲ ಒಂದು ರೀತಿಯಲ್ಲಿ ಇವರಿಂದ ಸಹಕಾರ ಸಂಘದವರು ಸಾಲ ಮಾಡಿದ್ದಾರೆ, ಆದುದರಿಂದ ಇವರು ಬಡ್ಡಿ ಕೊಡುವುದು ಬೇಡ ಎಂದು ಹೇಳಿ ಹದಿನೆಂಟು ಪರ್ಸೆಂಟ್ ಬಡ್ಡಿ ಕೊಡಬೇಕೆಂದು ಜಡ್ಜ್‌ಮೆಂಟ್ ಆಗಿದ್ದರೂ ಕೂಡಾ ಅದು ಬೇಡ ನಮ್ಮ ಸಾಲ ಏನಿದ್ದರೂ ಅದನ್ನು ಷೇರು ಹಣದೊಳಗೆ ತೆಗೆದುಕೊಳ್ಳಿರಿ ಎಂದು ಅರ್ಜಿ ಕೊಟ್ಟರೂ ಚೀಫ್ ಮಿನಿಸ್ಟರ್ ಅವರು ಇದನ್ನು ಬೇಗ ಕನ್ಸಿಡರ್ ಮಾಡಿ ಎಂದು ಬರೆದರೂ ಫೈನಾನ್ಸ್ ಸೆಕ್ರೆಟರಿಯವರು ಆಗುವುದಿಲ್ಲ ಎಂದು ಬರೆದರು. ಅವರಿಗೆ ರಾಜ್ಯದ ಹಿತ ಇಲ್ಲ. ಅವರಿಗೆ ಇವತ್ತಿನ ಹಿತ ಬೇಕಾಗಿದೆ. ಅವರು ಇವತ್ತಿನ ಹಿತದ ಕಡೆಗೆ ಗಮನ ಕೊಡುವಾಗ ನಾಳಿನ ಬಗ್ಗೆ ಆಲೋಚನೆ ಇಲ್ಲ ಅವರಿಗೆ ಅಧಿಕಾರದಲ್ಲಿ ಕೆ. ಹೆಚ್. ಪಾಟೀಲರು ಇದ್ದರೂ ಅಷ್ಟೆ, ನೀವು ಇದ್ದರೂ ಅಷ್ಟೆ. ಈ ದುರ್ಭಾಗ್ಯವನ್ನು ಬದಲಾವಣೆ ಮಾಡುವುದಕ್ಕೆ ನೀವು ಪ್ರಯತ್ನ ಮಾಡಿ. ನೀವು ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೀರಿ, ಮತ್ತು ಜನತಾ ಪಕ್ಷದ ಪ್ರಣಾಳಿಕೆಯಲ್ಲಿಯೂ ಹೇಳಿದ್ದೀರಿ, ನಾವು ಭ್ರಷ್ಟಾಚಾರವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡುತ್ತೇವೆ ಎಂದು ನೀವು ಎದೆ ಮೇಲೆ ಕೈ ಇಟ್ಟುಕೊಂಡು ಹೇಳಿ, ಭ್ರಷ್ಟಾಚಾರವನ್ನು ಹೋಗಲಾಡಿಸುವುದಕ್ಕೆ ಆಮೂಲಾಗ್ರವಾಗಿ ಪ್ರಯತ್ನವನ್ನಾದರೂ ಮಾಡಿದ್ದೀರಾ? ನಾನು ನೀವು ಭ್ರಷ್ಟಾಚಾರಿಗಳು ಎನ್ನುವುದಕ್ಕೆ ತಯಾರಿಲ್ಲ, ಹಿಂದಿಗಿಂತ ಹೆಚ್ಚು ಮಾಡಿದ್ದೀರಿ ಎನ್ನುವುದಿಲ್ಲ. ನೀವು ಭ್ರಷ್ಟಾಚಾರ ನಿರ್ಮೂಲನ ಮಾಡುತ್ತೇವೆಂದು ಹೇಳಿದ್ದೀರಿ, ಆದರೆ ಅಧಿಕಾರಸ್ಥರಲ್ಲಿರತಕ್ಕಂಥ ಭ್ರಷ್ಟಾಚಾರವನ್ನು ಯಾವರೀತಿ ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡಿದ್ದೀರಿ? ಅಧಿಕಾರಸ್ಥರು ಎರಡು ಮೂರು ಮನೆಗಳನ್ನು ಕಟ್ಟಿದ್ದಾರೆ. ಮಂತ್ರಿಗಳು ಮೂರು ನಾಲ್ಕು ಸೈಟ್ ಹಿಡಿದರೆ ಅವರ ಮೇಲೆ ಎನ್‌ಕ್ವೈರಿ ಮಾಡಿಸುತ್ತೀರಿ, ಆದರೆ ಅಧಿಕಾರಸ್ಥರು ಎರಡು ಮೂರು ಮನೆಗಳನ್ನು ಕಟ್ಟಿಸಿದ್ದಾರೆ, ಇದರ ಬಗ್ಗೆ ಏನು ಎನ್‌ಕ್ವೈರಿ ಮಾಡಿಸಿದ್ದೀರಿ? ಏನು

ಚಾರ್ಜಸ್ ಮಾಡಿದ್ದೀರಿ. ಚಾಲಪ್ಪನವರೇ ತಾವು ಹೇಳಿ ಹೋಮ್ ಮಿನಿಸ್ಟ್ರಿಯಿಂದ ಏನು ಮಾಡಿದ್ದೀರಿ. ಸಿ.ಒ.ಡಿ. ಎನ್‌ಕ್ವೈರಿ ಬರೀ ಕೆ. ಹೆಚ್. ಪಾಟೀಲರ ಬಗ್ಗೆ ಮೀಸಲಾಗಿರಬಾರದು. ಅದು ಸ್ವಲ್ಪ ಎಕ್ಸ್‌ಟೆಂಡ್ ಆಗಬೇಕು. ಅಧಿಕಾರಿಗಳಿಗೆ ಅದನ್ನು ಮಾಡಬೇಕು. ಒಬ್ಬೊಬ್ಬ ಆಫೀಸರ್ ಮರ್ಗನ ಮಾಡಿದರೂ ಸಾಕು ಸಹಸ್ರಾರು ಜನ ಸುಧಾರಿಸುತ್ತಾರೆ ಎಂಬ ನಂಬಿಕೆ ಇದೆ. ಯಾವುದೋ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಎರಡು ರೂಪಾಯಿ ತೆಗೆದುಕೊಂಡರೆ ಅವನನ್ನು ಹಿಡಿಯುತ್ತೀರಿ, ಅವನನ್ನು ಮನೆಗೆ ಕಳುಹಿಸುತ್ತೀರಿ. ಅವನ ಹೆಂಡಿರು ಮಕ್ಕಳ ಗೋಳು ಕಟ್ಟಿಕೊಳ್ಳುತ್ತೀರಿ, ಆದರೆ ಕೋಟಿಗಟ್ಟಲೆ, ಲಕ್ಷಗಟ್ಟಲೆ ಉತ್ಪಾದನೆಯನ್ನು ಮಾಡಿ ಮನೆ ಕಟ್ಟುತ್ತಾರೆ, ಮಾರುತ್ತಾರೆ, ಮತ್ತು ದೊಡ್ಡ ದೊಡ್ಡ ಸೈಟುಗಳನ್ನು ಹಿಡಿಯುತ್ತಾರೆ. ಎಲ್ಲರ ಕಣ್ಣು ಕುಕ್ಕುವಂತೆ ಮನೆಗಳನ್ನು ಕಟ್ಟುತ್ತಾರೆ ಇವರ ಬಗ್ಗೆ ನೀವು ಕಣ್ಣು ತೆರೆದಿಲ್ಲವೇ? ಇವರು ಪ್ರಾಮಾಣಿಕರು ಎಂದು ಬಿಟ್ಟಿದ್ದೀರಾ ಅಥವಾ ಇವರು ನಿಮ್ಮ ಕಾಯಿದೆಗೆ ಸಿಗುವುದಿಲ್ಲವೇ? ಐ.ಎ.ಎಸ್. ಅಧಿಕಾರಿಗಳು ಕೇಂದ್ರ ಸರಕಾರಕ್ಕೆ ಸೇರಿದ್ದಾರೆ, ನಮಗೇನೂ ಸಂಬಂಧ ಇಲ್ಲ ಎಂದು ಹೇಳಿಬಿಡುತ್ತೀರಾ? ನಾನು ಹೇಳುತ್ತೇನೆ, ಇವತ್ತಲ್ಲ ನಾಳೆ, ಕೇಂದ್ರ ಸರಕಾರ ನೀವು ಇಬ್ಬರೂ ಬೇರೆ ಇದ್ದರೂ ಸಹಿತಾ ನಾವೆಲ್ಲಾ ಒಂದೇ ಇವತ್ತು ನೀವು ನಾವು ಬೇರೆ ಇದ್ದರೂ ಸಹಿತ ಒಂದಲ್ಲ ಒಂದು ದಿವಸ ನಾವು ಒಂದಾಗುತ್ತೇವೆ. ಉಳಿಯುವುದು ಎರಡೇ ವರ್ಗ. ಒಂದು ಅಧಿಕಾರ ವರ್ಗದವರು ಇನ್ನೊಂದು ಅಧಿಕಾರೇತರ ವರ್ಗದವರು. ಪ್ರಜಾಪ್ರಭುತ್ವದ ಕಕ್ಷೆಯಲ್ಲಿ ವಿಚಾರ ಮಾಡುವಾಗ ಇವತ್ತಲ್ಲ ಇನ್ನು ಹತ್ತು ವರ್ಷಕ್ಕಾದರೂ ನಾವೆಲ್ಲಾ ಒಂದಾಗುತ್ತೇವೆ. ಅವರು ಕಾಂಗ್ರೆಸ್ ಇದ್ದು ನಾಳೆ ಜನತಾ ಆಗಬಹುದು, ಜನತಾದಲ್ಲಿದ್ದವರು ನಾಳೆ ಕಾಂಗ್ರೆಸ್ ಆಗಬಹುದು. ಇಲ್ಲ ಇಬ್ಬರೂ ಕೂಡಿ ಪಿ.ಪಿ. ಆಗಬಹುದು. ನಾವೆಲ್ಲಾ ಜನರ ಪ್ರತಿನಿಧಿಗಳಾಗಿ ಜನರ ಹಿತವನ್ನು ಕಾಪಾಡುವ ಜನರಾಗುತ್ತೇವೆ. ಅಧಿಕಾರಿಗಳು ಜನರನ್ನು ನಿಭಾಯಿಸುವ ಜನರಾಗುತ್ತಾರೆ, ಅಧಿಕಾರಸ್ಥರ ಬಗ್ಗೆ ಪಾಟೀಲರು ಮಾತನಾಡುತ್ತಾರೆ ಎಂದರೆ ಅವರು ನಾಳೆ ನಮ್ಮ ಸಮೀಪಕ್ಕೂ ಬರುವುದಿಲ್ಲ. ಅವರು ಈಗಲೇ ಮನಸ್ಸು ಮಾಡಿದ್ದಾರೆ, ನಾಳೆ ಪಾಟೀಲರದ್ದು ಯಾವ ಯಾವ ಪ್ರಪೋಸಲ್ ಬರುತ್ತದೆ, ಯಾವುದನ್ನು ಕಸದಬುಟ್ಟಿಗೆ ಹಾಕಬೇಕೆಂದು ಮನಸ್ಸು ಮಾಡುತ್ತಿರುತ್ತಾರೆ. ಕಸದಬುಟ್ಟಿಗೆ ಹಾಕಿದರೆ ಎಷ್ಟು ದಿವಸ ಹಾಕುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನ್ಯಾಷನಲ್ ಪೀಪಲ್ಸ್ ಪಾರ್ಟಿ ಎಂದು ಪ್ರಾರಂಭ ಮಾಡುತ್ತಾರಂತೆ, ಅದೇ ತಾನೆ ನೀವು ಪಿ.ಪಿ. ಎಂದು ಹೇಳಿದ್ದು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಒಂದು ಉದಾಹರಣೆ ಹೇಳುತ್ತೇನೆ ಅದು ನನಗೆ ಗೊತ್ತಿದೆ ಎಂದು ಹೇಳುತ್ತೇನೆ. ಗದಗ್ ವಾಟರ್ ಸಪ್ಲೈ ಬಗ್ಗೆ ಹೇಳುತ್ತೇನೆ. ಅಲ್ಲಿ ಎಷ್ಟು ಸ್ಕೇರ್ಸಿಟಿ ಇದೆ ಎಂದು ಅವರಿಗೆ ಗೊತ್ತಿದೆ. ನೀವೂ ಪ್ರಯತ್ನ ಮಾಡಿದಿರಿ. ಮಾನ್ಯ ರಾಮಕೃಷ್ಣ ಹೆಗಡೆಯವರೂ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ. ಅದರ ಬಗ್ಗೆ ನನ್ನ ವಿರೋಧ ಇಲ್ಲ. ಸ್ಕೀಮ್ ಮಾಡಿದ್ದೀರಿ, ಟೆಂಡರ್ ಕರೆದಿದ್ದೀರಿ. ಆದರೂ ಸರಕಾರ ಏತಕ್ಕೆ ಇಷ್ಟು ನಿಧಾನವಾಗಿ ಹೋಗುತ್ತದೆ. ನಮ್ಮಲ್ಲಿ ಮುನಿಸಿಪಾಲಿಟಿ ಒಳಗೆ ಇರತಕ್ಕಂಥ ಜಾಗ ಮಾರಿದರೆ ೫-೬ ಕೋಟಿ ರೂಪಾಯಿ ಬರುವಾಗ ಆ ಪಹಾರವನ್ನು ಬೇರೆಯವರಿಗೆ ಒಳಗೇ ಕೊಟ್ಟು ೫ ಸಾವಿರ ೧೦ ಸಾವಿರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಲ್ಲ. ಈ ಪ್ರಯತ್ನ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳು ಬೆಂಬಲ ಕೊಡುತ್ತಿದ್ದಾರಲ್ಲ ಆ ಅಧಿಕಾರಿಗಳನ್ನು ಅಲ್ಲಿ ಏತಕ್ಕೆ ಬಿಡುತ್ತೀರಿ? ಈ ರೀತಿ ಕೊಡುವುದನ್ನು ಮುಂದುವರಿಸಬಾರದು ಎಂದು ಕೋರ್ಟ್ ಆರ್ಡರ್ ಆಗಿದೆ. ಲಕ್ಷ್ಮೀಸಾಗರ್‌ರವರಿಂದ ನೇರವಾಗಿ ಆರ್ಡರ್ ಆಗಿದೆ, ಅಂತಹದರಲ್ಲೂ ಕೂಡಾ ಇವರು, ಹಣ ಇದ್ದಂಥ ಕೆಲವು ಜನರ ಬಲೆಗೆ ಬಿದ್ದು ಇವುಗಳನ್ನು ೫-೬ ಸಾವಿರ ರೂಪಾಯಿ ಬಾಡಿಗೆಗೆ ಕೊಡುತ್ತಾರಲ್ಲ. ಇದನ್ನು ಒಂದೊಂದನ್ನು ಮಾರಿದರೂ ಕೂಡಾ ೧೦ ಲಕ್ಷ ರೂಪಾಯಿ ಬರುತ್ತದೆ. ಇದನ್ನು ರೆಗ್ಯುಲರ್ ಆಗಿ ಅವರಿಗೆ ಕೊಟ್ಟರೂ ಸಹಿತ, ಇದರಿಂದ ಬರುವ ಹಣದಲ್ಲೇ ಗದಗ್ ವಾಟರ್ ಸಪ್ಲೈ ಸ್ಕೀಮ್ ಪೂರ್ತಿಯಾಗಿ ನೀರು ಬಂದು ಆ ಜನರಿಗೆ ಟ್ಯಾಕ್ಸ್ ಇಲ್ಲದೇ ನೀರು ಸಿಗುತ್ತದೆ. ಅವರ ಹೊಟ್ಟೆ ತಣ್ಣಗಾಗುತ್ತದೆ. ಇದನ್ನು ಮಾಡುವುದಕ್ಕೆ ನಿಮಗೆ ಯಾರಿದ್ದರೇನು?

ಇದನ್ನು ಮಾಡುವುದಕ್ಕೆ ಯಾವ ಶಾಸಕರು ಇದ್ದರೇನು, ನಾನು ಇದ್ದರೇನು ಮತ್ತೊಬ್ಬರಿದ್ದರೇನು ? ಯಾರು ಒಳ್ಳೆಯ ಕೆಲಸ ಮಾಡುತ್ತಾರೆ ಯಾರು ಅದನ್ನು ವಿರೋಧಮಾಡುತ್ತಾರೆಂದು ನಿಮಗೆ ಗೊತ್ತಾಗುವುದಿಲ್ಲವೇ ? ಜನರ ಸೇವೆಯನ್ನು ಮಾಡುವಾಗ ವಿರೋಧ ಎಲ್ಲಿ ಬರುತ್ತದೆ. ನಾನು

ಚಲೋ ಕೆಲಸ ಮಾಡದಿದ್ದರೆ ನನ್ನ ವಿರುದ್ಧವಾಗಿ ನಾಲ್ಕು ಕೆಲಸ ಮಾಡಿಸಿ ಸಂತೋಷ. ಒಳ್ಳೆಯ ಕೆಲಸಕ್ಕೆ ಹಿಂದೇಟು ಹಾಕುವುದು ಬೇಡ. ಇವತ್ತು ಗದಗ್ ಮುನಿಸಿಪಾಲಿಟಿ ಒಳಗೆ ಮಿಸ್‌ಅಪ್ರೊಪ್ರಿಯೇಷನ್ ಆಗಿದೆ ಹಣ ಮಿಸ್ ಅಪ್ರೊಪ್ರಿಯೇಷನ್ ಆಗಿ ಬಹಿರಂಗವಾಗಿ ಒಂದು ವರ್ಷವಾದ ಮೇಲೆ ಎಚ್ಚರ ವಹಿಸಿದ್ದಾರೆ. ಕೋರ್ಟ್‌ನಲ್ಲಿ ಕ್ರಿಮಿನಲ್ ಕೇಸ ಹಾಕಿದ್ದಾರೆ. ಪೋಲೀಸರ ಕಡೆಗೆ ಪರಿಸ್ಥಿತಿಯ ಎನ್‌ಕ್ವೈರಿಗೆ ಕಳಿಸಿದ್ದಾರೆ. ನಾನು ಮುನಿಸಿಪಾಲಿಟಿಯನ್ನೇ ಸಸ್ಪೆಂಡ್ ಮಾಡಿ ಎಂದು ಹೇಳುವುದಿಲ್ಲ, ಅಲ್ಲಿಯ ಪ್ರೆಸಿಡೆಂಟ್‌ರವರು ಬಹಳ ಒಳ್ಳೆಯವರಾಗಿದ್ದಾರೆ ಅವರು ನಿಮ್ಮ ಪಾರ್ಟಿಯವರೇ ಆಗಿದ್ದಾರೆ. ಅವರು ಬಗ್ಗೆ ನನ್ನದೇನೂ ತಕರಾರು ಇಲ್ಲ. ಅವರಿಗೆ ತಿಳಿಯದಂತೆ ಇವರು ಸಹಿ ಮಾಡಿಸಿಕೊಂಡಿದ್ದಾರೆ. ನಂತರ ಕೋರ್ಟಿನಲ್ಲಿ ಫಿರ್ಯಾದು ಹಾಕಿದ್ದಾರೆ, ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಒಳಸೋಟಕ್ಕೆ ತಿಳಿಯುವುದಿಲ್ಲ ಹೊರಗಿನ ಹಾವಭಾವಕ್ಕೆ ಒಳಗಾಗಿ ಅನೇಕ ಸಲ ಮೋಸ ಹೋಗುತ್ತೇವೆ ಪಕ್ಷದ ಡ್ರೆಸ್ ಹಾಕಿಕೊಂಡು ಮೋಸವಾಗುವ ಸಂದರ್ಭ ಉಂಟು. ಇದೆಲ್ಲವನ್ನೂ ಬಿಟ್ಟು ಸಾರ್ವಜನಿಕ ಸೇವೆಯನ್ನು ಮಾಡುವಂತಹ ದೃಷ್ಟಿಯಿಂದ ನೋಡಬೇಕು. ಅನೇಕ ಸಂದರ್ಭಗಳಲ್ಲಿ ಮಾನ್ಯ ಹೆಗಡೆಯವರು ಕೇಂದ್ರ ಸರಕಾರವನ್ನು ಜರೆದಿದ್ದಾರೆ. ಇವತ್ತು ಕೇಂದ್ರ ಸರಕಾರ ತೆಗೆದುಕೊಂಡಂತಹ ನಿಲುವನ್ನು ಹೇಳಬೇಕಾದಂತಹ ಸಂದರ್ಭ ಬಂದಿದೆ ಎಜುಕೇಷನ್ ಬಗ್ಗೆ ಅವರು ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಜೀವರಾಜ್ ಆಳ್ವರವರು ಇಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಅವರು ಇಲ್ಲ. ಕೇಂದ್ರ ಸರಕಾರ ಇವತ್ತು ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾದರಿ ಪದ್ಧತಿಯ ಮೇಲೆ ನವೋದಯ ಶಾಲೆಗಳನ್ನು ಕೊಡಬೇಕೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಎಲ್ಲರಿಗೂ ವಿದ್ಯೆ ಮುಟ್ಟಬೇಕೆಂದು ಮಾಡಿದ್ದಾರೆ. ಆದರೆ ಅದರ ಬಗ್ಗೆ ನಿಮ್ಮ ಬಜೆಟ್‌ನಲ್ಲಿ ಏನಾದರೂ ಇದೆಯೇ ? ಇಷ್ಟು ಗ್ರ್ಯಾಂಟ್ ಬರುತ್ತದೆ ಇಷ್ಟು ಹಣವನ್ನು ತೆಗೆದುಕೊಳ್ಳುವಂತಹ ಯೋಜನೆ ಇದೆ ಎಂದು ಏನಾದರೂ ಇದೆಯೇ ? ೩೫ ಯೋಜನೆಗಳನ್ನು ಹಾಕಿದ್ದೀರಿ. ಗಟಾರ ಕಟ್ಟಿಸುತ್ತೇವೆ, ಕಲಾಭವನ ಕಟ್ಟಿಸುತ್ತೇವೆಂದು ಹೇಳಿದ್ದೀರಿ ಇದರ ಬಗ್ಗೆ ಒಂದು ಮಾತನ್ನೂ ಕೂಡ ಹೇಳಿಲ್ಲ. ರಾಜ್ಯ ಸರಕಾರದವರು ನಮ್ಮನ್ನು ರಕ್ಷಣೆ ಮಾಡುವ ಭಾರವನ್ನು ಹೊತ್ತಿದ್ದೀರಿ ನಾವು ಹೆಣ್ಣು ಮಕ್ಕಳಿಗಾಗಿ ಈ ವರ್ಷ ಇಡೀ ರಾಜ್ಯದಲ್ಲಿ ನೂರಾದರೂ ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್ ಕಟ್ಟಿಸುತ್ತೇವೆ ಎಂದು ಹೇಳಬಹುದಾಗಿತ್ತು. ಕೇಂದ್ರ ಸರಕಾರದ ಮಂತ್ರಿಗಳಾದ ಮಾರ್ಗರೇಟ್ ಆಳ್ವರವರು ನಮ್ಮನ್ನು ಕರೆದು ಪಕ್ಷ ಭೇದ ಬೇಡ, ನಿಮ್ಮಲ್ಲಿ ಯಾವ್ಯಾವ ಸ್ಕೀಮ್‌ಗಳು ಇವೆ ಕಳಿಸಿಕೊಡಿ ಸ್ಯಾಂಕ್ಷನ್ ಮಾಡಿಸುತ್ತೇನೆಂದು ಹೇಳಿದರು. ಅಲ್ಲಿಗೆ ಕಳಿಸಿದರೆ ೧೫ ದಿವಸದಲ್ಲಿ ಸ್ಯಾಂಕ್ಷನ್ ಆಗಿ ಬರುತ್ತದೆ. ಸ್ಪೋರ್ಟ್ಸ್ ಬಗ್ಗೆ ತಮಗೆ ಬಹಳ ಕಳಕಳಿ ಇದೆ. ಆಸ್ಥೆ ವಹಿಸಿ ಕೆಲಸ ಮಾಡುತ್ತಿದ್ದೀರಿ ಸ್ಟೇಡಿಯಂ ಮಾಡುತ್ತೇವೆಂದು ಹೇಳುತ್ತಿದ್ದೀರಿ. ತಾಲ್ಲೂಕಿಗೊಂದು ರಂಗಮಂದಿರ ಕಟ್ಟಿಸುತ್ತೇವೆಂದು ಹೇಳಿದಿರಿ, ಆದರೆ ಒಂದಾದರೂ ರಂಗ ಮಂದಿರವನ್ನು ಕಟ್ಟಿಸಿದ್ದೀರಾ? ತಾಲ್ಲೂಕಿಗೊಂದು ಕಟ್ಟಿಸದಿದ್ದರೂ ಕೂಡ ೩೫ ಜನ ಮಂತ್ರಿಗಳು ಏನು ಇದ್ದೀರಿ. ಅವರ ತಾಲ್ಲೂಕಿನಲ್ಲಿ ಒಂದೊಂದು ಮಾಡಿದರೂ ಕೂಡ ನಮ್ಮ ರಾಜ್ಯದ ಕಲ್ಯಾಣವಾಗುತ್ತದೆ. ವಿರೋಧ ಪಕ್ಷದವರನ್ನು ಬಿಟ್ಟುಬಿಡಿ ಇಷ್ಟು ಮಾಡಿದರೂ ಕೂಡ ಎಷ್ಟೋ ಕಲ್ಯಾಣವಾಗುತ್ತದೆ. ಹಿಂದೆ ಕೆ. ಹೆಚ್. ಪಾಟೀಲ್ ರವರು ಏನೋ ಬೇಡುತ್ತಾರೆಂದು ರಂಗಮಂದಿರಕ್ಕೆ ೫೦ ಸಾವಿರ ಕೊಟ್ಟಿರಿ ಅಷ್ಟು ಹಣದಲ್ಲಿ ಇವತ್ತು ಬಾಡಿಗೆ ಸಿಗುವುದಿಲ್ಲ ಆ ಹಣ ಬ್ಯಾಂಕ್‌ನಲ್ಲಿ ಹಾಗೇ ಇದೆ ಅದನ್ನು ಮತ್ತೆ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ ಇಲ್ಲವೇ ಹೆಚ್ಚು ಮಾಡುವುದಾದರೆ ಮಾಡಿ. ಯುವಕ ಹಾಸ್ಟೆಲ್ಸ್‌ಗಳನ್ನು ಕಟ್ಟಿಕೊಡಲು ಕೇಂದ್ರ ಸರಕಾರದವರು ಖರ್ಚು ಮಾಡುತ್ತಿದ್ದಾರೆ ಅದಕ್ಕೆ ನೀವೇನೂ ಕೊಡಬೇಕಾಗಿಲ್ಲ. ಈಗ ಲ್ಯಾಂಡ್ ಖರೀದಿ ಮಾಡುವುದಕ್ಕೂ ಕೂಡ ಹಣ ಕೊಡಬೇಕೆಂದಿದ್ದಾರೆ. ರಾಜೀವ್‌ಗಾಂಧಿಯವರು ಇಂತಹ ಸ್ಕೀಮ್‌ಗಳನ್ನು ಮಾಡಿದ್ದಾರೆಂದು ತೆಗೆದುಕೊಳ್ಳದೇ ಹಾಗೆ ಬಿಟ್ಟರೆ ನಮ್ಮ ಜನರಿಗೆ ಈ ಕಾರ್ಯಕ್ರಮಗಳು ಮುಟ್ಟುವುದಿಲ್ಲ. ಇನ್ನು ಮಾನ್ಯ ವೀರಣ್ಣನವರು ನ್ಯಾಷನಲ್ ಸ್ಕೀಮ್ ಬಗ್ಗೆ ಹೇಳುತ್ತಾರೆ ನಿಮಗೆ ರೊಕ್ಕ ಕಡಿಮೆಯಾಗಿದೆ ಎಂದು ಹೇಳುತ್ತಿದ್ದೀರಿ ಅದರ ಜೊತೆಯಲ್ಲಿ ಇದನ್ನೂ ಕೂಡ ಏಕೆ ತೆಗೆದುಕೊಳ್ಳುವುದಿಲ್ಲ. ಕೇಂದ್ರ ಸರಕಾರದಿಂದ ಬರತಕ್ಕಂತಹ ಸೌಲಭ್ಯಗಳನ್ನು ಅದರೆ ಅದು ಸ್ಪೋರ್ಟ್ಸ್‌ಗೆ ಇರಬಹುದು ಇಲ್ಲವೇ ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್‌ಗೆ ಇರಬಹುದು, ಇಲ್ಲವೇ ಯೂತ್ ಕ್ಲಬ್‌ಗಳನ್ನು ಮಾಡಲು ಕೊಡುತ್ತಿರಬಹುದು ಅದನ್ನು ನೀವು ಉಪಯೋಗ ಮಾಡಿಕೊಂಡು ನಮ್ಮ ಜನರಿಗೆ ಅನುಕೂಲ ಮಾಡಿಕೊಡಿ.

ಶ್ರೀ ಬಿ. ಡಿ. ಬಸವರಾಜ್.—ಈ ಸಾರಿ ಬರಗಾಲ ಬಂದದ್ದರಿಂದ ಅಂಗನವಾಡಿ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದು ಮಾನ್ಯ ಬಸವಣ್ಯೆಪ್ಪನವರು ಹೇಳಿದ್ದಾರಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ನನಗೆ ತಿಳಿದ ಮಟ್ಟಿಗೆ ರಾಜ್ಯ ಸರ್ಕಾರ ಯಾವುದೇ ಕಲ್ಯಾಣ ಕಾರ್ಯಕ್ರಮಗಳಿಗೆ ಸರಿಯಾಗಿ ಹಣ ಖರ್ಚು ಮಾಡುತ್ತಿಲ್ಲ.

ಶ್ರೀ ಬಿ.ಡಿ, ಬಸವರಾಜ್.—ಅಂಗನವಾಡಿ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದ ಹಣದಲ್ಲಿ ರಾಜ್ಯ ಸರ್ಕಾರ ಅರ್ಧದಷ್ಟು ಕೊಡಬೇಕು. ಇನ್ನು ಉಳಿದ ಅರ್ಧ ಹಣವನ್ನು ಕೇಂದ್ರ ಸರ್ಕಾರ ಕೊಡಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಅಂಗನವಾಡಿ ಕೇಂದ್ರಗಳ ಬಿಲ್ಡಿಂಗ್‌ನ್ನು ಕಟ್ಟುವುದಕ್ಕೆ ರಾಜ್ಯ ಸರ್ಕಾರವೇ ಹಣವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ರಾಜವರ್ಧನ್‌ರವರೇ, ಏನು ಮಾಡುತ್ತಿದ್ದೀರಿ? ನೀವು ನೋಡುವುದಕ್ಕಾಗುವುದಿಲ್ಲವೆ? ನೋಡಿ ಅವರು ಮಧ್ಯದಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆ ರೀತಿ ಮಾತನಾಡಬಾರದೆಂದು ನೀವು ಹೇಳಬೇಕು.

ಶ್ರೀ ಕೆ. ಹೆಚ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಇದ್ದು ಮಾನ. ಮೊಯಿಲಿಯವರು ಅರ್ಥ ಸಚಿವರಾಗಿದ್ದಾಗ ಮಲಪ್ರಭಾ, ತುಂಗಭದ್ರಾ ಸ್ಕೀಮುಗಳು ಆದವು. ಮಲಪ್ರಭಾ ಯೋಜನೆ ಮಾಡಿದ ಮೇಲೆ ಅಲ್ಲಿನ ಭೂಮಿಯಲ್ಲಿ ಚೌಗು ಇದ್ದದ್ದನ್ನು ಸರಿ ಮಾಡುವುದಕೆ ಒಂದು ಕಮಿಟಿಯನ್ನು ನೇಮಕ ಮಾಡಲಾಗಿತ್ತು. ಆ ಕಮಿಟಿಯವರು ರಿಪೋರ್ಟ್ ಕೊಟ್ಟಿದ್ದಾರೆ. ಆದರೆ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ಕಮಿಟಿಯನ್ನು ಮಾನ್ಯ ಎಂ.ಪಿ. ಪಾಟೀಲರವರ ನೇತೃತ್ವದಲ್ಲಿ ರಚನೆ ಮಾಡಲಾಗಿತ್ತು, ಕಮಿಟಿಯನ್ನು ರಚನೆ ಮಾಡುವುದು ಏತಕ್ಕೆ? ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಕಮಿಟಿಯನ್ನು ನೇಮಕ ಮಾಡಲಾಗುತ್ತದೆ. ಕಮಿಟಿಯವರು ವರದಿ ಕೊಟ್ಟರೆ ಆ ವರದಿಯ ಪ್ರಕಾರ ಕಾರ್ಯಕ್ರಮಗಳನ್ನು ಈ ಜನತಾ ಸರ್ಕಾರದವರು ಏಕೆ ತೆಗೆದುಕೊಳ್ಳುವುದಿಲ್ಲವೆಂದು ನಾನು ಕೇಳಬೇಕಾಗುತ್ತವೆ, ಈಗ ಎಜುಕೇಷನ್ ಬಗ್ಗೆ ಮಾತನಾಡುವುದಾದರೆ, ಶ್ರೀಮಾನ್ ಜೀವರಾಜ ಆಳ್ವರವರು ನಮ್ಮ ರಾಜ್ಯದಲ್ಲಿ 23 ಇಪ್ಪತ್ತೆರಡೋ ಅಥವಾ ಇಪ್ಪತ್ತಮೂರೋ ಪಾಲಿಟೆಕ್ನಿಕ್ ಕಾಲೇಜುಗಳು ಸರಿಯಾದ ಸೌಲಭ್ಯಗಳನ್ನು ಹೊಂದಿರದೇ ಇದ್ದುದರಿಂದ ಅವುಗಳ ಮಾನ್ಯತೆಯನ್ನು ರದ್ದು ಮಾಡಲಾಗಿದೆಯೆಂದು ಹೇಳಿದ್ದಾರೆ. ಪಾಲಿಟೆಕ್ನಿಕ್ ಕಾಲೇಜುಗಳಿಗೆ ಮನ್ನಣೆ ಕೊಡುವುದಕ್ಕಿಂತ ಮುಂಚಿತವಾಗಿ ಆ ಕಾಲೇಜುಗಳು ಸರಿಯಾದ ಸೌಲಭ್ಯಗಳನ್ನು ಹೊಂದಿವೆಯೋ ಇಲ್ಲವೇ ಎಂಬುದನ್ನು ತಿಳಿದುಕೊಂಡು ಮನ್ನಣೆ ಕೊಡಬೇಕಾಗಿತ್ತು. ಸೌಲಭ್ಯಗಳನ್ನು ಹೊಂದಿರದೇ ಇರುವ ಕಾಲೇಜುಗಳಿಗೆ ಮನ್ನಣೆ ಕೊಟ್ಟರೆ ಸಮಾಜ ಕಲ್ಯಾಣವಾಗುತ್ತದೆಯೇ? ರಾಜಕೀಯ ಒತ್ತಡಗಳಿಗೆ ಮಣಿದು ಈ ತರಹ ಮನ್ನಣೆ ಕೊಡುವುದು ಸರಿಯಲ್ಲ, ಇದೇ ರೀತಿ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಿಗೂ ಕೂಡ ಮನ್ನಣೆ ಕೊಟ್ಟಿದ್ದೀರಿ. ನೀವು ಮನ್ನಣೆ ಕೊಟ್ಟಿರುವ ಅನೇಕ ಇಂಜಿನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸರಿಯಾದ ಸೌಲಭ್ಯಗಳೇ ಇಲ್ಲವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಮೆಡಿಕಲ್ ಕಾಲೇಜು ಮತ್ತು ಇಂಜಿನೀಯರಿಂಗ್ ಕಾಲೇಜುಗಳನ್ನು ಸ್ಥಾಪನೆ ಮಾಡುವವರು ಜನರಿಗೆ ವಿದ್ಯಾಭ್ಯಾಸ ಕೊಡುವುದಕ್ಕಲ್ಲ. ಅವರು ಹಣ ಮಾಡಿಕೊಳ್ಳುವುದಕ್ಕೋಸ್ಕರ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾರೆ. ಇದು ಸರಿಯಲ್ಲ. ಇವತ್ತಲ್ಲ ನಾಳೆ ಇಂಥ ಕಾಲೇಜುಗಳಿಂದ ಬಹಳ ತೊಂದರೆಯನ್ನು ಸರ್ಕಾರ ಎದುರಿಸಬೇಕಾಗುತ್ತದೆ. ಯಾವುದಾದರೂ ಒಂದು ಕಾಲೇಜಿಗೆ ಅನುಮತಿ ಕೊಡಬೇಕಾದರೆ ಮೊದಲು ಆ ಕಾಲೇಜು ಸಾಕಷ್ಟು ಸಾಮಗ್ರಿಗಳನ್ನು ಹೊಂದಿರುವುದೇ ಎಂಬುದನ್ನು ಪರೀಕ್ಷೆ ಪರೀಕ್ಷೆ ಮಾಡಬೇಕು. ಸಾಕಷ್ಟು ಮಟ್ಟದಲ್ಲಿ ಸಾಮಗ್ರಿಗಳು ಹೊಂದಿರದೇ ಇದ್ದರೆ ಯಾವುದಾದರೂ ರೂಪದಲ್ಲಿ ಗ್ರಾಂಟ್‌ನ್ನು ಕೊಟ್ಟು ಸಾಮಗ್ರಿಗಳನ್ನು ಒದಗಿಸಿಕೊಳ್ಳುವುದಕ್ಕೆ ಸಹಾಯ ಮಾಡಬೇಕು. ಗ್ರಾಂಟ್ ಕೊಡುವುದಕ್ಕೆ ಆಗದಿದ್ದರೆ ಅಂಥ ಕಾಲೇಜುಗಳನ್ನು ಬಂದ್ ಮಾಡಬೇಕು. ಆಮೇಲೆ, ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಇನ್ನು ಮುಂದೆ ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡುವುದನ್ನು ತೆಗೆದುಹಾಕಿದ್ದೇವೆಂದು ಹೇಳಿದ್ದಾರೆ. ಇದನ್ನು ಕೇಳಿ ನನಗೆ ಸಂತೋಷವಾಯಿತು. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಕ್ಯಾಪಿಟೇಷನ್ ಶುಲ್ಕವನು

ನಿಶ್ಚಿತವಾಗಿ ಬಂದ್ ಮಾಡಬೇಕು ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡದೇ ಇದ್ದರೆ ಯಾವ ಕಾಲೇಜು ನಡೆಯುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಾಲೇಜುಗಳಿಗೆ ಸರ್ಕಾರ ಯಾವುದಾದರೂ ಮೂಲದಿಂದ ಗ್ರ್ಯಾಂಟ್ ಬರುವ ಹಾಗೆ ಮಾಡಿ ಕಾಲೇಜುಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು, ಖಾಸಗಿಯವರು ಕಾಲೇಜುಗಳನ್ನು ನಡೆಸುವುದಕ್ಕೆ ಅಸಮರ್ಥರಾದರೆ ಸರ್ಕಾರವೇ ಅಂಥ ಕಾಲೇಜುಗಳನ್ನು ವಹಿಸಿಕೊಂಡು ನಡೆಸಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಹಾಕುವುದು ಲಂಚ ನಿರ್ಮೂಲನೆ ಮಾಡುವುದಕ್ಕೆ ಎಷ್ಟು ಕಷ್ಟವಾಗುತ್ತದೆಯೋ ಅಷ್ಟೇ ಕಷ್ಟವಾಗುತ್ತದೆ. ಈ ಮೇಲೆ ಅನೇಕ ಸಂದರ್ಭಗಳಲ್ಲಿ ಹಿಂದಿನ ಸರ್ಕಾರ ಕೊಟ್ಟಂಥ ವಚನಗಳನ್ನು ಈ ಸರ್ಕಾರ ಪಾಲನೆ ಮಾಡುತ್ತಿಲ್ಲ. ಹಿಂದಿನ ಸರ್ಕಾರ ಕೊಟ್ಟಿರುವ ವಚನಗಳನ್ನು ನೀವು ಪಾಲನೆ ಮಾಡದೇ ಇದ್ದರೆ ಅದಕ್ಕೆ ಪಾವಿತ್ರ್ಯತೆ ಉಳಿಯುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಪಕ್ಷ ಬದಲಾವಣೆಯಾದರೆ ಸ್ಥಾನ ಬದಲಾವಣೆಯಾಗುವುದಿಲ್ಲ.

ಮಾನ್ಯ ಮೊಯಿಲಿಯವರು ಹಿಂದಿನ ಸರ್ಕಾರ ಇದ್ದಾಗ, ಅನೇಕ ಶಾಲಾ ಕಾಲೇಜುಗಳಿಗೆ ಮೂರು ವರ್ಷಗಳ ಕಾಲದ ನಂತರ, ಐದು ವರ್ಷಗಳ ನಂತರ ಗ್ರಾಂಟ್ ಕೊಡುತ್ತೇವೆ. ಎಂದು ಏನು ಹೇಳಿದ್ದರೋ ಅದನ್ನು ನೀವು ಕೊಡುತ್ತಾ ಇಲ್ಲ. ನಿಮಗೆ ಆ ಒಂದು ಶಕ್ತಿ ಇಲ್ಲದಿದ್ದರೆ ತಾಳಿ ಭಾಗ್ಯ ಮುಂತಾದ ಅತ್ಯಾವಶ್ಯಕವಲ್ಲದ ಯೋಜನೆಗಳು ಏಕೆ ಬೇಕು? ಮೊನ್ನೆಯೂ ಸಹ ತಾಳಿಭಾಗ್ಯ ಇದೆ ಎಂದು ಹೇಳಿದ್ದಾರೆ. ಗದಗದಲ್ಲಿ ಈ ಯೋಜನೆ ಮೇರೆಗೆ ಲಗ್ನ ಮಾಡುವ ಏರ್ಪಾಡು ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರಂತೆ ನಾನು ನಮ್ಮ ಬಿ.ಡಿ.ಓ.ರವರಿಗೆ ಹೇಳಿದೆ. ಅವರು ನಮ್ಮಲ್ಲಿ ಗ್ರಾಂಟ್ಸ್ ಇಲ್ಲ ಎಂದು ಹೇಳಿದರು. ಈ ಬಗ್ಗೆ ಹಣಕ್ಕಾಗಿ ಸರಕಾರಕ್ಕೆ ಟೆಲೆಕ್ಸ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಹಾಗೆ ಕಳುಹಿಸಿದ್ದಾರೋ ಇಲ್ಲವೊ ನನಗಂತೂ ಗೊತ್ತಿಲ್ಲ. ಅಂತೆಯೇ ಸೀರೆ ಕೊಡುತ್ತೇವೆಂದು ಹೇಳಿದ್ದೀರಿ. ಮತ್ತು ಮಕ್ಕಳಿಗೆ ಯುನಿಫಾರ್ಮ್ ಕೊಡುವ ವಿಚಾರ. ಎಲ್ಲಾ ವರ್ಗದವರಿಗೂ ಯೂನಿಫಾರ್ಮ್ ಕೊಡುತ್ತಿದ್ದೀರಿ, ನನ್ನ ಮಕ್ಕಳಿಗೂ ಸಿಗುತ್ತದೆ. ಶ್ರೀಮಂತ ವರ್ಗದವರಿಗೂ ಸಿಗುತ್ತದೆ, ಏಕೆ ಈ ರೀತಿಯಲ್ಲಿ ಇದನ್ನು ಎಲ್ಲರಿಗೂ ಕೊಡುತ್ತಿದ್ದೀರಿ? ರಾಮಕೃಷ್ಣ ಹೆಗಡೆ ಸರಕಾರದವರು ನಮಗೆ ಯೂನಿಫಾರ್ಮ್ ಕೊಟ್ಟರು ಎಂದು ನಿಮ್ಮನ್ನು ಹೊಗಳಬೇಕೆಂದು ಹೀಗೆ ಕೊಟ್ಟಿದ್ದೀರಾ? ನೀವು ಹಾಗೆ ಕೊಟ್ಟ ಬಟ್ಟೆಯ ಸದುಪಯೋಗ ಆಗುತ್ತಿದೆಯೇ? ಶ್ರೀಮಂತರ ಮಕ್ಕಳು ಮನೆಗೆ ಬಂದಕೂಡಲೇ ಅದನ್ನು ಕಿತ್ತು ಒಗೆದು ಬಿಡುತ್ತಾರೆ. ನೀವು ಹೀಗೆ ಬಿಸಾಡುವುದಕ್ಕೋಸ್ಕರವಾಗಿ ಶ್ರೀಮಂತ ವರ್ಗದವರಿಗೂ ಈ ಬಟ್ಟೆಯನ್ನು ಕೊಡುತ್ತೀರಾ? ಇದಕ್ಕೋಸ್ಕರವಾಗಿ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿರುವ ನಿಮಗೆ, ನಿಮಗಿಂತ ಪಾಪಿಗಳು ಬೇರೆ ಯಾರೂ ಇಲ್ಲ ಎಂದು ನಾನು ಹೇಳ ಬೇಕಾಗುತ್ತದೆ. ಕಾರಣ, ಯಾರು ಬಡವರ್ಗದವರು ಇದ್ದಾರೆ ಅವರಿಗೆ ಅಗತ್ಯವಾಗಿ ಕೊಡಿ. ಆದರೆ ಶ್ರೀಮಂತರಿಗೆ, ಉಳ್ಳವರಿಗೆ ಈ ರೀತಿಯಲ್ಲಿ ಹಣವನ್ನು ಖರ್ಚು ಮಾಡಿದರೆ ನಮಗೆ ನಾನು ಏನೆಂದು ಹೇಳಬೇಕು? ನಿಮಗೆ ನಿಜವಾಗಿ ಬಡವರ್ಗದವರಿಗೆ ಇಂತಹ ಸೌಲಭ್ಯಗಳನ್ನು ಮುಟ್ಟಿಸಬೇಕೆಂದಿದ್ದರೆ ಖಂಡಿತವಾಗಿ ಅವರಿಗೆ ಮುಟ್ಟಿಸಿ, ನನ್ನ ಅಭ್ಯಂತರ ಇಲ್ಲ.

ಶಾಲಾಮಕ್ಕಳಿಗೆ ಪಾಠ ಪುಸ್ತಕಗಳನ್ನು ಕೊಡುವ ಒಂದು ವಿಚಾರ. ಇದರ ಹಣೆಬರಹ ಏನಾಗಿದೆ ಎಂದು ಗೊತ್ತಿದೆಯೇ? ನೀವು ಕೊಟ್ಟ ಪುಸ್ತಕಗಳನ್ನು ಮಕ್ಕಳು ಎರಡು ತಿಂಗಳಲ್ಲಿ ಹರಿದು ಬಿಡುತ್ತಾರೆ. ಹೀಗೆ ಹರಿದು ಹೋದ ಕಾರಣದಿಂದಾಗಿ ತಿರುಗಿ ಓದುವುದಕ್ಕೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂದರೆ ಅಂಗಡಿಯಲ್ಲಿಯೂ ಈ ಪುಸ್ತಕಗಳ ಲಭ್ಯ ಇಲ್ಲ. ನೀವು ಎರಡನೇ ಬಾರಿಗೆ ಪುಸ್ತಕವನ್ನು ಕೊಡುವುದಿಲ್ಲ, ಹಾಗೆ ಕೊಡುವುದಕ್ಕೆ ನಿಮ್ಮಲ್ಲಿ ಹಣವೂ ಇಲ್ಲ, ಹೀಗಾಗಿ ಪುಸ್ತಕವಿಲ್ಲದೇ ಮಕ್ಕಳು ಅವಿವೇಕಿಗಳಾಗುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ನೀವು ಹೀಗೆ ಪುಸ್ತಕ ಕೊಟ್ಟಿದ್ದಕ್ಕಾಗಿ ಜನರು ನಿಮ್ಮನ್ನು ಮೆರವಣಿಗೆ ಮಾಡುತ್ತಾರೆ ಎಂದು ನೀವು ತಿಳಿದುಕೊಂಡಿದ್ದೀರಾ? ಹಾಗೆ ಜನರು ಮಾಡುವುದಿಲ್ಲ. ಬೇಕಾದರೆ ನೀವು ಯಾವುದಾದರೂ ಅಧಿಕಾರಿಯನ್ನು ಅವನು ಕೇಳಿದ ಕಡೆ ವರ್ಗಾವಣೆ ಮಾಡಿದರೆ, ಅವನು ನಿಮ್ಮನ್ನು ಮೆರವಣಿಗೆ ಮಾಡಿಸುತ್ತಾನೆ. ಆದುದರಿಂದ ಯಾವ ಯೋಜನೆ ಬೇಕೋ ಅವುಗಳನ್ನು ಮಾತ್ರ ಮಾಡಿ.

ಯಾವುದೇ ಸ್ಕೀಮುಗಳನ್ನು ಮಾಡುವಾಗ ಅದರಿಂದ ಬಹಳಷ್ಟು ಜನರಿಗೆ ಕಲ್ಯಾಣ ಆಗುತ್ತದೆ ಎನ್ನುವುದಾದರೆ ಅದನ್ನು ಮಾಡಿ, ಬೇಡ ಎನ್ನುವುದಿಲ್ಲ. ಈಗ ನೀವು ಕುಡಿಯುವ ನೀರಿನ ಒಂದು ಯೋಜನೆಯನ್ನು ಮಾಡಿದ್ದೀರಿ. ಅದು ಬಹಳ ಉಪಯುಕ್ತವಾದಂಥ ಯೋಜನೆ. ಬಹಳ

ಒಳ್ಳೆಯ ಯೋಜನೆ ಆದಾಗಿದೆ. ಅದಕ್ಕಾಗಿ ಎಷ್ಟೇ ಖರ್ಚಾಗಲಿ ಅದನ್ನು ಬೇಡ ಎನ್ನುವುದಿಲ್ಲ, ಅಲ್ಲಿ ಎಷ್ಟೇ ಅಪವ್ಯಯವಾದರೂ ಅಡ್ಡಿ ಇಲ್ಲ, ಅದು ಜನೋಪಯುಕ್ತ ಎಂದು ಅಂತಹ ಯೋಜನೆಯನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಆ ಯೋಜನೆಯಡಿಯಲ್ಲಿ ಅನೇಕ ಹಳ್ಳಿಗಳಲ್ಲಿ ನೀವು ಬೋರ್ ವೆಲ್‌ಗಳನ್ನು ಕೊಟ್ಟಿದ್ದೀರಿ, ಆದರೆ ಅವುಗಳಿಗೆ ಸರಿಯಾಗಿ ಪಂಪ್‌ಗಳನ್ನು ಹಾಕಿಸಿಲ್ಲ. ಕೆಲವು ಕಡೆ ವಿದ್ಯುಚ್ಛಕ್ತಿಯ ವ್ಯವಸ್ಥೆ ಇಲ್ಲ. ಕೆಲವು ಕಡೆಗಳಲ್ಲಿ ೧೫೦ ಅಡಿ ಆಳವಿರುವ ಬಾವಿಗೆ ಕೈಪಂಪ್‌ನ್ನು ಜೋಡಿಸಿದ್ದೀರಿ, ಅಷ್ಟು ಆಳ ನೀರು ಇರುವ ಬಾವಿಯ ಕೈಪಂಪ್‌ನ್ನು ಹೊಡೆಯುವುದಕ್ಕೆ ಎಷ್ಟು ಕಷ್ಟವಾಗಬಹುದು ಎಂದು ತಿಳಿದು ಕೊಂಡಿದ್ದೀರಾ? ಇಂತಹ ಬಾವಿ ನಮಗೆ ಏತಕ್ಕಾದರೂ ಬಂತು ಎಂದು ಹೇಳಿಕೊಳ್ಳುವ ಪರಿಸ್ಥಿತಿಯು ಬಂದಿದೆ.

ಇನ್ನು ರಾಜ್ಯದಲ್ಲಿ ೩-೪ ವರ್ಷಗಳಿಂದ ನಮ್ಮ ಪಿ.ಡಬ್ಲ್ಯೂ.ಡಿ. ಮತ್ತು ಇರಿಗೇಶನ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಎಫಿಶಿಯನ್ಸಿ ಬಗ್ಗೆ ನಿಮಗೆ ಹೇಳುವುದಾದರೆ, ಒಂದು ಹಳ್ಳಿಗೆ ನೀರು ಕೊಡುವಂಥ ಒಂದು ಯೋಜನೆ ಪ್ರಾರಂಭವಾಗಿ ಮೂರು ವರ್ಷವಾದರೂ ಕೂಡ ಆ ಯೋಜನೆ ಪೂರ್ಣ ಆಗಲಿಲ್ಲ, ಹೀಗೆ ಮಾಡಿದರೆ ಯಾವ ರೀತಿಯಲ್ಲಿ ನಾವು ಪ್ರಗತಿಯ ದಾರಿಯಲ್ಲಿ ನಡೆದುಕೊಂಡು ಹೋಗುವುದಕ್ಕೆ ಆಗುತ್ತದೆ? ಪ್ರತಿಯೊಂದು ಯೋಜನೆಯ ಪರಿಸ್ಥಿತಿಯೂ ಹೀಗೆಯೇ ಇದೆ.

ಇನ್ನು ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ ಮಾನ್ಯ ಬೊಮ್ಮಾಯಿಯವರು ತಿಂಗಳಿಗೆ ೧೦೦೦ ಇಂಡಸ್ಟ್ರೀಗಳನ್ನು ಮಾಡುತ್ತೇವೆ ಎಂದು ಹೇಳಿದರು. ಹಾಗಾದರೆ ಇವೊತ್ತಿನ ತನಕ ಎಷ್ಟು ಇಂಡಸ್ಟ್ರೀಗಳನ್ನು ಮಾಡಿದ್ದೀರಿ ? ಈಗ ಕೇಳಿದರೆ ಅದಕ್ಕೆ ಏನು ಹೇಳುತ್ತಿದ್ದಾರೆ ಅಂದರೆ. ಒಂದು ಕೈಮಗ್ಗ ಇತ್ತು ಎಂದರೆ ಆ ಕೈಮಗ್ಗವನ್ನು ನೇಯುವವರು ಎಷ್ಟು ಜನರು ಇದ್ದಾರೋ ಅವರೆಲ್ಲರೂ ಒಂದು ಇಂಡಸ್ಟ್ರೀಗೆ ಒಳಪಟ್ಟವರು ಎಂದು ತಿಳಿದುಕೊಳ್ಳಬೇಕೆಂದು ಹೇಳುತ್ತಾರೆ. ಇವೊತ್ತಿನ ದಿವಸ ಇನ್ನೊಂದು ಮಾತನ್ನು ನಾನು ಇಲ್ಲಿ ಹೇಳಲೇ ಬೇಕಾಗಿದೆ. ಬಹಳಷ್ಟು ಇಂಡಸ್ಟ್ರೀಗಳು ಫೇಲ್ ಆಗುತ್ತಿವೆ ಎಂದು ಪತ್ರಿಕೆಗಳಲ್ಲಿ ನಾನು ಓದಿದ್ದೇನೆ. ಅದನ್ನು ನೋಡಿದಾಗ ನನಗೆ ಬಹಳ ಪ್ರಸನ್ನವಾಗುತ್ತಿದೆ. ನಮ್ಮಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ಫೇಲ್ ಆದವು. ಅವುಗಳು ಏಕೆ ಫೇಲ್ ಆದವು ಎಂದು ತಿಳಿದುಕೊಳ್ಳುವುದಕ್ಕೆ ನೀವು ಪ್ರಯತ್ನವನ್ನು ಮಾಡಿದ್ದೀರಾ? ಹಾಗೆ ಮಾಡುವುದಿಲ್ಲ. ನೀವು ಅದಕ್ಕಾಗಿ ಒಂದು ಉಪಸಮಿತಿಯನ್ನು ಮಾಡಿದ್ದೀರಿ. ಆದರೆ ಯಾವುದೇ ಇಂಡಸ್ಟ್ರೀಯನ್ನು ಮಾಡುವ ಮೊದಲು ಯೋಚನೆ ಮಾಡುವುದಿಲ್ಲ. ಈಗ ಗದಿಂಗಿನ ಹುಲಕೋಟಿಯಲ್ಲಿ ಒಂದು ಹಡಗು ಕಟ್ಟುವ ಕಾರ್ಖಾನೆಯನ್ನು ಮಾಡಿದರೆ ಹೇಗೆ? ಅಲ್ಲಿ ಆ ಕಾರ್ಖಾನೆ ಮಾಡುವುದು ಸಾಧ್ಯವೇ ಎಂದು ಯೋಚನೆ ಮಾಡುವುದಿಲ್ಲ. ಹಡಗು ಕಟ್ಟುವ ಕಾರ್ಖಾನೆಯನ್ನು ಸಮುದ್ರ ಇರುವ ಕಡೆಗಳಲ್ಲಿ ಮಾಡಬೇಕು. ಮಂಗಳೂರು, ಕಾರವಾರಗಳಲ್ಲಿ ಮಾಡಬೇಕು. ಅವರಿಗೆ ಮನಸ್ಸು ಇಲ್ಲದಿದ್ದರೂ ಆ ಕಾರ್ಖಾನೆಯನ್ನು ಮಾಡುವುದಿದ್ದಲ್ಲಿ ಅಲ್ಲಿಯೇ ಮಾಡಬೇಕು. ಹೀಗೆ ಮಾಡ ಬೇಕೇ ವಿನಹ ಅರ್ಥವಿಲ್ಲದ, ಸಾಧುವಲ್ಲದ ಯೋಜನೆಗಳನ್ನು ಮಾಡಿದರೆ ಅವುಗಳು ಫೇಲ್ ಆಗುತ್ತವೆ, ಕಬ್ಬು ಇಲ್ಲದ ಪ್ರದೇಶಗಳಿಗೆ ನೀವು ಕಬ್ಬಿನ ಕಾರ್ಖಾನೆಯನ್ನು ಕೊಟ್ಟಿದ್ದರಿಂದ ಅವುಗಳು ಫೇಲ್ ಆಗಿವೆ.

೨-೦೦ ಪಿ. ಎಂ.

ನಾವು ಕೊಟ್ಟಿದ್ದನ್ನು ನೀವು ಅನುಭವಿಸುವಂತಹ ಕಾಲ ಬಂದಿದೆ. ಎಂದು ನೀವು ಹೇಳಬಹುದು ನಾವು ಮಾಡಿದ್ದು ಹೀಗಾಯಿತು ಎಂದು ಹೇಳುತ್ತಾರೆ ತಪ್ಪು ಯಾರು ಮಾಡಿದರೂ ಕೂಡ ತಪ್ಪೇ. ಮಾನ್ಯ ಮೊಯಿಲಿಯವರು ಮಾಡಿದರೂ ತಪ್ಪೇ, ಕೆ. ಹೆಚ್. ಪಾಟೀಲ್‌ರವರು ಮಾಡಿದರೂ ತಪ್ಪೇ ಲಕ್ಷ್ಮೀಸಾಗರ್‌ರವರು ಮಾಡಿದರೂ ತಪ್ಪೇ. ಇವತ್ತು ಕೋ–ಆಪರೇಟೀವ್ ಇಂಡಸ್ಟ್ರೀಗಳು ಫೇಲ್ ಆಗುತ್ತಿವೆ ಆದರೆ ಸಂಕೇಶ್ವರ ಆಗಲಿಲ್ಲ. ಹಿಂದೆ ಷೇರ್ ಅನ್ನು ಕೊಡುವಾಗ ಜನತಾ ಪಕ್ಷದವರು ನನ್ನನ್ನು ಆಯೋಗದ ಎದುರಿಗೆ ನಿಲ್ಲಿಸಿದಿರಿ ಆದರೆ ಇವತ್ತು ಗದಗ್ ಟೆಕ್ಸ್‌ಟೈಲ್ ಮಿಲ್ ಶಮ್ಮ ಷೇರ್ ಹಣವನ್ನು ಪೂರ್ತಿಯಾಗಿ ಕೊಟ್ಟಿದ್ದೂ ಅಲ್ಲದೆ ಒಂದು ಕೋಟಿ ರೂಪಾಯಿಗಳ ಟ್ಯಾಕ್ಸ್ ಕೊಡುತ್ತಿದೆ. ಎಲೆಕ್ಟ್ರಿಸಿಟಿಗೆಂದು ಏಳೆಂಟು ಲಕ್ಷ ರೂಪಾಯಿ ತಿಂಗಳಿಗೆ ಕೊಡುತ್ತಿದೆ ಇದಲ್ಲದೆ ರೈತರಿಗೆ ಸರ್ವ ವಿಧದ ಸಹಾಯ ಮಾಡುತ್ತಿದೆ ಅಲ್ಲಿ ಏಕೆ ಈ ಇಂಡಸ್ಟ್ರಿ ಫೇಲ್ ಆಗಿಲ್ಲ, ಇಲ್ಲಿ ಬ್ರಹ್ಮನ ಮಕ್ಕಳು ಇದ್ದಾರೆಯೇ ? ಹತ್ತಿ ಬೆಳೆಯುವಂತಹ ಪ್ರದೇಶದಲ್ಲಿ ಹತ್ತಿ ಬೆಳೆಗಾರರನ್ನು ಹೊಂದಾಣಿಕೆ ಮಾಡಿಕೊಂಡು ಅಲ್ಲಿಗೆ ಟೆಕ್ಸ್‌ಟೈಲ್ ಮಿಲ್ ಅನ್ನು ಕೊಟ್ಟರೆ ಸಕ್ಸಸ್ ಆಗುತ್ತದೆ ಅದನ್ನು

ಬಿಟ್ಟು ಬೇರೆಲ್ಲಿಗೋ ಈ ಟೆಕ್ಸ್‌ಟೈಲ್ ಅನ್ನು ಕೊಟ್ಟರೆ ಫೇಲ್ ಆಗುತ್ತದೆ ಮಂಗಳೂರಿನಲ್ಲಿ ಟೆಕ್ಸ್‌ಟೈಲ್ ಮಿಲ್ ಹಾಕುವುದಕ್ಕಾಗುತ್ತದೆಯೇ ? ಹಾಸನದಲ್ಲಿ ಪೊಟ್ಯಾಟೋ ಫ್ಯಾಕ್ಟರಿಯನ್ನು ಹಾಕಬೇಕು ಕೋಲಾರದಲ್ಲಿ ಟಮೋಟೋ ಫ್ಯಾಕ್ಟರಿಯನ್ನು ಹಾಕಬೇಕಾಗುತ್ತದೆ ತಾವು ಅಗ್ರಿಕಲ್ಚರ್‌ನಲ್ಲಿ ಆಸ್ತೆ ಇದ್ದವರು ರೈತರ ಬೆನ್ನೆಲುಬಾಗಿ ನಿಂತವರು ರೈತರಿಗೆ ಒಳ್ಳೆಯ ಯೋಜನೆಗಳನ್ನು ಅಂದರೆ ಕೃಷಿ ಸಂಯೋಜಿತವಾದಂತಹ ಯೋಜನೆಗಳನ್ನು ಪ್ರಾರಂಭ ಮಾಡಿದ್ದೀರೋ ಏನು ಎಂದು ನೋಡಿದರೆ ಸರಿಯಾಗಿ ಮಾಡಿಲ್ಲ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಇದೆ ಅದನ್ನು ಪ್ರತಿಯೊಂದು ಊರಿನಲ್ಲೂ ಸಹ ಮಾಡಿದರೆ ಎಷ್ಟು ಅನುಕೂಲವಾಗುತ್ತದೆ ಅದನ್ನು ಏಕೆ ಮಾಡಲಿಲ್ಲ ? ಶಿವಮೊಗ್ಗದಲ್ಲಿ ಗೊಬ್ಬರವನ್ನು ತೆಗೆದುಕೊಳ್ಳಲು ಹಣ ಕೊಟ್ಟಿದ್ದೀರಿ ಆದರೆ ಆ ಹಣ ಇನ್ನೂ ವಸೂಲಾಗಿಲ್ಲ ಇದರಿಂದಾಗಿ ಅದು ಲಾಸ್ ಆಗುವ ಸಾಧ್ಯತೆ ಇದೆ. ಮತ್ತು ನಿಮ್ಮ ಅಧಿಕಾರಿಗಳು ಇದನ್ನು ವಸೂಲು ಮಾಡಲು ನಿಷ್ಕ್ರಿಯರಾಗಿದ್ದರೆ ಅವರು ತಿನ್ನದಿದ್ದರೆ ಅದೇಂದ್ರೂ ಲುಕ್ಸಾನ್ ಆಗುವುದಕ್ಕೆ ಸಾಧ್ಯವಿಲ್ಲ. ಆದರೆ ದುರ್ದೈವದಿಂದ ಅದಕ್ಕೆ ಬೇಕಾದಂತಹ ವ್ಯವಸ್ಥೆ ಸರಿಯಾಗಿಲ್ಲ ಆ ವ್ಯವಸ್ಥೆ ಸರಿಯಾಗಿಯಾಗಬೇಕು ಇದಕ್ಕೆ ತಾವು ಹೆಚ್ಚು ನಿಗಾವನ್ನು ವಹಿಸಬೇಕು ಎಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಹೇಳುವುದೇ ಬೇಡ ಕೆ.ಇ.ಬಿ. ಗೆ ಹೋದರೆ ಮ್ಯೂಜಿಯಂ ಎನ್ನುತ್ತದೆ, ನರಕಯಾತನೆಯಾಗುತ್ತದೆ ಷಾಕ್ ಹೊಡೆಯುತ್ತದೆಂದು ಹೇಳುತ್ತಿಲ್ಲ ಷಾಕ್ ಹೊಡೆದರೆ ಸಾಯುತ್ತೇವೆ ಇಲ್ಲವೇ ಏನೋ ಆಗುತ್ತದೆ ಅದು ಬೇರೆ ವಿಚಾರ ಇಲ್ಲಿ ಬೆಂಗಳೂರಿನಲ್ಲಿ ೬ ರಿಂದ ಏಳೂವರೆ ಗಂಟೆಯವರೆಗೆ ವಿದ್ಯುತ್ ಬಂದ್ ಆಗುತ್ತದೆ. ಕಳ್ಳರಿಗೂ ಇವರಿಗೂ ಶಾಮೀಲು ಇದೆಯೋ ಏನೋ ನನಗಂತೂ ಗೊತ್ತಿಲ್ಲ ಬೆಂಗಳೂರಿನಲ್ಲೇ ಈ ರೀತಿಯಾದರೆ ಬೇರೆ ಕಡೆ ಅಂತೂ ಹೇಳುವ ಹಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಜಾಲಪ್ಪನವರೇ ನಿಮ್ಮ ಮೇಲೆ ಬಹಳ ಪ್ರೀತಿಯಿಟ್ಟು ಏನೋ ಹೇಳುತ್ತಿದ್ದಾರೆ ನೀವು ಕೇಳುವುದಿಲ್ಲವಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಮಾತನಾಡುತ್ತಿದ್ದಾರೆಂದು ನಾನು ಒಳಕೆ ಬಂದೆ.

ಶ್ರೀ ಕೆ. ಹೆಚ್. ಪಾಟೀಲ್.—ಕೆ. ಇ. ಬಿ ಯವರು ಇದರ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಕತ್ತಲಿನಲ್ಲಿಯೇ ಏಕೆ ಎಲೆಕ್ಟ್ರಿಸಿಟಿಯನ್ನು ಬಂದ್ ಮಾಡುತ್ತಾರೆ ನೀವು ಬೇಕಾದರೆ ನೋಡಿ ಆಗಲೇ ಕಳವು ಜಾಸ್ತಿಯಾಗುತ್ತದೆ. ಅಡಿಗೆ ಮಾಡುವ ಸಮಯಕ್ಕೆ ಮತ್ತು ಕತ್ತಲಾಗುವ ಸಮಯಕ್ಕೆ ನೀವು ಬಂದ್ ಮಾಡಿದರೆ ಹೆಣ್ಣು ಮಕ್ಕಳು ಯಾವ ರೀತಿಯಾದ ಕಷ್ಟವನ್ನು ಅನುಭವಿಸುತ್ತಾರೆಂಬುದನ್ನು ನಿಗಾವಹಿಸಿ ನೋಡಬೇಕು. ಇನ್ನೊಂದು ತಮ್ಮ ನಜರಿಗೆ ಬಂದಿಲ್ಲ ನಾನು ಹೇಳುತ್ತೇನೆ ಕೇಳಿ ? ಈಗ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಏಳೂವರೆ ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಇಡಬೇಕೆಂದು ಹೇಳಿದ್ದರೆ ಹುಲಕೋ ಮಿಲ್‌ನವರು ಒಂದು ತಿಂಗಳ ಅಡ್ವಾನ್ಸ್ ಅನ್ನು ಇಟ್ಟಿದ್ದರು ಈಗ ಮೂರು ತಿಂಗಳ ಹಣವನ್ನು ಅಡ್ವಾನ್ಸ್ ಹಣವನ್ನು ಆಗಿ ಇಡಬೇಕು ಎಂದು ಕೇಳುತ್ತಿದ್ದಾರೆ. ಕೆ. ಇ. ಬಿ. ಯವರು ಸರಕಾರಕ್ಕೆ ಕೊಡುವಂತಹ ಹಣವನ್ನು ಕೊಟ್ಟಿಲ್ಲ ಆದರೆ ನಮ್ಮ ಹಣ ಮಾತ್ರ ಅಲ್ಲಿ ನಾವು ಇಡಬೇಕು ಎಂದು ಕೇಳಿದರೆ ಹೇಗೆ ? ಇವತ್ತು ಸರಕಾರ ಕಣ್ಣು ತೆಗೆಯಲಿ ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಳೂವರೆ ಲಕ್ಷ ಇದ್ದುದನ್ನು ೨೨ವರೆ ಲಕ್ಷ ರೂಪಾಯಿ ಕೊಡಿ ಎಂದು ಇವತ್ತು ಕೆ. ಇ. ಬಿ. ಯವರು ಕೇಳುತ್ತಿದ್ದಾರೆ. ಕೋಟಿಗಟ್ಟಲೆ ಬಾಕಿ ಇದ್ದವರನ್ನು ಮಾತ್ರ ಇವರು ಕೇಳುವುದಿಲ್ಲ ಅವರು ಸ್ಟೇ ತರುವ ಹಾಗೆ ಮಾಡಿದ್ದರೂ ಕೂಡ ಅದಕ್ಕೆ ಅವಕಾಶ ಕೊಟ್ಟು ಮುಂದೆ ಹೋಗುತ್ತಾರೆ ಇದರಿಂದಾಗಿ ಇವತ್ತು ಗುಜರಾತ್, ಮಹಾರಾಷ್ಟ್ರದಲ್ಲಿ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಯಾವ ಸೌಲಭ್ಯಗಳನ್ನು ಕೊಟ್ಟಿದ್ದಾರೆ ಆ ಸೌಲಭ್ಯಗಳು ನಮ್ಮಲ್ಲಿ ಇಲ್ಲ, ಅದನ್ನು ನಮ್ಮಲ್ಲಿ ಮಾಡಬೇಕು. ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಸಾಲದ ರೂಪದಲ್ಲಿ ಹಣ ಕೊಡುತ್ತಾರೆ. ಅವರು ಪುಕ್ಸಾಟೆ ಏನೂ ಕೊಡುವುದಿಲ್ಲ. ಗ್ರ್ಯಾಂಟ್‌ನಿಂದ ಕೊಡುತ್ತಾರೆ. ಬಹುಭಾಗವನ್ನು ಅವರು ಸಾಲವಾಗಿ ಕೊಡುತ್ತಾರೆ. ಈ ಸಾಲದ ಹಣವನ್ನು ತೆಗೆದುಕೊಂಡು ಸಹಕಾರೀ ಸಂಘದ ಇಂಡಸ್ಟ್ರಿ ಸ್ಟಾರ್ಟ್ ಮಾಡಲಿಕ್ಕೆ ಅನುಕೂಲವಾಗುತ್ತದೆ. ಆದರೆ ದುರ್ದೈವದಿಂದ ನಮ್ಮಲ್ಲಿ ಮಾಡಲಿಕ್ಕೆ ಯಾರೂ ಪ್ರಯತ್ನವನ್ನು ಮಾಡಲಿಲ್ಲ. ಆದಕ್ಕಾಗಿ ಇದರ ಬಗ್ಗೆ ಬೇರೆ ಒಂದು ಖಾತೆಯನ್ನು ಮಾಡಿ ಅಥವಾ ಸರ್ಕಾರಿ ರಿಜಿಸ್ಟ್ರಾರ್ ಅವರನ್ನು ತೆಗೆದು ಬೇರೆ ಒಬ್ಬ ಅಧಿಕಾರಿಯನ್ನೇ ನೇಮಿಸಿ ಅವನನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನ ಕಕ್ಷೆಯಿಂದಲೇ ದೂರ ಮಾಡಿ ನೇರವಾದಂಥ ಹಣವನ್ನು ಅವರು ಪಡೆದುಕೊಂಡು ಕೊಡುವ ಹಾಗೆ ಆಗಬೇಕು. ಒಂದು ಕೋಟಿ ರೂಪಾಯಿ ಮಂಜೂರು ಆದರೆ ಫೈನಾನ್ಸ್ ಡಿಪಾರ್ಟ್

ಮೆಂಟ್‌ನವರೇ ಏಳು ತಿಂಗಳು ಬಳಸಿಕೊಳ್ಳುತ್ತಾರೆ. ಅವರಿಗೆ ಹಣವನ್ನು ಕೊಡುವುದಿಲ್ಲ. ಒಂಭತ್ತು ತಿಂಗಳು ಆದಮೇಲೆ ಅವರಿಗೆ ಹಣವನ್ನು ಕೊಡುತ್ತಾರೆ. ಆ ಹಣವನ್ನು ಇವರೇ ತೆಗೆದುಕೊಂಡಿದ್ದರೂ ಕೂಡಾ ಅವಕ್ಕೆ ಬಡ್ಡಿಯನ್ನು ಇವರು ಕಟ್ಟಬೇಕಾಗುತ್ತದೆ. ಸಹಕಾರ ಸಂಘದ ಬಗ್ಗೆ ಹೀಗಿದ್ದರೂ ಟೀಕೆಯನ್ನು ಮಾಡುತ್ತೀರಿ ಅದನ್ನು ತಪ್ಪಿಸಬೇಕು. ಅದಕ್ಕಾಗಿ ಒಬ್ಬ ಅಧಿಕಾರಿಯನ್ನೇ ಅಥವಾ ಖಾತೆಯನ್ನೇ ಬೇರೆ ಮಾಡಿ ಅಲ್ಲಿ ಸರಿಯಾದ ರೀತಿ ವಿತರಣೆ ಮಾಡಬೇಕು. ಇವತ್ತು ಕೆ. ಇ. ಬಿ ಬೋರ್ಡ್‌ನವರಿಗು ಗುಜರಾತ್ ಮತ್ತು ಉಳಿದ ರಾಜ್ಯಗಳಲ್ಲಿ ಸೌಲಭ್ಯಗಳನ್ನು ಕೊಡುವ ಹಾಗೆ ನಮ್ಮ ಸಹಕಾರ ಸಂಘಗಳಿಗೆ ಕೊಡುವಂಥ ರೀತಿಯಲ್ಲಿ ಆಗಬೇಕು, ನಿಮಗೂ ಟ್ಯಾಕ್ಸ್ ಬರುತ್ತದೆ, ನಮಗೂ ಕೆಲಸ ಆಗುತ್ತದೆ, ಮತ್ತು ಉದ್ಯೋಗ ಕೂಡ ಬೆಳೆಯುತ್ತದೆ ಮತ್ತು ಇದರ ಬಗ್ಗೆ ಇರುವ ಕೆಟ್ಟ ಹೆಸರೂ ಕೂಡ ಬರುತ್ತದೆ. ಇವತ್ತು ಸಹಕಾರ ಸಂಘಗಳಲ್ಲಿ ಲುಕ್ಸಾನು ಆಗಿದೆ ಎಂದು ಗೊಬೆಯನ್ನು ಕೂಡಿಸಿ ಸಹಕಾರ ಸಂಘದಲ್ಲಿ ಅನೇಕ ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ಅಲ್ಲಿ ಒಂದೊಂದಾಗಿ ತನಿಖೆಯನ್ನು ಮಾಡಲು ಹೋದರೆ, ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಯಾರು ? ಛೇರ್ಮನ್‌ರವರು ಯಾರು ? ಎಂದು ಹುಡುಕಿದರೆ ಅಲ್ಲಿ ನಿಮ್ಮವರೇ ಇದ್ದಾರೆ. ಅವರನ್ನು ಮುಟ್ಟುವವರೇ ಇಲ್ಲ. ಒಮ್ಮೊಮ್ಮೆ ಜಾಲಪ್ಪನವರು ಮತ್ತು ಏಕಾಂತಯ್ಯನವರು ಅಧಿಕಾರಸ್ಥರು ಯಾರೇ ಇರಲಿ ಅವರ ಮೇಲೆ ಹಿಂದುಮುಂದು ನೋಡದೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಡಿ. ಸಿ. ಅವರೇ ಛೇರ್ಮನ್ ಅಂಥ ಸಂದರ್ಭದಲ್ಲಿ ವಿಶೇಷ ಹಾನಿಗೀಡಾಗಿರುವುದನ್ನು ನೋಡಿದ್ದೇವೆ. ಅವರನ್ನು ನಿಮ್ಮ ಕೈಯಲ್ಲ ಸಸ್ಪೆಂಡ್ ಮಾಡುವುದಕ್ಕೆ ಆಗುತ್ತದೆಯೇ ? ಅಲ್ಲಿ ಬೇರೆ ಯಾರೇ ಇದ್ದರೂ ಗಾಳಪ್ಪನೋ ಕಟ್ಟಪ್ಪನೋ ಇದ್ದರೆ ಇಮ್ಮಿಡಿಯೇಟ್ ಆಗಿ ಅವನನ್ನು ಸಸ್ಪೆಂಡ್ ಮಾಡುತ್ತೀರಿ. ಅದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ ರಾಜಕೀಯ ಒತ್ತಾಯ ಮಾಡುತ್ತಾರೆ. ಆದ್ದರಿಂದ ಇದರ ಬಗ್ಗೆ ಆತ್ಮ ವಿಶ್ವಾಸದಿಂದ ಯಾರೇ ಇದ್ದರೂ ಅವರ ಬಗ್ಗೆ ವಿಚಾರ ಮಾಡಬೇಕು ಸಹಕಾರ ಸಂಘದಲ್ಲಿ ಮೂರು ಮಂದಿ ಎಲೆಕ್ಟೆಡ್ ಇದ್ದರೆ ಒಂಭತ್ತು ಮಂದಿ ನಾಮಿನೇಟೆಡ್ ಇರುತ್ತಾರೆ. ಇಷ್ಟು ಜನ ಇದ್ದರೂ ಅಲ್ಲಿ ಲುಕ್ಸಾನು ಆಗುತ್ತದೆ ಎಂದು ಹೇಳಿದರೆ ಹೇಗೆ ? ಇದರಲ್ಲಿ ತನಿಖೆಯನ್ನು ಮಾಡಿದರೆ ಪ್ರತಿಯೊಂದೂ ಹೊರಗೆ ಬರುತ್ತದೆ, ಇದರಲ್ಲಿ ಯಾವ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ, ಯಾವ ಅಧಿಕಾರಿಗಳಿಂದ ಈ ರೀತಿ ನಷ್ಟವಾಗಿದೆ, ಅವರ ಕೈಯಲ್ಲಿಯೇ ಈ ನಷ್ಟವನ್ನು ತುಂಬಬೇಕು ಎಂದು ಮಾಡಿದರೆ ಅರ್ಧ ಮಂದಿ ಕೆಲಸ ಬಿಡಬೇಕಾದಂಥ ಪರಿಸ್ಥಿತಿ ಬರುತ್ತದೆ. ಇದನ್ನು ದಯವಿಟ್ಟು ಸರಿಯಾಗಿ ನೋಡಿಕೊಳ್ಳಿ ಎನ್ನುವ ಮಾತನ್ನು ತಮಗೆ ಹೇಳುತ್ತೇನೆ. ಪಗಾರದ ಬಾಬ್ತನ್ನು ಹೇಳುವುದಾದರೆ ಸೆಂಟ್ರಲ್‌ನವರು ಏರಿಸುತ್ತಾರೆ ಎಂದು ಹೇಳಿದರೆ ನೀವು ಏರಿಸುತ್ತೀರಿ. ಇಲ್ಲಿ ನಮ್ಮ ಉಳಿದ ಕೆಲಸ ಏರುವುದಿಲ್ಲ ಸರ್ಕಾರಿ ನೌಕರರ ಬಗ್ಗೆ ಚಿಂತನೆ ಬಿಡಿ. ಇಪ್ಪತ್ತೆಂದು ತೆಗೆದುಕೊಂಡರೂ ನಿವೃತ್ತಿ ಆಗುವತನಕ ಹೋಗುವುದಿಲ್ಲ. ಇನ್ನು ಮುಂದೆ ಹೊಸ ಸ್ಕೇಲ್ ತಯಾರು ಮಾಡಿ ೫೦೦ ರೂಪಾಯಿಯಿಂದ ಒಂದು ಸಾವಿರ ರೂಪಾಯಿಗಳಿಗೆ ಸ್ಕೇಲ್ ಫಿಕ್ಸ್ ಮಾಡಿ, ಸಹಸ್ರಾರು ಜನ ಬರುತ್ತಾರೆ. ಸರ್ಕಾರಿ ನೌಕರರು ಸಂಪು ಮಾಡಿದಾಗ ಮನೆಗೆ ಅದನ್ನು ಕಳುಹಿಸಿ ಇವರನ್ನು ಕುರ್ಚಿಯಲ್ಲಿ ಕೂಡಿಸಿ, ಆಗ ಎಫಿಸಿಯೆನ್ಸಿ ಬರುತ್ತದೆ. ನಿಮ್ಮ ದಕ್ಷತೆ ಹೆಚ್ಚಾಗುತ್ತದೆ ಮತ್ತು ನೀವು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಎಲ್ಲಿ ಕೆಲಸ ಇದೆ, ಅಲ್ಲಿ ಇಂಥ ಯುವಕರಿಗೆ ಸರ್ವೀಸ್ ಕೊಡಿ ಒಂದು ಮಾತನ್ನು ಹೇಳುತ್ತೇನೆ ಇನ್ನು ಅನೇಕ ಮಾತುಗಳನ್ನು ಹೇಳಬೇಕೆಂದಿದ್ದರೂ ಸಹಿತ ನಾನು ವಿವಿಧ ಇಲಾಖೆಗಳ ಬೇಡಿಕೆ ಬಂದಾಗ ಅದರ ಮೇಲೆ ಮಾತನಾಡುತ್ತೇನೆ. ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು —ಚರ್ಚೆ ನಾಳೆ ಬೆಳಿಗ್ಗೆ ೯ ಗಂಟೆಗೆ ಮುಂದುವರಿಯುವುದು ೧೧ ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಇಂದಿನ ಸಭೆಯನ್ನು ನಾಳೆ ಬೆಳಿಗ್ಗೆ ೯ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ೭–೦೮ ಗಂಟೆಗೆ ಮುಕ್ತಾಯವಾಗಿ ಮತ್ತೆ ದಿನಾಂಕ 29–3-1980ರಂದು ಬೆಳಿಗ್ಗೆ ೯ ಗಂಟೆಗೆ ಮತ್ತೆ ಸಭೆಯು ಸಮಾವೇಶಗೊಳ್ಳಲು ನಿರ್ಧರಿಸಿತು)